॥ ಪ್ರಸೀದತು ಶ್ರೀ ವೀರಾಂಜನೇಯಃ ॥

# ಹೇಮಪುರ

ಶ್ರೀಕ್ಷೇತ್ರ ಬಂಗಾರಮಕ್ಕಿಯಿಂದ ಹೊರಬರುವ ಧಾರ್ಮಿಕ, ಪಾರಮಾರ್ಥಿಕ, ನೈತಿಕ ಹಾಗೂ ಲೋಕ ಹಿತಚಿಂತನೆಗಳ ಮಾಸಪತ್ರಿಕೆ

# HEMAPURA

**Shri Kshethra Bangaramakki**
**Post Gerasoppa - 581 384**
**Honnavara Taluk, Uttara Kannada Dist.**

ಗೌರವ ಸಂಪಾದಕರು:
**ಪ.ಪೂ. ಶ್ರೀ ಮಾರುತಿ ಗುರೂಜಿಯವರು**
ಧರ್ಮಾಧಿಕಾರಿಗಳು
ಶ್ರೀಕ್ಷೇತ್ರ ಬಂಗಾರಮಕ್ಕಿ

ಸಂಪಾದಕರು:
**ತೇಜಸ್ವಿ**

ಸಲಹೆಗಾರರು:
**ಶ್ರೀ ರಾಮಚಂದ್ರ ಭಟ್ಟರು, ಶ್ರೀಕ್ಷೇತ್ರ ಬಂಗಾರಮಕ್ಕಿ**
**ಶ್ರೀ ರವೀಶ, ವಕೀಲರು, ಸಾಗರ**
**ಶ್ರೀ ನಾಗರಾಜ್ ನಾಯಕ್, ವಕೀಲರು, ಕಾರವಾರ**
**ಶ್ರೀ ನಾಗರಾಜ್ ಶೇಟ್, ಶಿರಸಿ**
**ಶ್ರೀ ಭೋಗಾನಂದ, ಶಿವಮೊಗ್ಗ**
**ಶ್ರೀ ಪ್ರವೀಣ್, ಬೆಂಗಳೂರು**
**ಶ್ರೀ ಜಿ.ಎಚ್. ನಾಯ್ಕ್, ಹೊನ್ನಾವರ**
**ಶ್ರೀ ಕೆ. ಮನೋಹರ್, ಬೆಂಗಳೂರು**
**ಶ್ರೀ ಡಿ.ಎಂ. ಸತೀಶ್, ತುಮಕೂರು**

ವಿನ್ಯಾಸ, ಅಕ್ಷರ ಜೋಡಣೆ ಮತ್ತು ಸಲಹೆಗಾರರು:
**ಶ್ರೀ ವೀರಾಂಜನೇಯ ಪ್ರಕಾಶನ**
ಶ್ರೀಕ್ಷೇತ್ರ ಬಂಗಾರಮಕ್ಕಿ, ಪೋ: ಗೇರಸೊಪ್ಪಾ-581 384.
ತಾ: ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ.
ದೂ: 08387-268544, 268333, 268545

ಮುದ್ರಕರು:
**ಸಾಯಿನಾಥ ಗ್ರಾಫಿಕ್ಸ್, ಬೆಂಗಳೂರು**

## ಒಳಪುಟಗಳಲ್ಲಿ

ಸಚ್ಚಿಂತನ ........ 2
ಸಂಪಾದಕೀಯ ........ 3
ವಕಾಲತ್ ........ 4
ಮಧುರ ಪ್ರಕಾಶನದ ಸೌಜನ್ಯದೊಂದಿಗೆ ........ 5
ಕವನ - ಗಿಳಿ ........ 7
ಶ್ರೀಧರ ಸ್ಮರಣೆ ........ 8
ಶ್ರೀರಾಮ ಕಥಾಸಾರ ........ 8
ಸಂಪ್ರದಾಯ ........ 9
ಪರಮೇಶ್ವರನ ಇಪ್ಪತ್ತೈದು ಲೀಲೆಗಳು ........ 11
ಮಹಾಕ್ಷತ್ರಿಯ ........ 12
ಬದುಕಲೊಂದಿಷ್ಟು ಆಪ್ತಮಾತುಗಳು ........ 14
ಧರೆಗಿಳಿದ ದಿವ್ಯತೇಜ ........ 15
ಕಗ್ಗದ ಬೆಳಕಿನಲ್ಲಿ ........ 17
ವಚನಭಾಗವತ ........ 19
ಆನೋ ಭದ್ರಾಃ ಕೃತವೋಯಂತು ವಿಶ್ವತಃ ........ 21
ಸುಂದರಕಾಂಡದ ಸೌಂದರ್ಯ ........ 22
ಕವನ - ಮನೆ ಮನ ಬೆಳಗುವ ಹೆಣ್ಣು ಹಣತೆ .... 22
ಆಮಂತ್ರಣ - "ಕಲ್ಪವಾಸ" ........ 23
ಪದಬಂಧ-42 ........ 24

**ಹೇಮಪುರ ಘನ ಗಂಭೀರ**

ಘನವಂತ ಬಲವಂತ ಇಷ್ಟಾರ್ಥ ದಾತ
ಭಕ್ತವತ್ಸಲನೆಂಬ ಬಿರುದು ಹೊತ್ತಾತ
ವೀರಾಂಜನೇಯನಿವ ತನ್ನ ಸೇವಿಸುವ
ಭಕ್ತರನು ಉದ್ಧರಿಸಿ ಗುರಿಯ ಮುಟ್ಟಿಸುವ.

卐

ದರ್ಶನದ ಲಾಭವಿದೆ ತಾಪಕಿದೆ ಪರಿಹಾರ
ಹರ್ಷವೇ ಮೈವೆತ್ತಿ ನರ್ತಿಸುವುದಿಲ್ಲಿ
ಆಕರ್ಷಣೀಯವಹ ಲೋಕಹಿತ ಕಾರ್ಯಗಳ
ವರ್ಷದುದ್ದಕು ನಡೆಸುತಿಹನು ಮಾರುತಿಯು

**ಪ್ರಕಟಣೆ: ಪತ್ರಿಕೆಯು ಪ್ರಕಟವಾದ ಒಂದು ವಾರದಲ್ಲಿ ನಮ್ಮ ಅಂತರ್ಜಾಲದಲ್ಲೂ ಲಭ್ಯ www.bangaramakki.org**



ಸಸ್ಯ ಶಾಸ್ತ್ರದ ಪಿತಾಮಹರು – ಜಗದೀಶ್ ಚಂದ್ರಬೋಸ್

# ಧರ್ಮತತ್ತ್ವದ ನೆಲೆಯಲ್ಲಿ ಕರುಣೆಯ ನಡಿಗೆ....



ಜಗತ್ತಿನಲ್ಲಿ ನಮ್ಮ ಈ ಕಾಲವನ್ನು ವಿಜ್ಞಾನಯುಗ, ಬುದ್ಧಿಪ್ರಧಾನಕಾಲ ಎಂದು ಹೇಳುತ್ತೇವೆ. ಒಂದು ಪಕ್ಕದಲ್ಲಿ ಬುದ್ಧಿ ಪ್ರಬಲವಾಗಿದ್ದರೆ ಇನ್ನೊಂದು ಪಕ್ಕದಲ್ಲಿ ಮನಸ್ಸು ದುರ್ಬಲವಾಗಿಯೂ ಇದೆ. ಕಷ್ಟ ಬೇಡವೆನ್ನುತ್ತದೆ ನಮ್ಮ ಕಾಲ. ಕಷ್ಟವಾದದ್ದು ಬೇಡ, ಎಲ್ಲ ಸುಲಭವಾದದ್ದು ಇರಲಿ– "ಸುಲಿದ ಬಾಳೆಯಹಣ್ಣಿನಂದದಿ". ಇದು ಈಗಿನ ಮನೋಗತ.

ಇದರಲ್ಲಿ ಕರುಣೆ ಒಂದು ಬಗೆಯ ಮನೋವಿಕಾರ. ಅದು ನಮ್ಮ ಒಳಗಿನಿಂದ ತಾನಾಗಿ ಹುಟ್ಟತಕ್ಕದ್ದು. ಹೊರಗಣ ಬಲಾತ್ಕಾರವಾಗಲಿ, ಪ್ರೇರಣೆಯಾಗಲಿ ಅದಕ್ಕೆ ಬೇಕಿಲ್ಲ. ಭವಭೂತಿ ಹೇಳಿದಂತೆ:–

ವ್ಯತಿಷಜತಿ ಪದಾರ್ಥಾನಾನ್ತರಃ ಕೋಽಪಿ ಹೇತುಃ।
ನಖಲುಬಹಿರುಪಾಧೀನ್ ಪ್ರೀತಯಸ್ಸಂಶ್ರಯನ್ತೇ॥

"ಒಬ್ಬರನ್ನೊಬ್ಬರಿಗೆ ಪ್ರೀತಿಯಿಂದ ಕಟ್ಟುವ ಸೂತ್ರ ಅವರ ಅಂತರಂಗದೊಳಗಿನ ಯಾವುದೋ ಒಂದು ಸಂಗತಿ. ಪ್ರೀತಿಯು ಹೊರಸಂದರ್ಭವನ್ನಾಶ್ರಯಿಸಿರುವುದಿಲ್ಲ" ಆ ಒಳಸಂಗತಿಯಾದರೋ ಪ್ರಕೃತಿಯಿಂದಾದದ್ದು. ಆ ಪ್ರಕೃತಿಕೃತವೆಂಬ ಒಂದು ಕಾರಣಮಾತ್ರದಿಂದ ಅಂಥಾ ಕೃಪೆಯುಕ್ತವೆಂದೂ ಹಿತಕರವೆಂದೂ ನಿಶ್ಚಯವಾಗದು. ಹಿತಾಹಿತ ನಿರ್ಣಯವು ವಿಚಾರದಿಂದಲೇ ಉಂಟಾಗಬೇಕಾದದ್ದು. ಕರುಣೆ ಹಾಗೆ ವಿಚಾರಶುದ್ಧವಾದದ್ದಲ್ಲ. ಅಂದರೆ ತತ್‌ಕ್ಷಣಮಾತ್ರದ ಸ್ವಾಭಾವಿಕ ಮನಃಪ್ರಚಲನೆ. ಅದೇ ಆತುರತೆ. ಅದು ನಂಬಿಕೆಗೆ ಸಾಲದು. ಅದರ ಜೊತೆಗೆ ವಿಷಯ ವಿಮರ್ಶನೆ ಸೇರಿ ಅದರಲ್ಲಿಯ ಅಶುದ್ಧತೆಗಳನ್ನು ಕಳೆಯಬೇಕು. ಹಾಗೆ ವಿವೇಕಸಿದ್ಧವಾದ ಮನಃಪ್ರಚಲನೆ ಕಾರ್ಯಾರ್ಹವಾಗುತ್ತದೆ. ಆದ್ದರಿಂದ ನಮ್ಮ ಕಾಲದ ಕರುಣೆಯು ಆತ್ಮದೌರ್ಬಲ್ಯ ಅಥವಾ ಮನಃಶೈಥಿಲ್ಯವಾಗಿದೆ.; ಪೌರುಷವಲ್ಲ. ಮನುಷ್ಯನ ಆತ್ಮವು ಬಲಿಷ್ಠವಾಗಬೇಕಾದರೆ ಅದರಲ್ಲೊಂದು ಕಷ್ಟಸಿದ್ಧತೆ ಇರಬೇಕು.

ನಾಯಮಾತ್ಮಾ ಬಲಹೀನೇನ ಲಭ್ಯಃ॥

ಧರ್ಮವು ಹೇಡಿಗೆ ಸಿಕ್ಕದು. ಧರ್ಮವು ಒಂದು ಧೀರತನವನ್ನು ಅಪೇಕ್ಷಿಸುತ್ತದೆ. ಯಾರು ಕಷ್ಟಪಡನೋ ಅವನ ಮೂಳೆ ಬಲಿಯದು. ಯಾರು ಯುದ್ಧಕ್ಕೆ ಸಿದ್ಧನಿಲ್ಲನೋ ಅವನು ಧರ್ಮವನ್ನು ಸಂರಕ್ಷಿಸಲಾರ.

ಯುದ್ಧಕಾರಣವು ಮನುಷ್ಯಸ್ವಭಾವದ ತಾಮಸರಾಜಸ ಗುಣಗಳು; ಸತ್ತ್ವಗುಣವಲ್ಲ. ಸತ್ತ್ವಾಧಿಕ್ಯವಿದ್ದಲ್ಲಿ ಕಲಹವಿರದು. ಕಲಹ ಹುಟ್ಟಿದರೂ ಅಲ್ಲಿ ಬೇಗ ತೀರಿಹೋಗುತ್ತದೆ. ರಜಸ್ಸು ತಮಸ್ಸುಗಳು ಹಾಗೆ ಮುಗಿಯುವುದಿಲ್ಲ. ಅವುಗಳಿಗೆ ಅರ್ಥವಾಗುವ ಭಾಷೆ ನಯವಲ್ಲ ದಂಡ. ಉದಾಹರಣೆಗೆ ದುರ್ಯೋಧನ ದುಶ್ಶಾಸನರು ಸತ್ತ್ವಪ್ರಧಾನರಲ್ಲ, ತಮಃ ಪ್ರಧಾನರು. ತಮಃ ಪ್ರಧಾನರಾದ ರಾಜರಿಗೆ ಯುದ್ಧವಲ್ಲದೇ ಬೇರೆ ಔಷಧವು ಪ್ರಯೋಜನಕ್ಕೆ ಬಾರದು. ಆದ್ದರಿಂದ ಅವರಿಗೆ ದಂಡಪ್ರಯೋಗದ ಹೊರತು ಬೇರೆ ತಿದ್ದುವ ಉಪಾಯವಿಲ್ಲವಾಯಿತು.

ಒಬ್ಬ ಪ್ರಾಜ್ಞರೆನ್ನುತ್ತಾರೆ– ದಯೆಯಿಲ್ಲದ ಧರ್ಮಯಾವುದಯ್ಯಾ? ಎಂದು. ಇನ್ನೊಬ್ಬರೆಂದರು– ಧರ್ಮವಿಲ್ಲದ ದಯೆ ಎಂಥದಯ್ಯಾ? ಎಂದು. ಹೀಗೆ ಧರ್ಮಸಾಧನೆಯಲ್ಲಿ ದಯೆಗೊಂದು ಸ್ಥಾನವಿದ್ದರೆ ದಂಡಕ್ಕೂ ಒಂದು ಸ್ಥಾನವಿರುತ್ತದೆ. ಧರ್ಮವನ್ನು ಉಳಿಸಹೊರಟವನಿಗೆ ಮೊದಲು ಬೇಕಾದ ಗುಣ ಎದೆಗಾರಿಕೆ. ಅನ್ಯಾಯವನ್ನೂ ಅಧರ್ಮವನ್ನೂ ಕಂಡಾಗ ಎದುರಿಸದೇ ಓಡಿಹೋಗುವೆನೆಂಬುವವನು ತೋರುವುದು ದಯೆಯನ್ನಲ್ಲ; ಅಧರ್ಮ ಪ್ರೋತ್ಸಾಹವನ್ನು. ಈ ಮನೋಭಾವ ಅದು ಸತ್ಪಾತ್ರ ಕರುಣೆಯಲ್ಲ, ದುಷ್ಪಾತ್ರ ಕರುಣೆ. ಕರುಣೆಗೆ ಪಾತ್ರಾಪಾತ್ರ ವಿವೇಕ ಉಂಟೆಂಬುದನ್ನು ಭಗವಂತನೇ ಸಾರಿ ಹೇಳಿದ್ದಾನೆ.

ದೇಶೇ ಕಾಲೇ ಚ ಪಾತ್ರೇಚ ತದ್ದಾನಂ ಸಾತ್ತ್ವಿಕಂ ಸ್ಮೃತಮ್॥

ವ್ಯಕ್ತಿಯ ಮನೋಗತದಲ್ಲಿ ಕರುಣೆ ಇದೆ ಹೌದು; ಆದರೆ ಅದರ ಸಂದರ್ಭ ತಕ್ಕುದಲ್ಲವಾಗಿದ್ದರೆ ಕರುಣೆಯ ಪ್ರಯೋಜನವಿಲ್ಲ. ಪಾಯಸ ಒಳ್ಳೆಯದು– ಬಾಯೊಳಕ್ಕೆ ಅಥವಾ ಹೊಟ್ಟೆಯೊಳಕ್ಕೆ; ಮೈಮೇಲಕ್ಕಲ್ಲ. ಈ ರೀತಿ ಸ್ಥಾನಾಸ್ಥಾನ ವಿವೇಕವೇ ಧರ್ಮಕ್ಕೆ ಮೂಲ.

ಕರುಣೆ ಮನುಷ್ಯ ಬಾಂಧವ್ಯಗಳಲ್ಲಿ ಬಹುದೊಡ್ಡ ವಸ್ತುವೇ ಸರಿ. ಆದರೆ ಅದಕ್ಕಿಂತ ದೊಡ್ಡದು ಧರ್ಮ. ಕರುಣೆಯ ವಿಷಯರಾದವರು ಲೋಕದಲ್ಲಿ ಕೆಲವು ಮಂದಿ ಮಾತ್ರ. ಧರ್ಮವು ಸಮಸ್ತ ಜಗತ್ತಿಗೂ ಅನ್ವಯವಾಗಬೇಕಾದದ್ದು. ಆದ್ದರಿಂದ ಕರುಣೆಯ ಯುಕ್ತಾಯುಕ್ತತೆಯನ್ನು ಧರ್ಮದ ದೃಷ್ಟಿಯಿಂದ ವಿವೇಚನೆ ಮಾಡಬೇಕು. ಧರ್ಮವು ನೂರಾರು ತತ್ತ್ವಗಳನ್ನು ಒಳಗೊಂಡಿರುತ್ತದೆ. ಅವುಗಳಲ್ಲಿ ಕರುಣೆ ಒಂದು ಮಾತ್ರ. ಧರ್ಮ ಮಾಡುವವನು ತನ್ನ ಕಾರ್ಯಸನ್ನಿವೇಶಗಳಲ್ಲಿ ಸಂಗತವಾದ ಇತರ ತತ್ತ್ವಗಳನ್ನೂ ವಿಚಾರಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

ಕರುಣೆಯು ಸ್ವಭಾವ ಸಿದ್ಧವಾದದ್ದು. ಧರ್ಮವು ವಿವೇಕ ಸಿದ್ಧವಾದದ್ದು. ಕರುಣೆಗೆ ಮೂಲವು ಪ್ರಕೃತಿ. ಧರ್ಮಕ್ಕೆ ಮೂಲವು ತತ್ತ್ವವಿಮರ್ಶೆ. ಧರ್ಮವನ್ನು ಬಿಟ್ಟ ಕರುಣೆ ಅನರ್ಥಕವಾದೀತು. ಆದ್ದರಿಂದ ಕರುಣೆಯ ಪ್ರವೃತ್ತಿ ಉಂಟಾದಾಗ ಧರ್ಮತತ್ತ್ವದ ದೀಪದ ಬೆಳಕಿನಲ್ಲಿ ಪರೀಕ್ಷಿಸಿ ಪರಿಷ್ಕಾರ ಮಾಡುವುದು ವಿಚಾರವಂತರಾದ ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಶ್ರೀ ರಾಮಸ್ಮರಣ
ಪರಮಪೂಜ್ಯ ಶ್ರೀ ಮಾರುತಿ ಗುರೂಜಿಯವರು
ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಬಂಗಾರಮಕ್ಕಿ



ಪಕ್ಷಿ ಶಾಸ್ತ್ರದ ಪಿತಾಮಹರು – ಸಲೀಂ ಅಲಿ

# ಅತಿಥಿ ಸತ್ಕಾರ

ನ ತಿಥೀ ಯಸ್ಯವಃ ಅತಿಥಿಃ. ಅತಿಥಿ ಎಂದರೆ ಯಾರು? ಯಾರು ಗೊತ್ತಿಲ್ಲದೇ, ಅನಿರೀಕ್ಷಿತವಾಗಿ ಬರುತ್ತಾರೋ ಅವರು ಅತಿಥಿಯಾಗುತ್ತಾರೆ. ಅಂತಹ ಅತಿಥಿಯನ್ನು ಕೂಡ ಗೌರವಿಸುವುದು ಅದು ಅತಿಥಿ ಸತ್ಕಾರ. ಸತ್ಕಾರ ಎಂದರೇನು? ಸತ್ ಕ್ರಿಯತೆ. ಒಳ್ಳೆಯದನ್ನು ಮಾಡುವುದು. ಜೀವನದಲ್ಲಿ ಅನಿರೀಕ್ಷಿತವಾಗಿ ಬಂದವರಿಗೆ ಒಳ್ಳೆಯದನ್ನು ಮಾಡುವುದು. ಮನುಸ್ಮೃತಿಯಲ್ಲಿ ಅತಿಥಿ ಸತ್ಕಾರದ ಬಗ್ಗೆ ಈ ರೀತಿ ಉಲ್ಲೇಖಿಸಿದೆ:

ಸಂಪ್ರಾಪ್ತಾಯ ತ್ವತಿಥಯೇ ಪ್ರದದ್ಯಾದಾಸನೋದಕೇ।
ಅನ್ನಂ ಚೈವ ಯಥಾಶಕ್ತಿ ಸತ್ಕೃತ್ಯಾ ವಿಧಿಪೂರ್ವಕಂ॥

ಮನೆಗೆ ಬಂದ ಅತಿಥಿಯನ್ನು ವಿಧಿಪೂರ್ವಕವಾಗಿ ಸತ್ಕರಿಸಿ, ಆಸನವನ್ನಿತ್ತು ನೀರನ್ನು ಕೊಟ್ಟು ನಂತರ ತನ್ನ ಶಕ್ತ್ಯಾನುಸಾರ ಉಣಬಡಿಸಬೇಕು.

ಹೀಗೆ ಬಂದ ಅತಿಥಿಗಳನ್ನು ಗೌರವದಿಂದ ಸತ್ಕರಿಸಬೇಕು ಎನ್ನುವ ರೂಢಿ ಪ್ರಾಚೀನ ಕಾಲದಿಂದ ಬಂದಿದೆ. ಅತಿಥಿದೇವೋಭವ, ಮಾತೃದೇವೋಭವ, ಪಿತೃದೇವೋಭವ ಎನ್ನುವ ವಾಣಿ ಕೇಳುತ್ತೇವೆ. ಅಂದರೆ ಅತಿಥಿಗಳಲ್ಲಿ ದೇವತ್ವವನ್ನು ಕಾಣುವಂತಾಗಬೇಕು. ಹೀಗೆ ಅನಿರೀಕ್ಷಿತವಾಗಿ ಅಪರಿಚಿತರಾಗಿ ಬಂದ ವ್ಯಕ್ತಿಯನ್ನು ಗೌರವದಿಂದ ಕಾಣುವ ಚಿಂತನೆ ನಮ್ಮದಾಗಬೇಕು.

ಆತ್ಮೀಯರಲ್ಲಿ ಭಿನ್ನಾಭಿಪ್ರಾಯ ಮೂಡುವ ಕಾಲವಿದು. ತಂದೆ–ತಾಯಿಯರನ್ನೇ, ಅಣ್ಣ–ತಮ್ಮಂದಿರನ್ನು ಪ್ರೀತಿಯಿಂದ ಕಾಣಲು ದೂರವಾಗುವ ಸನ್ನಿವೇಶ ದೂರವಾಗಬೇಕು. ನಮ್ಮ ಬಾಂಧವರನ್ನು, ನಮ್ಮವರನ್ನು ಮಾತ್ರ ಹತ್ತಿರದಿಂದ ಆತ್ಮೀಯತೆಯಿಂದ ಕಾಣದೇ ದೂರವಿರುವವರನ್ನು ಆತ್ಮೀಯವಾಗಿ ಕಾಣಬೇಕೆನ್ನುವ ಸಂದೇಶ. ಅಂದರೆ ಅದೇ ವಸುಧೈವ ಕುಟುಂಬಕಮ್. ವಿಶ್ವವದು ನಮ್ಮ ಮನೆ ಎಂತಾಗಬೇಕು.

ಕೌರವ ಕೃಷ್ಣನನ್ನು ಕಂಡ ಬಗೆ ಮಹಾಯುದ್ಧಕ್ಕೆ ಕಾರಣವಾಯಿತೇ? ಪರಸ್ಪರ ಪ್ರೀತಿಯ ಅಭಾವ ಪರಸ್ಪರ ವೈರತ್ವ ಇವೆಲ್ಲವೂ ವಿವಾದಕ್ಕೆ ಕಾರಣವಾಗಿ ದುರಂತದಲ್ಲಿ ಕೊನೆಗೊಂಡು ಅನಂತರ ಪ್ರಶ್ನಾತೀತವಾದ ಶಬ್ದದಲ್ಲಿ ಲೀನವಾಗುತ್ತದೆಯೇ? ಹೀಗೆ ಎಲ್ಲರೂ ಆತ್ಮಸಂವೇದನೆಯನ್ನು ಅನ್ಯರಿಗೆ ಗೌರವಿಸುವತ್ತ ಮನಸ್ಸು ಮಾಡಿದರೆ ಅದು ದೇವಪೂಜೆ. ಸಂತೋಷಮ್ ಜನಯೇತ್ ಪ್ರಾಜ್ಞಃ ತದೈವ ಈಶ್ವರ ಪೂಜನಂ ಎಂದರು. ಇನ್ನೊಬ್ಬರಿಗೆ ಗೌರವಿಸುವುದೇ, ಇನ್ನೊಬ್ಬರಿಗೆ ಸಂತೋಷವನ್ನುಂಟು ಮಾಡುವುದೇ ದೇವಪೂಜೆ ಎಂದರು. ಅಂದರೆ ಸಾಮಾಜಿಕ ಚಿಂತನೆಯಲ್ಲಿ ಅನ್ಯರನ್ನು, ಅತಿಥಿಗಳನ್ನು ಆತ್ಮೀಯವಾಗಿ, ಆನಂದದಿಂದ, ಗೌರವಪೂರ್ವಕವಾಗಿ ಕಾಣುವುದರ ಮೂಲಕ ಆತ್ಮಾನಂದವನ್ನು ಕಾಣುವುದೇ ಜೀವನ. ಅದರಲ್ಲಿ ಜೀವನ ಮೌಲ್ಯ ಅಡಗಿದೆ.

ಅತಿಥಿ ಸತ್ಕಾರ ಅಂದರೆ ಬಡವನಾದರೆ ಹೇಗೆ ಮಾಡಲು ಸಾಧ್ಯ. ಅಂದರೆ ಎಲ್ಲವರಲ್ಲೂ ಇರುವ ಸಂಪತ್ತು – ಪ್ರೀತಿಯ ಮಾತು, ಸಮಾಧಾನದಿಂದ ಕೊಡಲು ನೀರು, ಆಸನ, ಇವು ಎಲ್ಲವರಲ್ಲೂ ಇರುವ ಸಂಪತ್ತು. ಅದನ್ನಾದರೂ ಬಳಸುವ ಸಾಮಾನ್ಯ ಜ್ಞಾನದ ಕೊರತೆಯೇ ಜೀವನದ ಆಪತ್ತು ಎಂದು ಹೇಳಲಾಗಿದೆ.

ಮಹಾಶಿವನ ಅನುಗ್ರಹ ಪಡೆದು ಪುನಿತರಾದ ನಾವು ಋತುಗಳಲ್ಲಿ ಶಿರಸ್ಥಾನದಲ್ಲಿರುವ ಶಿಶಿರ ಋತುವಿನಲ್ಲಿ ಕೊನೆಯ ಮಾಸ ಫಾಲ್ಗುಣವನ್ನು ಸ್ವಾಗತಿಸುತ್ತಿದ್ದೇವೆ. ಈ ವರ್ಷದ ತಪ್ಪು ಒಪ್ಪುಗಳನ್ನು ಸ್ಮರಿಸುತ್ತಾ ಆಥಿತ್ಯದ ಆನಂದವನ್ನು ಸ್ಮರಿಸೋಣವೇ.

ಅತಿಥಿಯ ಆತಿಥ್ಯ ಅದು ದೇವಪೂಜೆ
ಅರಿತೋ ಅರಿಯದೆಯೋ ಆಗಲಿ ಅಂತರಂಗದ ಹೆಜ್ಜೆ
ಪಂಚಾಂಗ ಸಾರುತಿದೆ ಪ್ರತಿದಿನವೂ ಒಂದೊಂದು ತಿಥಿ
ಸೂರ್ಯನ ಸೂರಿನಡಿ ಯಾರಾಗುವರೋ ಯಾರ ಅತಿಥಿ.

**ಶ್ರೀಕ್ಷೇತ್ರದ ಸದ್ಭಕ್ತರ ಗಮನಕ್ಕೆ :** ಶ್ರೀಕ್ಷೇತ್ರದಲ್ಲಿ ತಮಗೆ ತಿಳಿದಿರುವಂತೆ 2019 ಏಪ್ರಿಲ್ 02ರಿಂದ 13ರವರೆಗೆ "ಕಲ್ಪವಾಸ" ಹಾಗೂ ಏಪ್ರಿಲ್ 13ರಿಂದ 19ರವರೆಗೆ 'ಶ್ರೀರಾಮನವಮಿ', 'ಶರಾವತಿ ಕುಂಭ', 'ಮಲೆನಾಡ ಉತ್ಸವ–2019', 'ಪುಷ್ಪರಥೋತ್ಸವ', 'ಶ್ರೀನಿವಾಸ ಕಲ್ಯಾಣ' ಮತ್ತು ಶ್ರೀ ದೇವರ 'ಬ್ರಹ್ಮರಥೋತ್ಸವ' ನಡೆಯಲಿದ್ದು, ಸಹಸ್ರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಹಾಗೂ ಭಕ್ತರು ಸೇರುತ್ತಾರೆ. ಈ ಎಲ್ಲಾ ಕಾರ್ಯಕ್ರಮಗಳನ್ನು ಉತ್ತಮವಾಗಿ ಹಾಗೂ ಮಾದರಿಯಾಗಿ ನಿರ್ವಹಿಸಬೇಕೆನ್ನುವ ಶ್ರೀಗುರೂಜಿಯವರ ಮಹಾಸಂಕಲ್ಪಕ್ಕೆ ಸ್ಫೂರ್ತಿಯಾಗಿ ಸ್ವಯಂಪ್ರೇರಿತರಾಗಿ ತಾವುಗಳು ಸ್ವಯಂಸೇವಕರಾಗಿ ಸೇವೆಮಾಡಬಹುದು. ಸ್ವಯಂಸೇವಕರಾಗಿ ಸೇವೆಮಾಡಬಯಸುವವರು ಮುಂಚಿತವಾಗಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 9449109299, 9448800330, 9740945126**



ಓಲಂಪಿಕ್ ಪದ್ಯಗಳ ಪಿತಾಮಹ – ಪಿಯರನ್ ದಿ ಕೊಬರ್ಲೆನ್

ವಕಾಲತ್

# ನ್ಯಾಯಾಧೀಶ ಸಮಾಜದ ರೋಲ್ ಮಾಡೆಲ್

ನಾಗರಾಜ ನಾಯಕ

ಮಾನವನನ್ನು ಸ್ವರ್ಗಕ್ಕೆ ಕಳುಹಿಸಬೇಕೋ ಅಥವಾ ನರಕಕ್ಕೆ ಕಳುಹಿಸಬೇಕೋ ಎಂಬ ತೀರ್ಪು ನೀಡಲು ಆ ದೇವರು ಮಾನವ ಸಾಯುವವರೆಗೂ ಕಾಯಬೇಕಾಗುತ್ತದೆ. ಮಾನವನ ಜೀವಿತದ ಅವಧಿಯಲ್ಲಿ ಆ ದೇವರು ಸಹ ನ್ಯಾಯ ವಿತರಣೆ ಮಾಡುವಂತಿಲ್ಲ. ಮಾನವನ ಜೀವಿತದ ಅವಧಿಯಲ್ಲಿ ಅವನ ಸಮಸ್ಯೆಗಳಿಗೆ ತೀರ್ಪಿನ ಮೂಲಕ ಉತ್ತರ ನೀಡುವವ ನ್ಯಾಯಾಧೀಶ. ನ್ಯಾಯಾಧೀಶರ ಪೆನ್ನು ವ್ಯಕ್ತಿಯನ್ನು ಸ್ವತಂತ್ರಗೊಳಿಸಬಹುದು ಅಥವಾ ನೇಣುಗಂಬಕ್ಕೂ ಏರಿಸಬಲ್ಲದು. ನ್ಯಾಯಾಧೀಶ ವ್ಯಕ್ತಿಯೋರ್ವನ ಸ್ವಾತಂತ್ರ್ಯಕ್ಕೆ ಅನೇಕ ದಿನಗಳ ಕಡಿವಾಣ ಹಾಕಬಹುದು. ನ್ಯಾಯಾಧೀಶನ ತೀರ್ಪು ಶ್ರೀಮಂತನನ್ನು ದರಿದ್ರನನ್ನಾಗಿಸಬಹುದು. ಇಲ್ಲವೇ ದರಿದ್ರನನ್ನು ಶ್ರೀಮಂತನನ್ನಾಗಿಸಬಹುದು. (ಆದರೆ ಎಲ್ಲವೂ ಕಾನೂನಿನ ಕಕ್ಷೆಯಲ್ಲಿ). ಅಖಂಡ ಭಾರತ ದೇಶದಲ್ಲಿ ವ್ಯಕ್ತಿಯ ಜೀವನಕ್ಕೆ ಇತಿಶ್ರೀ ಹಾಡಬೇಕೆಂಬುದಿದ್ದರೆ ಆ ಅಧಿಕಾರ ಇರುವುದು ನ್ಯಾಯಾಧೀಶನಿಗೆ ಮಾತ್ರ. ಭಾರತದ ಪ್ರಧಾನಿಗಾಗಲೀ ಅಥವಾ ರಾಷ್ಟ್ರಪತಿಗಾಗಲೀ ಮರಣದಂಡನೆ ನೀಡುವ ಅಧಿಕಾರವಿಲ್ಲ. ಮರಣದಂಡನೆ ನೀಡುವ, ಶಿಕ್ಷಿಸುವ, ದೋಷಮುಕ್ತಗೊಳಿಸುವ ಎಲ್ಲಾ ಅಧಿಕಾರ ಇರುವುದು ನ್ಯಾಯಾಧೀಶನಿಗೆ ಮಾತ್ರ.

ನ್ಯಾಯಾಧೀಶನ ಕರ್ತವ್ಯ ಬೆಳಿಗ್ಗೆ 10 ಗಂಟೆಗೆ ಶುರುವಾಗಿ 5 ಘಂಟೆಗೆ ಮುಗಿಯಿತು ಎಂದಾಗುವುದಿಲ್ಲ. ತನ್ನ ಪೀಠದಲ್ಲಿ ಕುಳಿತಿರಲಿ, ತಿರುಗಾಡುತ್ತಿರಲಿ, ಇಲ್ಲಾ ಮಲಗಿರಲಿ, ನ್ಯಾಯಾಧೀಶ ಎಂದೇ ಕರೆಯಲಾಗುವುದು. ನ್ಯಾಯಾಧೀಶರ ಪ್ರತಿಯೊಂದು ಕಾರ್ಯಗಳೂ ಪಾರದರ್ಶಕವಾಗಿರಬೇಕು. ಇಡೀ ಸಮಾಜ ನ್ಯಾಯಾಧೀಶರನ್ನು ವೀಕ್ಷಿಸುತ್ತಿರುತ್ತದೆ. ನ್ಯಾಯಾಧೀಶರ ಖಾಸಗಿ ಜೀವನ, ಕೌಟುಂಬಿಕ ವ್ಯವಹಾರ, ನಡತೆ ಇವೆಲ್ಲವೂ ನ್ಯಾಯಿಕವಾಗಿಯೇ ಇರಬೇಕು. (ಕೃಪೆ: The Culture of Judge, Justice R. C. Lahoti) ಕೆಲದಿನಗಳ ಹಿಂದೆ ಮಾಜಿ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂ ಸುಪ್ರೀಂಕೋರ್ಟಿಗೆ ಭೇಟಿಯಿತ್ತಾಗ ಒಂದು ಸಂದೇಶವನ್ನು ಬಿಟ್ಟುಹೋಗಿದ್ದರು. ಅದೇನೆಂದರೆ "ನೀವು 26 ಜನ ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿಗಳಿರುತ್ತೀರಿ. ನೀವು ನ್ಯಾಯಾಂಗದ 26 ರೋಲ್‌ಮಾಡೆಲ್‌ಗಳಿದ್ದಂತೆ. ಜನರು ಅವರಿಗಾದ ಅನ್ಯಾಯದ ಪರಿಹಾರದ ಕುರಿತು ತಮ್ಮತ್ತ ನೋಡುತ್ತಾರೆ. ನಿಮಗೊಂದು ದೃಷ್ಟಿಕೋನವಿರಬೇಕು ಮತ್ತು ನಿಮ್ಮ ದೃಷ್ಟಿಕೋನಕ್ಕೆ ಒಂದು ಆಕಾರ ಕೊಡಲು ಪ್ರಯತ್ನಿಸಬೇಕು." ನ್ಯಾಯಾಂಗದ ಜವಾಬ್ದಾರಿಯೇನು ಎನ್ನುವುದು ಅಬ್ದುಲ್ ಕಲಾಂ ಒಂದು ಸಣ್ಣ ಸಂದೇಶದಲ್ಲಿ ಬಹಳ ಸುಂದರವಾಗಿ ವರ್ಣಿಸಿದ್ದಾರೆ. ಹೌದು! ನಿಜವಾಗಿಯೂ ಪ್ರತಿಯೊಬ್ಬ ನ್ಯಾಯಾಧೀಶ ಸಮಾಜದ ರೋಲ್ ಮಾಡೆಲ್.

ಕ್ರಿ.ಪೂ. 4ನೇ ಶತಮಾನದ ತತ್ತ್ವಜ್ಞಾನಿ ಸಾಕ್ರೆಟಿಸ್‌ನ ಪ್ರಕಾರ ನ್ಯಾಯಾಧೀಶರಿಗೆ 4 ಗುಣಗಳು ಇರಬೇಕಂತೆ. ಅವುಗಳೆಂದರೆ ಸಾವಧಾನದಿಂದ ಕೇಳುವುದು, ಬುದ್ಧಿವಂತಿಕೆಯಿಂದ ಉತ್ತರಿಸುವುದು, ಗಂಭೀರವಾಗಿ ಪರಿಗಣಿಸುವುದು ಮತ್ತು ನಿಷ್ಪಕ್ಷಪಾತವಾಗಿ ನಿರ್ಧರಿಸುವುದು. ಅಬ್ದುಲ್ ಕಲಾಂ ಹೇಳಿರುವಂತೆ ದೃಷ್ಟಿಕೋನವಿದ್ದರೆ ಈ ನಾಲ್ಕು ಗುಣಗಳು ನ್ಯಾಯಾಧೀಶನಾದವ ಧರಿಸಿ ನಿಲ್ಲಬಹುದು. ಜಸ್ಟೀಸ್ ಲಾಹೋಟಿಯವರ ಪ್ರಕಾರ ನ್ಯಾಯಾಧೀಶ ವಸ್ತುಸ್ಥಿತಿಯನ್ನು ಅರಿತವನಾಗಿರಬೇಕು ಮತ್ತು ಕಾನೂನಿನ ವಿದ್ಯಾರ್ಥಿಯಾಗಿರಬೇಕು. ನ್ಯಾಯದಾನ ಮಾಡುವ ಸಂದರ್ಭದಲ್ಲಿ ಯಾರು ಗೆಲ್ಲಲಿ ಅಥವಾ ಸೋಲಲಿ ಅದು ನ್ಯಾಯಾಧೀಶನ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

ನ್ಯಾಯಾಲಯವೆಂದರೆ ಅದು Temple of Justice. ಯಾವ ಮನೋವಿಕಾರವಿಲ್ಲದೇ ದೇವರ ಪೂಜೆಗೆ ಬಂದ ಪೂಜಾರಿಯಂತೆ ನ್ಯಾಯಾಧೀಶ ನ್ಯಾಯಾಲಯವನ್ನು ಪ್ರವೇಶಿಸಬೇಕು. ಮತ್ತು ನ್ಯಾಯಾಲಯದಿಂದ ಹೊರಹೋಗುವಾಗ, ಪ್ರಾರ್ಥನೆ ಮುಗಿಸಿ ಹೊರಬೀಳುವಾಗ ಇರುವ ಆಹ್ಲಾದಕರ ಮನಸ್ಸನ್ನು ಹೊಂದಿರಬೇಕು. ಎಷ್ಟೋ ಜನ ತಮ್ಮ ಪಾಪವನ್ನು ತೊಳೆದುಕೊಳ್ಳಲು ಗಂಗೆಯಲ್ಲಿ ಮುಳುಗುತ್ತಾರೆ. ಆದರೆ ಗಂಗೆಯ ತಟದಲ್ಲಿಯೇ ನಿಂತು ಪಾಪವನ್ನು ಮಾಡತೊಡಗಿದರೆ ಪಾಪ ತೊಳೆಯುವುದು ಹೇಗೆ? ನ್ಯಾಯಾಲಯ ಶುದ್ಧತೆಯ ಸಂಕೇತ. ಅಲ್ಲಿ ಮಾಡುವ ಪ್ರತಿಯೊಂದು ಕಾರ್ಯಗಳು ಶುದ್ಧವಾಗಿ ಸರಿಯಾಗಿಯೇ ಇರಬೇಕು. ಆದ್ದರಿಂದ ನ್ಯಾಯದಾನ ಮಾಡುವಲ್ಲಿ ನ್ಯಾಯಾಧೀಶನ ಪಾತ್ರ ಬಹು ಮುಖ್ಯವಾದದ್ದು.

ನ್ಯಾಯಾಲಯದ ವಾತಾವರಣವನ್ನು ಸರಿಯಾಗಿ ತೆಗೆದುಕೊಂಡು ಹೋಗುವ ಜವಾಬ್ದಾರಿ ನ್ಯಾಯಾಧೀಶನದಾಗಿರುತ್ತದೆ. ನ್ಯಾಯಾಲಯದಲ್ಲಿ ಪಾವಿತ್ರ್ಯತೆ ಇರಬೇಕಾದರೆ ನ್ಯಾಯಾಧೀಶನೇ ಮೊದಲು ಪಾವಿತ್ರ್ಯ ಹೊಂದಿರಬೇಕು. A Judge cannot create discipline in his court unless he leads by example.

**ಹೇಮಪುರ ಪತ್ರಿಕೆಯ ಚಂದಾವಿವರ**

* ಬಿಡಿ ಪತ್ರಿಕೆ - ರೂ.20/- * ವಾರ್ಷಿಕ ಚಂದಾ - ರೂ.200/- * ಪಂಚವಾರ್ಷಿಕ ಚಂದಾ - ರೂ.1000/-
* ಆಜೀವ ಸದಸ್ಯತ್ವ - ರೂ.5000/-

**ವಿವರಗಳಿಗೆ ಸಂಪರ್ಕಿಸಿ :** ಸಂಪಾದಕರು, ಹೇಮಪುರ ಮಾಸಪತ್ರಿಕೆ. ಫೋನ್ ನಂ: 08387-268333,268545,268544.

ಮಧುರ ಪ್ರಕಾಶನ

# ಐಲಿಡ್ಸ್ ಟೆಸ್ಟ್

ಎಂ. ಎಲ್.ರಾಘವೇಂದ್ರರಾವ್

ನಿಮ್ಮ ಕಣ್ಣುರೆಪ್ಪೆಗಳು ಗಟ್ಟಿಯಾಗಿ ಅಂಟಿಕೊಂಡು ಹೋಗುತ್ತಿರುವಂತೆ ಸಲಹೆ ನೀಡಿ. ನೀವು ಕಣ್ಣು ಮುಚ್ಚಿಕೊಂಡೇ ಇರುತ್ತೀರ. ಆದ್ದರಿಂದ ಅದೇ ಸ್ಥಿತಿಯಲ್ಲಿ ಸಜೆಷನ್ಸ್ ಕೊಡಬಹುದು.

"ನನ್ನ ಎರಡು ಕಣ್ಣುರೆಪ್ಪೆಗಳು ಗಟ್ಟಿಯಾಗಿ ಅಂಟಿಕೊಳ್ಳುತ್ತಿವೆ. ಬಹಳ ಭಾರವಾಗಿದೆ. ಇನ್ನೂ... ಇನ್ನೂ... ಗಟ್ಟಿಯಾಗಿ ಕಚ್ಚಿಕೊಳ್ಳುತ್ತಿವೆ. ನಾನೀಗ ಸ್ವಲ್ಪ ಕೂಡಾ ನನ್ನ ಕಣ್ಣುಗಳನ್ನು ಬಿಡಲಾರೆ... ನನ್ನ ಕಣ್ಣು ರೆಪ್ಪೆಗಳು ತುಂಬಾ ಗಟ್ಟಿಯಾಗಿ ಇನ್ನೂ ಗಟ್ಟಿಯಾಗಿ ಅಂಟಿಕೊಳ್ಳುತ್ತಿವೆ. (ಹೀಗೆ ಸಲಹೆ ಕೊಡುತ್ತಾ ಕಣ್ಣರೆಪ್ಪೆಗಳನ್ನು ತೆಗೆಯುವುದಕ್ಕೆ ಪ್ರಯತ್ನಿಸಿದರೆ ಸಾಕು ಬಲವಾಗಿ ಅವು ಅಂಟಿಕೊಳ್ಳುತ್ತಾ ಹೋಗುತ್ತವೆ. ಮತ್ತೆ ಒಂದರಿಂದ ಐದೋ, ಹತ್ತೋ ಅಂಕೆಗಳನ್ನು ಲೆಕ್ಕ ಹಾಕುತ್ತಾ ನಾನು ಕಣ್ಣು ಬಿಡಬಲ್ಲೆ ಎಂದು ಸಲಹೆ ನೀಡುತ್ತಾ ಕಣ್ಣು ತೆಗೆಯಬಹುದು.)

ಮತ್ತೆ ಕೊಡಲೇ ಕಣ್ಣು ಮುಚ್ಚಿಕೊಂಡರೆ ಸಮಾಧಿ ಸ್ಥಿತಿ ಮುಂದುವರೆಯುತ್ತದೆ.

**ಹ್ಯಾಂಡ್ ಲಾಕ್ ಟೆಸ್ಟ್**

ನಿಮ್ಮ ಎರಡು ಕೈಗಳನ್ನು ಒಂದರ ಕೈಬೆರಳುಗಳನ್ನು ಮತ್ತೊಂದರ ಕೈಬೆರಗಳುಗಳೊಳಗೆ ಹೋಗಿಸಿ ಎರಡು ಕೈಗಳನ್ನು ಸೇರಿಸಿ ಬಲವಾಗಿ ಮಡಚಿ ಹಿಡಿದುಕೊಳ್ಳಬೇಕು. ಆನಂತರ ಈ ಕೆಳಗಿನ ರೀತಿಯಲ್ಲಿ ಸಲಹೆ ಕೊಡಬೇಕು.

ಒಂದು... ನನ್ನ ಎರಡು ಕೈಗಳು ಒಂದಕ್ಕೊಂದು ಬಲವಾಗಿ ಬೆಸೆದುಕೊಂಡಿವೆ.

ಎರಡು... ಎರಡು ಕೈಗಳು ಒಂದಕ್ಕೊಂದು ಬೆಸುಗೆ ಹಾಕಿದಂತೆ ಬಲವಾಗಿ ಅಂಟಿಕೊಂಡಿವೆ.

ಮೂರು... ಇನ್ನೂ... ಬಲವಾಗಿ... ಬಲವಾಗಿ... ಚೆನ್ನಾಗಿ ಅಂಟಿಕೊಳ್ಳುತ್ತಿವೆ.

ನಾಲ್ಕು... ಕೈಗಳು ಬಿಡಿಸಲಾಗದಷ್ಟು ಬಲವಾಗಿ ಅಂಟಿಕೊಂಡು ಹೋಗಿವೆ.

ಐದು... ಚೆನ್ನಾಗಿ ಅಂಟಿಕೊಂಡಿವೆ. ಈಗ ಸ್ವಲ್ಪ ಮಾತ್ರ ಕೂಡಾ ನಾನು ಎರಡು ಕೈಗಳನ್ನು ಬೇರೆ ಮಾಡಲಾರೆ.

(ನಿಮ್ಮ ಎರಡು ಕೈಗಳನ್ನು ಬೇರ್ಪಡಿಸುವುದಕ್ಕೆ ಪ್ರಯತ್ನಿಸಿದರೆ ಅವು ಅಂಟಿಕೊಂಡಿರುವುದನ್ನು ನೀವು ಗಮನಿಸಬಹುದು.)

ಇದರ ನಂತರ ವಿಶ್ರಾಂತಿ... ವಿಶ್ರಾಂತಿ... ವಿಶ್ರಾಂತಿ... ಎನ್ನುತ್ತಾ ಕೈಗಳು ಬೇರ್ಪಡಿಸುತ್ತಿರುವಂತೆ ಸಲಹೆ ನೀಡಿ.

ಈ ನಾಲ್ಕು ವಿಧವಾದ ಪರೀಕ್ಷೆಗಳನ್ನು ನಿರ್ವಹಿಸಿ, ನೀವು ಅಭ್ಯಾಸ ಮಾಡಿದಂತೆಲ್ಲ ನೀವು ಗಾಢವಾದ ಹಿಪ್ನಾಸಿಸೆ ಗೆ ಹೊರಟುಹೋಗುತ್ತೀರ.

**ಸೆಲ್ಫ್ ಹಿಪ್ನಾಸಿಸ್‌ನಿಂದ ಸಹಜಸ್ಥಿತಿಗೆ ಬರುವುದು ಹೇಗೆ?**

ಬಹಳ ಜನ ಸೆಲ್ಫ್ ಹಿಪ್ನಾಸಿಸ್ ಸ್ಥಿತಿಯನ್ನು ಕಲ್ಪಿಸಿಕೊಂಡರೆ ಮತ್ತೆ ಸಹಜ ಸ್ಥಿತಿಗೆ ಬರಲಾರೆವೋ ಇಲ್ಲವೋ ಎಂಬ ಭಯದಲ್ಲಿರುತ್ತಾರೆ. ಅದಕ್ಕೆ ಬಹಳ ಜನ ಪೂರ್ತಿಯಾಗಿ ಸಮಾಧಿ ಸ್ಥಿತಿಯನ್ನು ಅನುಭವಿಸಲಾರರು. ಗಾಢವಾದ ಸ್ಥಿತಿಯೊಳಕ್ಕೆ ಹೋಗುವುದಕ್ಕೆ ಹಿಂಜರಿಯಬಾರದು.

ಸೆಲ್ಫ್ ಹಿಪ್ನಾಸಿಸ್‌ನಲ್ಲಿ ಸಹಜ ಸ್ಥಿತಿಗೆ ಬರುವುದು ಬಹಳ ಸುಲಭ. ನಿಜಕ್ಕೂ ಸೆಲ್ಫ್ ಹಿಪ್ನಾಸಿಸ್‌ನನ್ನು ಯಾಕೆ ಏರ್ಪಡಿಸಿಕೊಳ್ಳುತ್ತಿದ್ದೇವೆ ಅನ್ನೋ ಅಂಶದ ಮೇಲೆ ಅರಿವಿರಬೇಕು. ಕೆಲವರು ಮಾನಸಿಕ ವಿಶ್ರಾಂತಿಗೋಸ್ಕರ, ಮತ್ತೆ ಕೆಲವರು ನಡುವಳಿಕೆಯಲ್ಲಿನ ಬದಲಾವಣೆಗಾಗಿ ತಾನು ಮಾಡಬೇಕಾದ, ಸಾಧಿಸಬೇಕಾದ ವಿಷಯಗಳಿಗಾಗಿ ಸೆಲ್ಫ್ ಹಿಪ್ನಟೈಜ್ ಆಗುತ್ತಾರೆ. ಈ ಸಂದರ್ಭದಲ್ಲಿ ಅವರು ಹಿಪ್ನಾಸಿಸ್‌ನನ್ನು ಉಂಟಾಗಿಸಿಕೊಂಡ ನಂತರ, ಸಲಹೆಗಳನ್ನಿತ್ತು, ಸಮಾಧಿ ಸ್ಥಿತಿಯಿಂದ ಮತ್ತೆ ಮಾಮೂಲಿ ಅಂದರೆ ಸಹಜ ಸ್ಥಿತಿಗೆ ಬಂದುಬಿಡಬಹುದು.

ಸಾಮಾನ್ಯವಾಗಿ ನೀವು ಸೆಲ್ಫ್ ಹಿಪ್ನಾಸಿಸ್ ಏರ್ಪಡಿಸಿಕೊಂಡರೆ ಅಂದರೆ ಯಾವ ಮಾನಸಿಕ ಪ್ರಶಾಂತತೆಗೋಸ್ಕರವೋ ಆದರೆ ಮುಂಚಿತವಾಗಿ ನೀವು ಸ್ವಲ್ಪ ಸಮಯವನ್ನು ತೆಗೆದಿಡಬೇಕು. ನೀವು ಮೂವತ್ತು ನಿಮಿಷ ಸಮಾಧಿ ಸ್ಥಿತಿಯಲ್ಲಿ ಇರಬೇಕು ಅಂದುಕೊಂಡಿರಿ ಅಂತಿಟ್ಟುಕೊಳ್ಳಿ. ನೀವು ಸಮಾಧಿ ಸ್ಥಿತಿಗೆ ಹೋಗುವುದಕ್ಕೆ ಮೊದಲೇ ಈ ಸಮಯವನ್ನು ಖಚಿತಪಡಿಸಿಕೊಳ್ಳಬೇಕು. ನೀವು ಸಾಮಾನ್ಯ ಸಮಾಧಿ ಸ್ಥಿತಿಯಲ್ಲಿದ್ದರೆ... ನಿಮಗಾಗಿ ನೀವು ನಿಮಗೆ ವಿಶ್ರಾಂತಿ ದೊರೆತೊಡನೇ ಸಲಹೆಗಳನ್ನು ಕೊಟ್ಟುಕೊಳ್ಳುತ್ತಾ ಮಾಮೂಲಿ ಸ್ಥಿತಿಗೆ ಬಂದುಬಿಡಬಹುದು. ಇಲ್ಲವೇ ನೀವು ಒಳ್ಳೆ ಗಾಢವಾದ ಸ್ಥಿತಿಗೆ ಹೋದಿರಿ ಅಂತಿಟ್ಟುಕೊಳ್ಳಿ. ಆಗಲೂ ಕೂಡಾ ನೀವು ಹೆದರಬೇಕಾದ ಅಗತ್ಯವಿಲ್ಲ. ನಿಮಗೆ ಎಷ್ಟು ವಿಶ್ರಾಂತಿ ಅಗತ್ಯವಿದೆಯೋ ಅಷ್ಟು ವಿಶ್ರಾಂತಿ ಲಭಿಸಿದೊಡನೆ ನೀವಾಗಿ ನೀವೇ ನಿದ್ರೆಯಿಂದ ಎದ್ದಂತೆ ಸಹಜಸ್ಥಿತಿಗೆ ಬಂದುಬಿಡುತ್ತೀರಿ. ಒಂದು ವೇಳೆ ನೀವು ಅಂದುಕೊಂಡ ಸಮಯಕ್ಕೆ ಕೆಲವು ನಿಮಿಷಗಳ ಕಾಲ ಆ ಕಡೆ ಈ ಕಡೆ ಆಗಬಹುದು. ಇನ್ನು ನಿಮ್ಮ ವಿಶ್ರಾಂತಿ ಅಗತ್ಯವನ್ನು ಅವಲಂಭಿಸಿರುತ್ತದೆ.

ನೀವೊಂದು ಕ್ರಮಪದ್ಧತಿಯಲ್ಲಿ ಸೆಲ್ಫ್ ಹಿಪ್ನಾಸಿಸ್‌ನ್ನು ಏರ್ಪಡಿಸಿಕೊಂಡು ನೀವು ಯಾವ ಸಲಹೆಗಳನ್ನು ನೀಡಬೇಕೆಂದಿರುವಿರೋ ಆ ಸಲಹೆಗಳು ಪೂರ್ತಿಯಾದ ಮೇಲೆ ಕೆಲವು ನಿಮಿಷ ವಿಶ್ರಾಂತಿ ತೆಗೆದುಕೊಂಡು ಮತ್ತೆ ಸಲಹೆಗಳ ಮೂಲಕ ಸಹಜಸ್ಥಿತಿಗೆ ಬಂದುಬಿಡಬಹುದು.ಈ ಕೆಳಗಿನ ರೀತಿಯಲ್ಲಿ ಸಲಹೆಗಳನ್ನು ನೀಡಿರಿ.



ಭಾರತೀಯ ಸೈನ್ಯದ ಪೂಜ್ಯ ಪಿತಾಮಹ – ಸ್ಟ್ರೇಂಜರ್ ಲಾರೇನ್ಸ್

ನೀವು ಹಿಪ್ನಾಸಿಸ್‌ನಲ್ಲಿದ್ದಾಗ ಒಮ್ಮೆಲೇ ಸಮಾಧಿ ಸ್ಥಿತಿಯಿಂದ ಏಳುವುದಕ್ಕೆ ಪ್ರಯತ್ನ ಮಾಡಬಾರದು. ಈ ಕೆಳಗಿನ ರೀತಿಯಲ್ಲಿ ಕ್ರಮಕ್ರಮವಾಗಿ ಸಹಜಸ್ಥಿತಿಗೆ ಬರಬೇಕು.

ಈಗ ನನ್ನ ಮನಸ್ಸು ಹಾಯಾಗಿ, ಪ್ರಶಾಂತವಾಗಿದೆ.

'ನಾನು ಚೆನ್ನಾಗಿ ವಿಶ್ರಾಂತಿ ಹೊಂದಿದ್ದೇನೆ. ನನಗೆ ತುಂಬಾ ಹಾಯಾಗಿದೆ. ಈಗ ನಾನು ಸಹಜ ಸ್ಥಿತಿಗೆ ಬರುತ್ತಿದ್ದೇನೆ.'

(ಹತ್ತರಿಂದ ಒಂದರವರೆಗೂ ಅಂಕೆಗಳನ್ನು ಮೆಲ್ಲನೆ ಹಿಂದಕ್ಕೆ ಲೆಕ್ಕ ಹಾಕಬೇಕು.)

ಹತ್ತು... ನನ್ನ ಶರೀರ ಕ್ರಮೇಣ ಸಹಜವಾಗಿ, ಹಗುರಾಗಿದೆ. ನಾನು ಕ್ರಮೇಣ ಎಚ್ಚರದ ಸ್ಥಿತಿಗೆ ಬರುತ್ತಿದ್ದೇನೆ.

ಒಂಭತ್ತು... ನನ್ನ ಕಣ್ಣುಗಳು ಕ್ರಮೇಣ ಹಗುರಾಗಿ ತೆರೆದುಕೊಳ್ಳುತ್ತಿವೆ.

ಎಂಟು... ಕ್ರಮೇಣ ಸಹಜಸ್ಥಿತಿಗೆ ಬಂದುಬಿಡುತ್ತಿದ್ದೇನೆ. ನನ್ನ ಶರೀರವನ್ನು ಮಾಮೂಲಿನಂತೆ ಕದಲಿಸುತ್ತಿದ್ದೇನೆ. ನನಗೆ ತುಂಬಾ ಹಿತವಾಗಿದೆ.

ಏಳು... ಸಹಜ ಸ್ಥಿತಿಗೆ ಬರುತ್ತಿದ್ದೇನೆ.

ಆರು... ನನಗೆ ತುಂಬಾ ಹಾಯಾಗಿದೆ... ಕಣ್ಣುಗಳು ಮಾಮೂಲಿನಂತೆ ಹಗುರಾಗಿ ತೆಗೆದುಕೊಳ್ಳುತ್ತಿವೆ.

ಐದು... ಸಹಜ ಸ್ಥಿತಿಗೆ ಬರುತ್ತಿದ್ದೇನೆ ಶರೀರ ಅಂಗಾಂಗಗಳನ್ನು ಕದಲಿಸುತ್ತಿದ್ದೇನೆ.

ನಾಲ್ಕು... ನನ್ನ ಕಣ್ಣುಗಳು ತೆರೆದುಕೊಳ್ಳುತ್ತಿವೆ. ಕಣ್ಣು ಬಿಟ್ಟ ನಂತರ ನನಗೆ ಇನ್ನೂ ಹಾಯಾಗಿ ಪ್ರಶಾಂತವಾಗಿರುತ್ತದೆ.

ಮೂರು... ಎರಡು... ಪೂರಾ ಎಚ್ಚರಕ್ಕೆ ಬಂದುಬಿಡುತ್ತೇನೆ.

ಒಂದು... ಈಗ ಪೂರ್ತಿಯಾಗಿ ಸಹಜಸ್ಥಿತಿಗೆ ಬಂದುಬಿಟ್ಟೆ, ನನಗೆ ಹಾಯಾಗಿ, ಪ್ರಶಾಂತವಾಗಿದೆ.(ಕಣ್ಣು ಬಿಟ್ಟುಬಿಡಿ)

ಗಾಢವಾದ ಸ್ಥಿತಿಯನ್ನು ಹೊಂದುವುದು ಹೇಗೆ?

ಹಿಪ್ನಾಸಿಸ್‌ಲ್ಲಿ ಗಾಢವಾದ ಸ್ಥಿತಿಯನ್ನು ಹೊಂದುವುದು ಅನ್ನೋದು ಆಯಾ ವ್ಯಕ್ತಿಗಳ ಮಾನಸಿಕ ಸ್ಥಿತಿ ಮೇಲೆ ಆಧಾರಪಟ್ಟಿರುತ್ತದೆ. ಪ್ರಾರಂಭದಲ್ಲಿ ಒಂದು ರೀತಿ ಸ್ಥಿತಿಗೆ ಒಳಗಾಗುವುದು ಸರ್ವಸಾಮಾನ್ಯವಾಗಿ ನಡೆಯುತ್ತಿರುತ್ತದೆ. ಅಭ್ಯಾಸ ಮುಂದುವರೆಸಿದಂತೆಲ್ಲಾ ದಿನದಿನಕ್ಕೆ ಗಾಢವಾದ ಸ್ಥಿತಿಯನ್ನು ಸೇರಬಹುದು. ಆದರೆ ಕೆಲವು ಮಂದಿ ವ್ಯಕ್ತಿಗಳು ಮೊದಲು ಎರಡು ಮೂರು ಬಾರಿಗೆಲ್ಲಾ ಗಾಢವಾದ ಸ್ಥಿತಿಗೆ ಸೇರಬಹುದು. ಅಭ್ಯಾಸ ಮಾಡಿದಂತೆಲ್ಲಾ ಆ ಸ್ಥಿತಿಯನ್ನು ಹೊಂದುವ ವಿಧಾನದಲ್ಲಿನ ಸುಳಿವನ್ನು ಅರಿಯುತ್ತಾರೆ. ಹೊಸದಾಗಿ ಸೆಲ್ಫ್ ಹಿಪ್ನಾಸಿಸ್ ಅಧ್ಯಯನ ಮಾಡುತ್ತಿರುವವರಲ್ಲಿ ಭಯ, ಅನುಮಾನಗಳು ಹೆಚ್ಚಾಗಿರುತ್ತವೆ. ಅಂಥದ್ದರಲ್ಲಿ ಗಾಢವಾದ ಸ್ಥಿತಿಯನ್ನು ತಲುಪಲಾರರು. ಅವರಲ್ಲಿನ ಅಂತರ್ಗತ ಮನಸ್ಸಿನಲ್ಲಿ ವ್ಯತಿರೇಕತೆಯೇ ಇದಕ್ಕೆ ಕಾರಣ.

ಗಾಢವಾದ ಸ್ಥಿತಿಗೆ ತಲುಪಿದರೆ ತಮಗೆ ತಾವೇ ಮತ್ತೆ ಜಾಗ್ರತಾವಸ್ಥೆಗೆ ಬರಬಲ್ಲೆವೋ ಎಂಬ ಭಯ. ಗುಂಡಿಗೆ ಹೊಡೆದುಕೊಳ್ಳುವಿಕೆ, ಉಸಿರು ಹೀರಿಕೊಳ್ಳುವಿಕೆ ಮುಂತಾದವುಗಳಿಗೆ ಏನಾದರೂ ಅಡಚಣೆ ಉಂಟಾಗುತ್ತಿದೆಯೇನೋ ಎಂಬ ಭೀತಿಯಿಂದ ಕೂಡಾ ಗಾಢವಾದ ಸ್ಥಿತಿಗೆ ಸೇರಲಾರರು. ಆದರೆ ಪ್ರತಿದಿನ ಅಭ್ಯಾಸ ಮಾಡಿದಂತೆಲ್ಲಾ ದಿನದಿನಕ್ಕೆ ಅನುಭವದಿಂದಾಗಿ ಕೆಲವೇ ದಿನಗಳಲ್ಲಿ ಗಾಢವಾದ ಸ್ಥಿತಿಗೆ ತಲುಪುವ ಮಟ್ಟಕ್ಕೆ ಬೆಳೆಯುತ್ತಾರೆ.

ಒಮ್ಮೆ ಗಾಢವಾದ ಸ್ಥಿತಿಗೆ ಅಭ್ಯಾಸವಾದವರು ಆನಂತರ ಆ ಸ್ಥಿತಿಗೆ ಹೋಗುವುದು ಬಹಳ ಸುಲಭ. ಉದಾಹರಣೆ, ಒಂದು ಪ್ರದೇಶವನ್ನು ನೋಡಿದರೆ ಮತ್ತೆ ಆ ಪ್ರದೇಶಕ್ಕೆ ಯಾವತ್ತಾದರೂ ಹೋಗಬೇಕು ಅಂದುಕೊಂಡರೆ ಬಹಳ ಸುಲಭವಾಗಿ ಹೋಗಬಹುದು. ಹಾಗೇ ಹಿಪ್ನಾಸಿಸ್ ಸ್ಥಿತಿಯನ್ನು ಅನುಭವ ಹೊಂದಿದವರು ಮತ್ತೆ ಹೋಗಬೇಕೆಂದುಕೊಂಡರೆ ಬಹಳ ಸುಲಭವಾಗಿ ಆ ಸ್ಥಿತಿಗೆ ಹೋಗಬಹುದು.

ಆದರೆ ಕೆಲವೊಮ್ಮೆ ನಾವು ಪ್ರಯತ್ನ ಪಟ್ಟರೆ ಗಾಢವಾದ ಸ್ಥಿತಿಗೆ ತಲುಪದೆ ಹೋಗಬಹುದು. ಇದಕ್ಕೆ ಕೆಲವು ಕಾರಣಗಳಿವೆ. ಎಲ್ಲೋ ಸ್ವಲ್ಪ ಸಮಯ ಸಿಕ್ಕಿದೆಯಲ್ಲ ಅಂತ ಯಾವಾಗಂದರೆ ಆವಾಗ ಹಿಪ್ನಾಸಿಸ್‌ನೊಳಗೆ ಹೋಗುವುದಕ್ಕೆ ಪ್ರಯತ್ನಿಸುವುದು, ಅಂತರಂಗದಲ್ಲಿ ಆ ಸಮಯದಲ್ಲಿ ವಿರುದ್ಧ ಭಾವನೆ ಹೊಂದಿರುವುದು, ಅತಿ ಮುಖ್ಯವಾದ ಕೆಲಸಗಳ ಒತ್ತಡವಿರುವುದು ಮುಂತಾದ ಕಾರಣಗಳಿಂದ ಕೂಡಾ ಗಾಢವಾದ ಸ್ಥಿತಿಗೆ ತಲುಪದೆ ಹೋಗಬಹುದು.

ಕೆಲವೊಮ್ಮೆ ನಮಗೆ ಅರಿವಿಲ್ಲದೆಯೇ ಗಾಢವಾದ ಸ್ಥಿತಿಗೆ ತಲುಪುತ್ತೇವೆ. ಆಯಾ ಸಂದರ್ಭಗಳನ್ನು ಹಿಡಿದು ಗಾಢವಾದ ಸ್ಥಿತಿಯಿಂದ ನಿದ್ರೆಗೆ ಕೂಡಾ ಜಾರುವುದು ನಡೆಯುತ್ತಿರುತ್ತದೆ. ಮನಸ್ಸಿಗೆ ವಿಶ್ರಾಂತಿ ಲಭಿಸಿದ ನಂತರ ನಾವಾಗಿ ನಾವೇ ಎಚ್ಚರಕ್ಕೆ ಬಂದುಬಿಡುತ್ತೇವೆ. ಇಲ್ಲವೇ ಹಿಪ್ನಾಸಿಸ್‌ಗೆ ಹೋಗುವುದಕ್ಕೆ ಮುಂಚೆ ನಾವು ಎಷ್ಟು ಸಮಯವನ್ನು ಕಾಯ್ದಿರಿಸುತ್ತೇವೋ ಆ ಸಮಯ ಪೂರ್ತಿಯಾದೊಡನೆಯೇ ಕಾನ್ಷಸ್ ಸ್ಥಿತಿಗೆ ತಲುಪುವುದು ನಡೆಯುತ್ತದೆ.

ಸೆಲ್ಫ್ ಹಿಪ್ನಾಸಿಸ್ ಅಧ್ಯಯನ ಮಾಡುತ್ತಿರುವವರು ಇನ್ನೂ ಗಾಢವಾದ ಸ್ಥಿತಿ ಹೊಂದಬೇಕು ಅಂದುಕೊಳ್ಳೋರಿಗಾಗಿ ಇಲ್ಲಿ ಕೆಲವು ಅಧ್ಯಯನ ವಿಧಾನಗಳನ್ನು ಕೊಡಲಾಗಿದೆ. ಅವುಗಳನ್ನು ಅನುಸರಿಸಿ ಹಿಪ್ನಾಸಿಸ್ ಸ್ಥಿತಿಯನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು.

ಪ್ರಕೃತಿ ದೃಶ್ಯವನ್ನು ಊಹಿಸುವುದು

ಹಿಪ್ನಾಸಿಸ್ ಉಂಟಾಗಿಸಿಕೊಂಡ ನಂತರ ಒಂದು ಒಳ್ಳೆ ಪ್ರಕೃತಿ ದೃಶ್ಯವನ್ನು ಊಹಿಸಿರಿ. ಸುಂದರವಾದ ಹೂದೋಟ ಆ ತೋಟದಲ್ಲಿ ನಿಮಗೆ ಮೆಚ್ಚುಗೆಯಾದ ಅನೇಕ ಹೂಗಳು, ಗಿಡಗಳು,ಎಲೆಗಳು ರೆಂಬೆಗಳು, ಹಚ್ಚ ಹಸಿರು ಮೈದಾನ ನೋಡುತ್ತಲಿರಿ. ನಿಮಗೆ ಇಷ್ಟವಾದ ಹೂಗಳು ಬಿಡಿಸಿ, ವಾಸನೆ ನೋಡುತ್ತಿರುವಂತೆ ಊಹಿಸಿರಿ. ಗಾಳಿಗೆ ಸಣ್ಣಪುಟ್ಟ ಗಿಡಗಳು ಆಕಡೆ ಈಕಡೆ ತೂಗಾಡುತ್ತಿರುವುದು. ಎಲೆಗಳ ಸಪ್ಪಳ ಗಮನಿಸುತ್ತಾ ಇರಿ. ಒಳ್ಳೆ ಹಿತವಾದ ಗಾಳಿ ಬೀಸಿ ಬರುತ್ತಿರುವಂತೆ ಆ ಗಾಳಿಯ ಸ್ಪರ್ಶಕ್ಕೆ ಹೂಗಳಿಂದ ಬರುವ ಪರಿಮಳ ಹೀರುತ್ತಾ ಆನಂದ ಹೊಂದಿರಿ. ಅಲ್ಲಿ ಎಷ್ಟು ವಿಧವಾದ ಹೂಗಳಿವೆಯೋ ನೋಡುತ್ತಲಿರಿ. ಅದರಲ್ಲಿ ನಿಮಗೆ ಇಷ್ಟವಾದ ಹೂಗಳನ್ನು ಕೀಳಿರಿ. ಅದರ ಬಣ್ಣ ನೋಡಿ. ಆ ಹೂವಿನ  ಕುಸುಮಗಳನ್ನು ಕೀಳುತ್ತಾ ಪಕ್ಕದಲ್ಲೇ ಇರುವ ನೀರಿನ ಪ್ರವಾಹದಲ್ಲಿ ಹಾಕುತ್ತಿರುವಂತೆ ಊಹಿಸಿರಿ. ಆ ನೀರು ಹರಿಯುವ ವಿಧಾನ ನೀರಿವ ಶಬ್ದ ಊಹಿಸಿರಿ. ಆಕಾಶದ ಕಡೆ ನೋಡಿ. ಎಷ್ಟೋ ಆಹ್ಲಾದಕರವಾಗಿರುತ್ತದೆ. ಹಿತವಾದ ತಂಗಾಳಿ ತೀಡಿ ತೀಡಿ  ಬರುತ್ತಿರುತ್ತದೆ. ಸೂರ್ಯಾಸ್ತಮಾನ ಸಮಯವನ್ನು ಊಹಿಸಿರಿ.

ಹೀಗೆ ನೀವು ವಿವಿಧ ನೆಲೆಗಳಲ್ಲಿ ದೃಶ್ಯಗಳಲ್ಲಿ ಊಹಿಸುತ್ತಾ ಹೋಗಿರಿ. ಆ ಪರಿಸರ ವಾತಾವರಣ ಸವಿಯನ್ನು ಮನಸಾರೆ ಸವಿಯಿರಿ. ನೀವು ಹಿಪ್ನಾಸಿಸ್ ಸ್ಥಿತಿಯಲ್ಲಿದ್ದಾಗ ಅದರ ಅನುಭೂತಿ ನಿಮಗೆ ತಿಳಿಯುತ್ತದೆ. ಆರಾಮವಾಗಿರುವುದು, ಶರೀರ ಭಾರವಾಗುವುದು, ತಲೆ,ಕೈಗಳು ಪಕ್ಕಕ್ಕೆ ಒರಗುವುದು, ಹೀಗೆ ನಿಮಗೆ ಅನೇಕ ಅನುಭವಗಳು ಉಂಟಾಗುತ್ತಿರುತ್ತವೆ. ಈ ಸ್ಥಿತಿಯನ್ನು ಇನ್ನಷ್ಟು ಗಾಢವಾಗಿಸಿಕೊಳ್ಳುವುದಕ್ಕೆ ಮೇಲೆ ಕೆಲವು ರೀತಿ ಅಭ್ಯಾಸಗಳ ಜೊತೆಗೆ ಇಲ್ಲಿ ಕೊಡುತ್ತಿರುವ 'ಹ್ಯಾಂಡ್ಸ್ ಲೆವಿಟೇಷನ್' ವಿಧಾನ ಬಹಳಷ್ಟು ಉಪಯೋಗವಾಗಬಹುದು. ಸಮಾಧಿ ಸ್ಥಿತಿ ಏರ್ಪಡಿಸಿಕೊಂಡ ನಂತರ ಇನ್ನೂ ಗಾಢವಾದ ಸ್ಥಿತಿ ಹೊಂದಬೇಕಾದರೆ ಹೀಗೆ ಮಾಡಿರಿ. ನಿಮ್ಮ ಎರಡು ಕೈಗಳನ್ನು ಹಗುರಾಗಿ ಹೋಗುತ್ತಿರುವಂತೆ ಊಹಿಸಿರಿ. ಹಾಗೆ ನೀವು ಊಹಿಸಿದಂತೆಲ್ಲ ನಿಮ್ಮ ಕೈಗಳು ಎರಡೂ ಕ್ರಮಕ್ರಮೇಣ ಹಗುರಾಗುತ್ತಿರುತ್ತದೆ. ಆಗ ಆ ಕೈಗಳು ಎರಡೂ ಗಾಳಿಯಲ್ಲಿ ಕ್ರಮ ಕ್ರಮೇಣ ಹಗುರಾಗಿ ಮೇಲಕ್ಕೇರುತ್ತಿರುವಂತೆ ಊಹಿಸಿರಿ. ಆಗ ನಿಧಾನವಾಗಿ ನಿಮ್ಮ ಎರಡೂ ಕೈಗಳು ಮೇಲಕ್ಕೇಳುವುದು ಆರಂಭಿಸುತ್ತದೆ.  ಹಾಗೆ ಕೈಗಳನ್ನು ಪೂರ್ತಿಯಾಗಿ ಮೇಲಕ್ಕೇಳಲು ಬಿಡಿ. ಆನಂತರ ಅದೇ ಸ್ಥಿತಿಯಿಂದ ಮೆಲ್ಲನೆ ಕೆಳಗೆ ಇಳಿಯುತ್ತಿರುವಂತೆ ಊಹಿಸಿರಿ. ಹಾಗೆ ಕೈಗಳು ಕೆಳಗೆ ಮೇಲೆ ಕದಲಿಕ ಉಂಟಾಗುವುದರಿಂದ ನೀವು ಕ್ರಮೇಣ ಗಾಢವಾದ ಸ್ಥಿತಿಗೆ ಒಳಗಾಗುತ್ತೀರಿ.

ಅಂಕಿಗಳು ಲೆಕ್ಕ ಹಾಕುವ ವಿಧಾನದ ಮೂಲಕ ಕೂಡಾ ಗಾಢವಾದ ಸ್ಥಿತಿಗೆ ಹೋಗಬಹುದು. ಅದಕ್ಕೆ ಈ ಕೆಳಗಿನ ವಿಧವಾಗಿ ಸಲಹೆ ಸೂಚನೆ ನೀಡಬೇಕು.

'ನಾನು ಇನ್ನೂ ಗಾಢವಾದ ಸ್ಥಿತಿಗೆ, ಇನ್ನೂ ಪ್ರಶಾಂತವಾದ ಸುಖವಾದ ಸ್ಥಿತಿಗೆ ಹೋಗಲಿದ್ದೇನೆ.'

'ನಾನು ಒಂದರಿಂದ ಇಪ್ಪತ್ತು ಅಂಕೆಗಳನ್ನು ಲೆಕ್ಕ ಹಾಕುತ್ತಿದ್ದೇನೆ. ಒಂದೊಂದು ಅಂಕೆಗೂ ಮಧ್ಯೆ ಕೆಲವು ಸೆಕೆಂಡ್‌ಗಳ ಅವಧಿ ಕೊಡಬೇಕು. ಒಂದೊಂದು ಅಂಕೆಗೂ ನಿಮ್ಮ ಸ್ಥಿತಿ ಬೆಳೆಯುತ್ತಿರುತ್ತದೆ.

ಒಂದು ಕಪ್ಪು ಹಲಗೆಯನ್ನು (ಬ್ಲಾಕ್ ಬೋರ್ಡ್) ಮನಸ್ಸಿನಲ್ಲಿ ಊಹಿಸಿಕೊಳ್ಳಿ. ಆ ಫಲಕದತ್ತ ನೋಡುತ್ತಾ ಇರಿ. ಒಂದು ಅಂಕೆಯನ್ನು ನೋಡಿ. ಕಪ್ಪು ಫಲಕದ ಮೇಲೆ ಆ ಅಂಕೆ ನಿಮಗೆ ಸ್ಪಷ್ಟವಾಗಿ ಕಾಣಿಸುತ್ತಿರುವಂತೆ ನೋಡಿ. ಸ್ವಲ್ಪ ಹೊತ್ತಿಗೆ ಆ ಅಂಕೆ ಅಸ್ಪಷ್ಟವಾಗಿ ಬದಲಾಗುತ್ತಾ '2' ಆಗಿ ಬದಲಾಗುತ್ತದೆ. ಆ ಬಳಿಕ '4'ಹೀಗೆ ಇಪ್ಪತ್ತು ಅಂಕೆಗಳವರೆಗೂ ನೋಡಿ ಒಂದೊಂದು ಅಂಕೆಗೂ ನೀವು ಗಾಢವಾದ ಸ್ಥಿತಿಗೆ ತಲುಪುತ್ತೀರಿ. ನೀವು ಹಿಪ್ನಾಸಿಸ್ ಸ್ಥಿತಿಯಲ್ಲಿದ್ದಾಗ ಈ ಕೆಳಗಿನ ರೀತಿಯಲ್ಲಿ ಸಲಹೆ ಕೊಡಬೇಕು.

'ಈ ಬಾರಿ ನಾನು ಸಮಾಧಿ ಸ್ಥಿತಿಯಲ್ಲಿ ಗಾಢವಾದ ಸ್ಥಿತಿಯನ್ನು ಹೊಂದಬಲ್ಲೆ ಹಾಗೂ ಇನ್ನೂ ಹಿತವಾದ, ಪ್ರಶಾಂತವಾದ ಸ್ಥಿತಿಗೆ ಹೋಗಬಲ್ಲೆ' ಎಂದು ಪ್ರತಿಭಾರಿ ನೀವು ಸಮಾಧಿ ಸ್ಥಿತಿಯಲ್ಲಿರುವಾಗ ಸಲಹೆ ಕೊಟ್ಟುಕೊಳ್ಳಬಹುದು.

## ॥ ಗಿಳಿ ॥

ಲೇ: ಸಾವಿತ್ರಿ ಹೆಗಡೆ, ಬಸವನಬೆಟ್ಟ



ಗರಿಬಿಚ್ಚಿ ಹಾರುತಲಿ
ರೆಕ್ಕೆ ದಣಿವು ಆರಲೆಂದು

ಕುಳಿತೆ ನೀನು ಸುಂದರಾಂಗಿ
ಸುಂದರ ಗರಿಯ ಸಾಲಿನಲ್ಲಿ

ಐಕ್ಯತೆಯ ಸಾರುವಂತೆ
ನಿನ್ನ ಸಾಲು ನೋಡಲು ಮಧುರ

ಆಕಾಶ ಭೂಮಿ ಬೆಸೆದ
ಕಾಮನಬಿಲ್ಲು ನಾಚುವಂತೆ

ಸಾಲಿನಲ್ಲಿ ಹಸಿರು ವರ್ಣ
ಮನಕೆ ನೀಡಿತು ಅತ್ಯಾನಂದ

ನಿನ್ನ ನಾನು ಹಿಡಿಯುವಾಸೆ
ಮೂಕ ಭಾಷೆ ಕೇಳುವಾಸೆ

ಗಗನ ಕುಸುಮದಂತೆ ನೀನು
ಮುಟ್ಟಲಾರೆ ನಿನ್ನ ನಾನು

ಕುಳಿತೆ ನೀನು ಏಕೆ ಅಲ್ಲಿ
ಮನದ ಭಾವನೆ ಕೆಣಕುತಲಿ

ಮಾತನಾಡು ನೀನು
ಇಂಪಾದ ದನಿಯ ಚೆಲ್ಲಿ



ಮೊಬೈಲ್ ಪೋನ್‌ನ ಪಿತಾಮಹ – ಮಾರ್ಟಿನ್ ಕೂಪರ್

ಶ್ರೀದರ ಸ್ಮರಣೆ

# ಮಗು! ಭಯಪಡಬೇಡ, ಭಾರತಕ್ಕೆ ಜಯ ಆಗವುದು. ಇದಕ್ಕೆ ನನ್ನ ಆಶೀರ್ವಾದವಿದೆ

ಲೇ: ಶ್ರೀ ಜಿ. ಟಿ. ಶ್ರೀಧರಶರ್ಮ
9480473568

ಶ್ರೀಧರಸ್ವಾಮಿಗಳು ನಕಾರಾತ್ಮಕವಾಗಿ ಯೋಚಿಸಿದ್ದು, ಹೇಳಿದ್ದು ತೀರಾ ಅಪರೂಪ. ಅವರು ಯುದ್ಧ ಸಮಯದಲ್ಲಿ ಕೂಡ ನಮ್ಮ ದೇಶದ ಸೈನಿಕರಲ್ಲಿ ಸಕಾರಾತ್ಮಕವಾಗಿರುವಂತೆ, ಆತ್ಮವಿಶ್ವಾಸದಿಂದ ಆತ್ಮಸ್ಥೈರ್ಯವನ್ನು ಹೊಂದುವಂತೆ ಉಪದೇಶಿಸುತ್ತಿದ್ದರು.

ಶ್ರೀಧರರು 1962ರಲ್ಲಿ ಕರ್ನಾಟಕದ ಮಂಗಳೂರಿನಲ್ಲಿ ತಮ್ಮ ಚಾತುರ್ಮಾಸ್ಯವನ್ನು ಸ್ವೀಕರಿಸಿದ್ದರು. ಎಲ್ಲ ಸಿದ್ಧತೆಗಳೂ ಆಗಿದ್ದರಿಂದ ಏನೂ ತೊಂದರೆಯಾಗಲಿಲ್ಲ. ಒಂದು ದಿನ ಶ್ರೀಧರರೇ ತಮ್ಮ ಹತ್ತಿರದವರಲ್ಲಿ ಹೇಳಿದರು– "ಇಂದು ತುಂಬ ದೂರದಿಂದ ನನ್ನ ದರ್ಶನಕ್ಕೆ ಮೂರು ಜನ ಬರುವವರಿದ್ದಾರೆ."

ಕೇವಲ ಕೆಲವೇ ನಿಮಿಷಗಳಲ್ಲಿ ಒಬ್ಬ ಗೃಹಸ್ಥನು ತನ್ನ ಹೆಂಡತಿ, ಮಗನೊಡನೆ ಭಯಭೀತನಾಗಿ ಗುರುಗಳ ಬಳಿಗೆ ಬಂದನು. "ನನಗೆ ಈಗಲೇ ಗುರುಗಳ ದರ್ಶನವಾಗಬೇಕಿದೆ. ಅದಾಗದಿದ್ದರೆ ಅವರ ಆಪ್ತ ಸೇವಕರನ್ನಾದರೂ ಕರೆಯಿರಿ" ಆ ಗೃಹಸ್ಥರು ನಾಸಿಕದವರಾಗಿದ್ದು ಈ ಮೊದಲೇ ಗುರುಗಳ ಅನುಗ್ರಹಕ್ಕೆ ಪಾತ್ರರಾಗಿದ್ದರು. ಅವರು ಭಾರತದ ಸೈನ್ಯದಲ್ಲಿದ್ದರು. ರಜಾದ ಮೇಲೆ ತಮ್ಮೂರಿಗೆ ಬಂದಿದ್ದರು. ಆವಾಗ ಚೀನಾ–ಭಾರತ ಯುದ್ಧ ಪ್ರಾರಂಭವಾಗಿತ್ತು. ಕೂಡಲೇ ರಜಾ ಮೊಟಕುಗೊಳಿಸಿ ಬರುವಂತೆ ಆದೇಶ ಬಂದಿತ್ತು. ಯುದ್ಧವೆಂದರೆ ಕೇಳಬೇಕೆ ? ಯಾರಿಗೆ ಸೋಲೋ, ಯಾರಿಗೆ ಗೆಲುವೋ ? ಅವರ ಹೆಂಡತಿಯಂತೂ ತುಂಬ ಕಂಗೆಟ್ಟಿದ್ದಳು. ಗುರುಗಳ ಆಶೀರ್ವಾದದಿಂದ ಭಾರತಕ್ಕೆ ಜಯ ಸಾಧ್ಯವೆಂದು ನಂಬಿ ಬಂದಿದ್ದರು. ಎಲ್ಲವನ್ನೂ ತಿಳಿದ ಶ್ರೀಧರರು ಸ್ವಲ್ಪಹೊತ್ತು ಧ್ಯಾನಸ್ಥರಾದರು. ಅನಂತರ ತೀರ್ಥವನ್ನು ಕಮಂಡಲದಿಂದ ಬಿಟ್ಟರು. ಕೊನೆಗೆ ಆ ದಂಪತಿಗಳನ್ನು ಕರೆದರು. "ಮಗು! ಭಯಪಡಬೇಡ, ನಮ್ಮ ಭಾರತಕ್ಕೆ ಜಯವಾಗುವುದು. ಇದಕ್ಕೆ ನನ್ನ ಆಶೀರ್ವಾದವಿದೆ. ಸೈನ್ಯದ ನಿಮ್ಮ ನಾಯಕ ಮತ್ತು ಉಳಿದ ಸೈನಿಕರಿಗೂ ಇದನ್ನು ತಿಳಿಸು. ಯಾರೂ ಅಂಜುವುದು ಬೇಡ. ನಿಮಗೆಲ್ಲ ಶುಭವಾಗಲಿ" ಎಂದು ಧೈರ್ಯ ತುಂಬಿ ಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು. ಮೊದಲು ಭಯದಿಂದ ಬಂದಿದ್ದವರು ಈಗ ನಿರ್ಭಯದಿಂದ, ಆತ್ಮವಿಶ್ವಾಸದಿಂದ ಮತ್ತೆ ಹೊರಟರು.

ಅಂದಿನಿಂದ ಶ್ರೀಧರರು ಪ್ರತಿದಿನ ತೀರ್ಥ ಬಿಟ್ಟು ಜ್ಞಾನದೃಷ್ಟಿಯಿಂದ ಏನನ್ನೋ ನೋಡುತ್ತಿದ್ದರು. ಸದಾ ಮೌನವಾಗಿದ್ದು ಭಾರತ ದೇಶದ ಜಯಕ್ಕಾಗಿ, ನಮ್ಮ ಸೈನಿಕರಿಗಾಗಿ ಹರಸುವಂತೆ ಕಾಣುತ್ತಿತ್ತು. ಕೊನೆಗೆ ಅದೇ ಅಕ್ಟೋಬರ್ (1962) ತಿಂಗಳಲ್ಲಿ ಭಾರತಕ್ಕೆ ಜಯವಾಯಿತು. ಚೀನಾ ಹಿಂದೆ ಸರಿಯಿತು.

ಶ್ರೀರಾಮ ಕಥಾಸಾರ

# ವಾನರರ ನಿರಾಶೆ

ಲೇ: ಬಸ್ತಿ ಸದಾನಂದ ಪೈ, ಸಾಗರ

ಸ್ವಯಂ ಪ್ರಭೆಯು ಬಿಲದಿಂದ ಹೊರಗೆ ಕರೆತಂದ ಬಳಿಕ ಎದುರಿಗೆ ಭಯಂಕರವಾದ ಅಲೆಗಳಿಂದ ಕೂಡಿದ ಸಾಗರವನ್ನು ನೋಡುತ್ತಾರೆ. ಮಯನ ಮಾಯೆಯಿಂದ ರಚಿತವಾದ ಗಿರಿದುರ್ಗಗಳನ್ನು ಹುಡುಕುತ್ತಿರುವಾಗ ಸುಗ್ರೀವನು ವಿಧಿಸಿದ ಕಾಲಾವಕಾಶ ಕಳೆದು ಹೋಗಿತ್ತು. ವಸಂತ ಋತು ಪ್ರಾಪ್ತವಾಗಿತ್ತು. ಕಪಿ ವೀರರು ಚಿಂತಾಕ್ರಾಂತರಾಗಿ ಒಂದು ಮರದ ಬುಡದಲ್ಲಿ ನೆಲಕ್ಕುರುಳಿದರು.

ನನ್ನನ್ನು ಮುಂದಿಟ್ಟುಕೊಂಡು ರಾಜನಾದ ಸುಗ್ರೀವನ ಆಜ್ಞೆಯಂತೆ ರಾಮನ ಕಾರ್ಯಕ್ಕಾಗಿ ಬಂದಿರಿ. ಕಾರ್ಯ ಸಫಲವಾಗಲಿಲ್ಲ. ಕಾಲ ಕಳೆದುಹೋಯಿತು. ಕಾರ್ಯ ಸಾಧನೆಯಾಗದಿರುವುದರಿಂದ ಈಗ ನಾವೂ ಹಿಂತಿರುಗಿದರೆ ಕಪಿರಾಜನು ನಮ್ಮನ್ನು ಕ್ಷಮಿಸುವುದಿಲ್ಲ. ಅಲ್ಲಿ ಕೊಲ್ಲಲ್ಪಡುವುದಕ್ಕಿಂತ ಇಲ್ಲಿಯೇ ಸಾಯುವುದು ಲೇಸು. ಪುಣ್ಯಕರವಾದ ಈ ಸಾಗರ ತೀರದಲ್ಲಿಯೇ ಪ್ರಾಯೋಪವೇಶ ಮಾಡುವೆನು ಎಂದು ಕಪಿಗಳಿಗೆ ತಾನೇ ನಾಯಕನೆಂಬಂತೆ ವರ್ತಿಸುತ್ತಾನೆ.

ಅಂಗದನನ್ನು ಹಿರಿಯ ಕಪಿಗಳು ಸಂತೈಸುತ್ತಾರೆ. ಅಪರಾಧ ಮಾಡಿ ಸ್ವಾಮಿಯ ಬಳಿಗೆ ಹೋಗುವುದು ಉಚಿತವಲ್ಲ. ಇಲ್ಲಿಯೇ ಹುಡುಕೋಣ. ಇಲ್ಲವೇ ಸಮಾಚಾರವನ್ನಾದರೂ ತಿಳಿದು ಹೋಗೋಣ. ಇಲ್ಲದಿದ್ದರೆ ವೀರನ ಬಳಿಗೆ ಹೋಗುವುದೇ ಬೇಡ. ಇಲ್ಲೇ ಪ್ರಾಣ ಬಿಡುವ ಎನ್ನುತ್ತಾರೆ.

ಭಯದಿಂದ ವ್ಯಾಕುಲಿತರಾದ ಕಪಿಗಳ ಮಾತನ್ನು ಕೇಳಿ ತಾರನು 'ನೀವೆಲ್ಲಾ ಒಪ್ಪುವುದಾದರೆ ಪುನಃ ಬಿಲವನ್ನು ಹೊಕ್ಕು ಇಲ್ಲೇ ಇದ್ದುಬಿಡೋಣ. ಆಹಾರ, ನೀರು ಸಮೃದ್ಧವಾಗಿದೆ. ರಾಮನಿಂದಾಗಲೀ ದೇವೇಂದ್ರನಿಂದಾಗಲೀ ಕಪಿ ರಾಜನಿಂದಾಗಲೀ ಯಾವುದೇ ಭಯವಿಲ್ಲ ಎನ್ನುತ್ತಾನೆ.



ಇ–ಮೇಲ್ ನ ಪಿತಾಮಹ – ಸಬಿರ್ ಭಟಿಯಾ

ಇವರೆಲ್ಲರ ಮಾತುಗಳನ್ನು ಕೇಳಿ ಹನುಮಂತನು ರಾಜ್ಯವು ಅಂಗದನಿಂದ ಅಪಹರಿಸಲ್ಪಟ್ಟಂತೆಯೇ ಎಂದು ಕಂಡುಬರುತ್ತದೆ. ಶುಕ್ರಾಚಾರ್ಯರ ಮಾತನ್ನು ಗೌರವಿಸುವ ಇಂದ್ರನಂತೆ ತಾರನ ಮಾತನ್ನು ಪುಷ್ಟೀಕರಿಸುತ್ತಾ ರಾಜ ಕಾರ್ಯದಲ್ಲಿ ಬಳಲಿಕೆ ತೋರಿಸುತ್ತಿರುವ ಸಕಲ ಶಾಸ್ತ್ರಜ್ಞರಲ್ಲಿಯೂ ಉತ್ತಮನೆನಿಸಿದ ಅಂಗದನನ್ನು ಸರಿದಾರಿಗೆ ತರಲು ಪ್ರಯತ್ನಿಸುತ್ತಾನೆ.

ತನ್ನ ವಾಕ್ಚಾತುರ್ಯದಿಂದ ಕಪಿ ವೀರರನ್ನು ಅಂಗದನಿಂದ ಬೇರ್ಪಡಿಸಿ ಕೋಪೋದ್ರಿಕ್ತನಾಗುತ್ತಾನೆ. ಅಂಗದಾ, ನೀನು ನಿನ್ನ ತಂದೆಗಿಂತಲೂ ಸಮರ್ಥನು. ಆದರೆ ಕಪಿಗಳೆಲ್ಲಾ ಚಂಚಲರು. ನೀನು ಆಜ್ಞಾಪಿಸುವುದನ್ನು ಸಹಿಸಲಾರರು. ಹಿರಿಯನಾದ ಜಾಂಬವಂತನೂ ಸೇನಾಧಿಪತಿಯಾದ ನೀಲನೂ, ಸಾಮ ದಾನ ದಂಡೋಪಾಯಗಳಿಂದ ಇವರನ್ನೆಲ್ಲಾ ಸುಗ್ರೀವನಿಂದ ಸೆಳೆದುಕೊಳ್ಳಲು ಸಾಧ್ಯವಿಲ್ಲ. ಬಿಲವೆಂದು ಹೇಳುವ ಪ್ರದೇಶವು ಲಕ್ಷ್ಮಣನ ಬಾಣಗಳಿಗೆ ಎಣೆಯಲ್ಲ. ನಮ್ಮ ಸಂಗಡ ಬಂದು ನಮ್ರತೆಯಿಂದ ಇರುವುದಾದರೆ ನಿನ್ನನ್ನು ಸುಗ್ರೀವನು ಅನುಕ್ರಮವಾಗಿ ಇರಗೊಡುವನು.

ಅವನು ನಿನ್ನ ತಾಯಿಗೆ ಹಿತವನ್ನುಂಟು ಮಾಡುವವನು. ಆತನಿಗೆ ಬೇರೆ ಮಕ್ಕಳೂ ಇಲ್ಲ. ಆದ್ದರಿಂದ ಹಿಂತಿರುಗಿ ಹೋಗು. ಅವನು ನಿನ್ನನ್ನು ಹೊಡೆಯುವುದಿಲ್ಲ ಎನ್ನುತ್ತಾನೆ.

ಸ್ಥಿರ ಚಿತ್ತವಾಗಲೀ, ದೇಹ ಶುದ್ಧಿಯಾಗಲೀ ಮನಶುದ್ಧಿ, ದಯೆಯಾಗಲೀ ಸುಗ್ರೀವನಿಗಿಲ್ಲ. ಧರ್ಮ ಶಾಸ್ತ್ರದ ಪ್ರಕಾರ ತಾಯಿಗೆ ಸಮಾನಳಾದ ಅಣ್ಣನ ಹೆಂಡತಿಯನ್ನು ಆತ ಬದುಕಿರುವಾಗಲೇ ಸ್ವೀಕರಿಸಿ ನಿಂದ್ಯವಾದ ಕಾರ್ಯ ಮಾಡಿದವನು. ಅಣ್ಣನು ಯುದ್ಧಕ್ಕೆ ಹೋದಾಗ ಬಿಲದ ಬಾಯಿ ಮುಚ್ಚಿದವನು. ಮಹಾತ್ಮನಾದ ರಾಮನ ಮಾತನ್ನೂ ಮರೆತವನು. ಧರ್ಮದ ಭಯಕ್ಕೆ ಹೆದರದೇ ಲಕ್ಷ್ಮಣನ ಭಯಕ್ಕೆ ಸೀತೆಯನ್ನು ಹುಡುಕಲು ನಮ್ಮನ್ನು ಕಳಿಸಿದವನು ಅವನನ್ನು ಯಾವಾತನು ನಂಬುತ್ತಾನೆ? ಶತ್ರುವಂಶಕ್ಕೆ ಸೇರಿದ ನನ್ನನ್ನು ಹೇಗೆ ಬದುಕಲು ಬಿಟ್ಟಾನು? ರಹಸ್ಯವಾಗಿ ಕಟ್ಟಿಹಾಕಿ ಶಿಕ್ಷೆ ವಿಧಿಸುವನು. ಅದಕ್ಕಿಂತ ಇಲ್ಲಿಯೇ ಪ್ರಾಯೋಪವೇಶ ಮಾಡುವೆನು. ಎಂದೂ ಹೇಳಿ ದರ್ಭೆಗಳನ್ನು ಹಾಸಿ ನೆಲದ ಮೇಲೆ ಮಲಗುತ್ತಾನೆ. ವಾನರ ಶ್ರೇಷ್ಠರು ಅಂಗದನ ಮಾತು ಕೇಳಿ ಸುಗ್ರೀವನನ್ನು ನಿಂದಿಸುತ್ತಾ ವಾಲಿಯನ್ನು ಹೊಗಳುತ್ತಾ ಪ್ರಾಯೋಪವೇಶಕ್ಕೆ ಸಿದ್ಧರಾಗಿ ಸಮುದ್ರದ ಉತ್ತರ ತೀರಕ್ಕೆ ಬಂದು ಸೇರುತ್ತಾರೆ. ಅಲ್ಲಿ ಹಿಂದೆ ನಡೆದ ಎಲ್ಲಾ ಘಟನೆಗಳನ್ನು ಹೇಳುತ್ತಾ ರಾಮನ ಕೋಪವನ್ನು ಕಪಿಗಳಿಗೆ ಭಯವದಗಿದ್ದನ್ನೂ ಗಟ್ಟಿಯಾಗಿ ಮಾತಾಡಿಕೊಳ್ಳುತ್ತಾ ಮಲಗಿದರು.

ಈ ಪ್ರಕರಣ ಮರಿ ಪುಢಾರಿಗಳ ಕೆಲಸಗಳನ್ನು ನೆನಪಿಸುತ್ತದೆ. ಸರಿಯಾದ ವಿವೇಚನೆ ಇಲ್ಲದೇ ತಾವೇ ಸರ್ವೋತ್ಕೃಷ್ಟರೆಂದು ಮಾಡುವ ಕೆಲಸಗಳಿಂದ ನಂತರ ಉಂಟಾಗುವ ಪರಿಣಾಮ ತಿಳಿದಿರುವುದಿಲ್ಲ. ಹಿರಿಯರಿಗೆ ಸಲ್ಲತಕ್ಕ ಸ್ಥಾನಮಾನ ಕೊಡದೇ ಎಲ್ಲವೂ ತಾನೂ ಹೇಳಿದಂತಾಗಬೇಕೆಂಬ ಅಹಂಕಾರ, ಸಮಯ ಸಿಕ್ಕಾಗ ಇತರರ ಕೆಲಸಗಳನ್ನು ದೂಷಿಸಿ ತಾವೂ ಮಾತ್ರ ಸತ್ಯಸಂಧರೆಂದು ಬಿಂಬಿಸಿಕೊಳ್ಳುವ ಪರಿ ಅಂಗದನ ನಡೆಯಿಂದ ವ್ಯಕ್ತವಾಗುತ್ತದೆ.

ಎದುರಿಗೆ ಸುಗ್ರೀವನಿಲ್ಲದ್ದರಿಂದ, ಮುಂದೆ ತಮಗೆ ಶಿಕ್ಷೆ ಕೊಡುತ್ತಾನೆಂಬ ಹೆದರಿಕೆಯಿಂದ ಅವನನ್ನೂ ದೂಷಿಸುವ ಪರಿಯಿಂದ, ಅಂಗದನು ಸುಗ್ರೀವನ ಬಗ್ಗೆ ಮಾತ್ಸರ್ಯವನ್ನು ವ್ಯಕ್ತಪಡಿಸುತ್ತಾನೆ. ಹಿರಿಯ ಕಪಿಗಳನ್ನು ಬಿಟ್ಟು ಕಪಿಗಳು ಅವನನ್ನೆ ಅನುಸರಿಸುವುದು ಪ್ರಯೋಪವೇಶಕ್ಕೆ ಸಿದ್ಧರಾದುದು, ಸಮೂಹ ಸನ್ನಿ ಎನ್ನಬಹುದು. ನಾಯಕನೆಂದು ಬಿಂಬಿಸಿಕೊಳ್ಳವನನ್ನು ಹಿಂಬಾಲಕರು ಅನುಸರಿಸುವುದು ನಡೆದು ಬಂದ ಸಂಪ್ರದಾಯ. ಧರ್ಮ ನೀತಿಗಳನ್ನು ತಮ್ಮ ನೇರಕ್ಕೆ ಅರ್ಥಮಾಡುವ ಕ್ರಮ ಹಿಂದಿನಿಂದಲೂ ಇತ್ತೆಂಬುದಕ್ಕೆ ಇದೊಂದು ನಿದರ್ಶನ.

---

ಸಂಪ್ರದಾಯ

# ಜೀವ ಹಿಂಸೆ ಮಾಡದೇ ಜೀವಿಸಲಾಗುವುದೇ?

**ಲೇ: ಜಿ.ವಿ. ಶರ್ಮಾಪಂಡಿತ್**

**"ಅಹಿಂಸಾ ಪರಮೋಧರ್ಮಃ"**

"ಅಹಿಂಸಾ ವ್ರತವನ್ನು ಆಚರಿಸುವುದಕ್ಕಿಂತಲೂ ದೊಡ್ಡ ಧರ್ಮವಿಲ್ಲ"

**ಶ್ಲೋ॥ ಅಹಿಂಸಾ ಸತ್ಯ ಮಸ್ತೇಯಂ**
**ಶೌಚಮಿಂದ್ರಿಯ ನಿಗ್ರಹಃ**
**ದಾನಂ ದಮೋ ದಯಾ ಕ್ಷಾಂತಿಃ**
**ಸರ್ವೇಷಾಂ ಧರ್ಮಸಂಗ್ರಹಃ ॥**



**–ಯಾಜ್ಞವಲ್ಕ್ಯ ಧರ್ಮಶಾಸ್ತ್ರ**

**ಧರ್ಮವೆಂದರೇನು? ಹಿಂಸೆ ಮಾಡದೇ ಇರುವುದು. ಸತ್ಯ ಹೇಳುವುದು, ಕಳುವು ಮಾಡದೇ ಇರುವುದು, ಶುಚಿಯಿಂದ ಇರುವುದು, ಇಂದ್ರಿಯಗಳನ್ನು ನಿಗ್ರಹಿಸುವುದು, ದಾನ ಮಾಡುವುದು, ದಯೆ ತೋರುವುದು, ಸಂಯಮದಿಂದ ಇರುವುದು,**

**ಕ್ಷಮಾಗುಣದಿಂದ ಇರುವುದು. ಈ ಒಂಭತ್ತು ಗುಣಗಳನ್ನು ಧಾರ್ಮಿಕ ಗುಣಗಳೆಂದು ಹೇಳುತ್ತಾರೆ.**

**ಜೀವಹಿಂಸೆ ಎಂದರೇನು?**

ಹೊಡೆಯುವುದು, ಬಯ್ಯುವುದು, ಬಂಧಿಸುವುದು, ಕೂಡಿಹಾಕುವುದು. ಕೊಲೆ ಮಾಡುವುದು. ಕೈ ಕಾಲುಗಳನ್ನು ಕತ್ತರಿಸುವುದು, ಭಯಗೊಳಿಸುವುದು, ಭಾರ ಹೇರಿಸುವುದು ಮುಂತಾದವುಗಳನ್ನು ಜೀವ ಹಿಂಸೆ ಎನ್ನುತ್ತಾರೆ.

**ಆದರೆ;**

**ಅನಿವಾರ್ಯ ಹಿಂಸೆಯನ್ನು ಜೀವಹಿಂಸೆ ಎನ್ನಲಾಗದು.**

ಅನಿವಾರ್ಯ ಹಿಂಸೆ ಎಂದರೆ, ಅಡುಗೆಯನ್ನು ಮಾಡುವಾಗ ಬೆಂಕಿಯಿಂದ, ಕಸಗುಡಿಸುವಾಗ ಕಸಬರಿಗೆಯಿಂದ, ಹಿಟ್ಟು ಮೊದಲಾದವುಗಳನ್ನು ಕುಟ್ಟುವಾಗ ಒನಕೆಯಿಂದ, ಒರಳಿನಿಂದ, ಇರುವೆಗಳಂಥಾ ಅನೇಕ ಅಲ್ಪಪ್ರಾಣಿಗಳು ಸಾಯುತ್ತವೆ. ಇದು ಜೀವಹಿಂಸೆಯಲ್ಲ.

ರೈತರು ಹೊಲವನ್ನು ಅಗೆಯುವಾಗ ಅನೇಕ ಭೂಗತ ಪ್ರಾಣಿಗಳು ಸಾಯುತ್ತವೆ. ಇನ್ನಿತರ ಹೊಲದ ಕೆಲಸಗಳನ್ನು ಮಾಡುವಾಗಲೂ ಅನೇಕ ಪ್ರಾಣಿಗಳು ಸಾಯುತ್ತವೆ. ಇದು ಜೀವಹಿಂಸೆಯಲ್ಲ.

ನಾವು ಬಂಡಿಯ ಮೇಲೆ ಕುಳಿತು ಹೋಗುವಾಗ, ದಾರಿಯಲ್ಲಿ ನಡೆಯುವಾಗ, ಅನೇಕ ಸೂಕ್ಷ್ಮಪ್ರಾಣಿಗಳು ಸಾಯುತ್ತವೆ. ಇದು ಜೀವಹಿಂಸೆಯಲ್ಲ.

ಮನೆಯಲ್ಲಿ ನಮ್ಮನ್ನು ಹಿಂಸಿಸುವ ತಿಗಣೆ, ದೋಮೆ, ಮುಂತಾದ ರಕ್ತ ಹೀರುವ ಪ್ರಾಣಿಗಳನ್ನು ಕೊಲ್ಲುವುದು ಕೂಡ ಹಿಂಸೆಯಾಗುವುದಿಲ್ಲ. ಹಾವು, ಚೇಳು, ಮುಂತಾದ ವಿಷಪ್ರಾಣಿಗಳನ್ನು, ಹುಲಿ, ಮೊಸಳೆ ಮುಂತಾದ ಕ್ರೂರ ಪ್ರಾಣಿಗಳನ್ನು ಕೊಲ್ಲುವುದೂ ಸಹ ಪಾಪವಾಗುವುದಿಲ್ಲ.

ನಮ್ಮನ್ನು ನಾವು ರಕ್ಷಿಸಿಕೊಳ್ಳುವುದಕ್ಕಾಗಿ ಯಾವ ಹಿಂಸೆ ನಡೆದರೂ ಪಾಪವಾಗುವುದಿಲ್ಲ. ಮಾತೃಭೂಮಿಯ ರಕ್ಷಣೆಗಾಗಿ ಹೋರಾಡುವ ಯೋಧರು ಶತ್ರುಗಳನ್ನು ಸಂಹರಿಸುವುದು ಪಾಪವಲ್ಲ.

**ನಮ್ಮ ಮನಸ್ಸೇ ನಮಗೆ ಮುಖ್ಯ ಶತ್ರುವೇ?**

**ಹೌದು!**

**ನಮ್ಮ ಮನಸ್ಸೇ ನಮ್ಮ ಮಿತ್ರ! ನಮ್ಮ ಮನಸ್ಸೇ ನಮ್ಮ ಶತ್ರು!**

ನಮ್ಮ ಎಲ್ಲಾ ಸಮಸ್ಯೆಗಳಿಗೆ ಮತ್ತು ನಮ್ಮ ಎಲ್ಲಾ ಸುಖಸಂತೋಷಗಳಿಗೆ ನಮ್ಮ ಮನಸ್ಸೇ ಮುಖ್ಯ ಕಾರಣವಾಗಿದೆ.

**ಉದ್ಧರೇದಾತ್ಮ ನಾತ್ಮಾನಂ**
**ಆತ್ಮಾನ ಮವ ಸಾಧಯೇತ್।**
**ಆತ್ಮೈವ ಹ್ಯಾತ್ಮನೋಬಂಧುಃ**
**ಆತ್ಮೈವ ರಿಪುರಾತ್ಮನಃ॥ ಗೀತಾ–6.5**

ಮನಸ್ಸನ್ನು ಗೆದ್ದವನೇ ಮಹಾತ್ಮನು. ಮನಸ್ಸಿಗೆ ವಶನಾದವನೇ ಮೂರ್ಖನು. ಕಣ್ಣಿಗೆ ಹಿತವಾದ ಪ್ರತಿಯೊಂದನ್ನು ಮನಸ್ಸು ಬಯಸುತ್ತದೆ. ಗೆಳೆಯನ ಹೆಂಡತಿಯು ಸಹ ಚಂದವಾಗಿದ್ದರೆ "ಇಂಥವಳು ನನ್ನವಳಾಗಲಿಲ್ಲವಲ್ಲಾ" ಎಂದು ಮನಸ್ಸು ಕೊರಗುತ್ತದೆ. ಒಬ್ಬ ಶ್ರೀಮಂತನ ಸುಖದ ಸುಪ್ಪತ್ತಿಗೆಯನ್ನು ನೋಡಿ "ನಾನೇ ಶ್ರೀಮಂತನಾದರೆ ಎಂಥಾ ಸುಖವನ್ನು ಅನುಭವಿಸುತ್ತಿದ್ದೆನೋ" ಎಂದು ದುರಾಸೆಗೆ ಬೀಳುತ್ತದೆ. ಬೀದಿಯಲ್ಲಿ ಹೋಗುವಂಥಾ ಸುಂದರಿಯಾದ ಹುಡುಗಿಯನ್ನು ನೋಡಿ ಬಗೆಬಗೆಯಾಗಿ ತಡವರಿಸುತ್ತದೆ. ಅಕ್ಕ ಪಕ್ಕದವರ ಅದೃಷ್ಟವನ್ನು ನೋಡಿ ಅಸೂಯೆ ಪಡುತ್ತದೆ. ಎಷ್ಟು ಸುಖವಾಗಿ ಇದ್ದರೂ ಇನ್ನೂ ಸುಖವಾಗಿರಬೇಕೆಂದು ಬಯಸುತ್ತದೆ. ನಮ್ಮನ್ನು ಸುಖಪಡಲು ಬಿಡುವುದಿಲ್ಲ. ಅಸಂತೃಪ್ತಿಯಲ್ಲಿ ಮುಳುಗಿಸಿ ಗೋಳಾಡಿಸುತ್ತದೆ. ದುರಾಸೆಗಳನ್ನು ಕಲ್ಪಿಸಿ ಅಶಾಂತಿಯಲ್ಲಿ ಬೀಳಿಸುತ್ತದೆ. ನಾವೆಷ್ಟು ಸಮಾಧಾನಗೊಳಿಸಬೇಕೆಂದರೂ ಸಾಧ್ಯವಾಗುವುದಿಲ್ಲ.

ಸಾವು ಸತ್ಯವೆಂದು ಗೊತ್ತು. ಹೆಂಡತಿಯಾಗಲೀ, ಮಕ್ಕಳಾಗಲೀ, ಬಂಧು ಮಿತ್ರರಾಗಲೀ, ಹಣವಾಗಲೀ, ಕೊನೆಗೆ ನಮ್ಮ ದೇಹವಾಗಲೀ ನಮ್ಮ ಪ್ರಾಣದ ಜೊತೆ ಪರಲೋಕಕ್ಕೆ ಬರುವುದಿಲ್ಲವೆಂದು ಎಲ್ಲರಿಗೂ ಗೊತ್ತಿದೆ. ಆದರೂ ಕೋತಿಯ ಮನಸ್ಸಿನ ಕುಣಿತವನ್ನೇ ಅನುಕರಿಸಿ ಅನುಸರಿಸಿ ಹಾಳಾಗಿ ಬಿಡುತ್ತೇವೆ.

**ಜಿತಾತ್ಮನಃ ಪ್ರಶಾಂತಸ್ಯ ಪರಮಾತ್ಮಾಸಮಾಹಿತಃ।**
**ಶೀತೋಷ್ಣ ಸುಖದುಃಖೇಶು ತಥಾಮಾನಾಪಮಾನಯೋಃ॥**
**–ಭಗವದ್ಗೀತಾ ಧ್ಯಾನಯೋಗ**

ಮನಸ್ಸನ್ನು ಗೆದ್ದವನೇ ಪರಮಾತ್ಮನನ್ನು ನೋಡಬಲ್ಲನು. ಮನಸ್ಸನ್ನು ಗೆದ್ದವನಿಗೆ ಮಾತ್ರ ಸರ್ವಶಕ್ತಿಗಳು ವಶವಾಗುತ್ತವೆ. ಯಾವನ ಮನಸ್ಸು ತನ್ನ ಸ್ವಾಧೀನದಲ್ಲಿರುತ್ತದೆಯೋ ಅವನನ್ನು ಚಳಿಯೂ ನಡುಗಿಸಲಾಗದು. ಬಿಸಿಲು ಪ್ರಖರತೆ ತೋರಿಸಲಾಗದು. ಸುಖ ದುಃಖಗಳೆರಡು ವಶಮಾಡಿಕೊಳ್ಳಲಾಗದು. ಯಾವ ಆಸೆಯೂ ಹತ್ತಿರಕ್ಕೆ ಬರಲಾಗದು.

**"ಮನಃ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ"**

ಮನಸ್ಸೇ ಮನುಷ್ಯನ ಬಂಧನಕ್ಕೆ ಮುಖ್ಯ ಕಾರಣ. ಮನಸ್ಸಿನ ಕಾರಣದಿಂದಲೇ ಮನುಷ್ಯನು ಅನುಬಂಧನಗಳಿಗೆ ವಶನಾಗಿ ಬಂಧನದಲ್ಲಿ ಬೀಳುತ್ತಾನೆ. ಲಕ್ಷಕ್ಕೊಬ್ಬರೂ ಈ ವಜ್ರಮುಷ್ಠಿಯಿಂದ ಬಿಡುಗಡೆ ಹೊಂದಲಾರರು. ದೂಷಣ ತಿರಸ್ಕಾರಗಳನ್ನು ವ್ಯಾಮೋಹದ ಕಾರಣದಿಂದ ಭರಿಸುತ್ತಾ ಮುನ್ನಡೆಯುತ್ತಲೇ ಇರಬೇಕಾಗುತ್ತದೆ. ಇದಕ್ಕೆ ಕಾರಣ ನಮ್ಮ ಮನಸ್ಸು! ಜ್ಞಾನೇಂದ್ರಿಯ(ಕಣ್ಣು, ಕಿವಿ, ಬಾಯಿ, ಮೂಗು, ಶರೀರ) ಗಳ ವಶನಾಗಿಸಿ, ಕಣ್ಣು ವಿನೋದವನ್ನು, ಮೂಗು ಸುಗಂಧವನ್ನು, ಬಾಯಿ ರುಚಿಗಳನ್ನು, ಕಿವಿಗಳು ಸಂಗೀತಾದಿ ಹಾಡುಗಳನ್ನು, ಶರೀರವು ಸುಖವನ್ನು ಬಯಸುತ್ತವೆ! ಐಹಿಕ ಭೋಗಗಳಿಗೆ ದಾಸನಾಗಿರುವುದು ಮನಸ್ಸು! ಮನುಷ್ಯನ ಪರಮ ಶತ್ರುಗಳಾದ ಕಾಮ, ಕ್ರೋಧ, ಲೋಭ, ಮದ, ಮತ್ಸರಗಳಿಗೆ(ಅರಿಷಡ್ವರ್ಗ) ನಮ್ಮನ್ನು ಅಧೀನ ಮಾಡುವುದು ನಮ್ಮ ಮನಸ್ಸೇ!



**ಆದರೆ;**
**ಆದರೆ;;**
**ಆದರೆ;;;**
**ನಮ್ಮ ಮನಸ್ಸನ್ನು ಕೈವಶಮಾಡಿಕೊಂಡವರೇ,**
**ನಾವೇ ಬುದ್ಧ ಮಹಾತ್ಮರಾಗಬಹುದು!**
**ನಾವೇ ಸ್ವಾಮಿ ದಯಾನಂದರು ಆಗಬಹುದು!**
**ಕೊನೆಗೆ**
**ನಾವೇ ದೈವತ್ವವನ್ನು ವಶಮಾಡಿಕೊಂಡು ದೇವರಾಗಬಹುದು.**
**ಇದು ಸತ್ಯ! ಮಹಾಸತ್ಯ!! ಪರಮಸತ್ಯ!!**
**'ಬಂಧಾಯ ವಿಷಯಾಸಂಗೋ, ಮುಕ್ತ್ಯೈ ನಿರ್ವಿಷಯಂಮನಃ'**

ಇಂದ್ರಿಯ ಬಂಧನಗಳಿಂದ ಮನಸ್ಸನ್ನು ದೂರೀಕರಿಸಿದರೆ, ಮುಕ್ತಿಯ ಮಾರ್ಗ ಕಣ್ಮುಂದೆ ಸಾಕ್ಷಾತ್ಕಾರವಾಗುತ್ತದೆ. ಜಗತ್ತೇ ನಮಗೆ ಕೈವಾರ ಮಾಡುತ್ತದೆ. ಕೈಮುಗಿಯುತ್ತದೆ.

**ಆದ್ದರಿಂದ**

ಹುಚ್ಚು ಮನಸ್ಸು ಆಡಿಸಿದಂತೆ ನಾವು ಆಡಬಾರದು. ಕಂಡದ್ದೆಲ್ಲಾ ಕೈಗೆ ಸಿಗಬೇಕೆಂದು ಬಯಸಬಾರದು. ಅನಾಯಾಸ ಸುಖಗಳಿಗೆ ಆಸೆ ಪಡಬಾರದು. ಮನೆಯವರ ಬಯಕೆಗಳಿಗೆ ನಾವು ಮಲಿನವಾಗಬಾರದು. ಸಂತೃಪ್ತಿ ಎಂಬ ಔಷಧವನ್ನು ನಮ್ಮಲ್ಲಿಟ್ಟುಕೊಂಡರೆ ದುರಾಶೆ ಎಂಬ ರೋಗ ನಮ್ಮ ಬಳಿಗೆ ಬರುವುದಿಲ್ಲ. ನಿರಾಶೆ ನಿಸ್ಪೃಹಗಳು ತಾವೇ ವಾಸಿಯಾಗಿ ಮಾಯವಾಗುತ್ತವೆ.

**ಮನಸ್ಸೇ ನಮ್ಮ ಶತ್ರು, ಮನಸ್ಸೇ ನಮ್ಮ ಮಿತ್ರ**
**ಮನಸ್ಸನ್ನು ಗೆದ್ದರೆ ವಿಧಿಯನ್ನೂ ಗೆಲ್ಲಬಹುದು!**

# ಪರಮೇಶ್ವರನ ಇಪ್ಪತ್ತೈದು ಲೀಲೆಗಳು

**16 ವಿಷ್ಣುವಿಗೆ ಸುದರ್ಶನ ಚಕ್ರ ಪ್ರಧಾನ ಲೀಲೆಯು**

ಪರಮೇಶ್ವರನು ಜಲಂಧರನ ಶಿರವನ್ನು ಚಕ್ರದಿಂದ ಹರಿದನಷ್ಟೇ. ಆ ಸುದರ್ಶನ ಚಕ್ರವು ತನ್ನಲ್ಲಿದ್ದರೆ ರಾಕ್ಷಸರನ್ನು ಅನಾಯಾಸವಾಗಿ ಸಂಹರಿಸಿ ತಾನು ಸುರಕ್ಷಿತ ಇರಬಹುದೆಂದು ವಿಷ್ಣುವು ಆಲೋಚಿಸಿದನು. ಆದರೆ ಅದನ್ನು ಪರಮೇಶ್ವರನಿಂದ ಪಡೆಯಬೇಕಾಗಿತ್ತು. ಅದಕ್ಕಾಗಿ ಪರಮೇಶ್ವರನನ್ನು ನಿತ್ಯವು ಸಹಸ್ರ ಕಮಲಗಳಿಂದ ಪೂಜಿಸಿ ತನ್ನ ವಾಂಛಿತನವನ್ನು ಪರಮೇಶ್ವರನು ನಡೆಸಿಕೊಡಬೇಕೆಂದು ಅನನ್ಯಭಾವನೆಯಿಂದ ಸುತ್ತಿಸುತ್ತಿದ್ದನು.

ಹೀಗೆ ಬಹುಕಾಲ ಮಾಡುತ್ತ ಬರುತ್ತಿರುವಾಗ ಪರಮೇಶ್ವರನಿಗೆ ಕರುಣೆ ಹುಟ್ಟಿತು. ಆದರೂ ಒಮ್ಮೆ ವಿಷ್ಣುವಿನ ಭಕ್ತಿಯನ್ನು ಪರೀಕ್ಷಿಸಬೇಕೆಂದು ಒಂದು ಕಮಲವನ್ನು ಇಲ್ಲದಂತೆ ಮಾಡಿದನು. ವಿಷ್ಣುವು ಒಂದು ಕಮಲ ಕಡಿಮೆಯಾಯಿತಲ್ಲವೆಂದು ಚಿಂತಿಸಿದನು. ಆದರೆ ಪೂಜೆಯನ್ನು ಬಿಟ್ಟು ಎದ್ದು ಹೋಗುವಂತೆಯೂ ಇರಲಿಲ್ಲ. ಆಗ ವಿಷ್ಣುವು ಶ್ರೇಷ್ಠವಾದ ತನ್ನ ನೇತ್ರ ಕಮಲವನ್ನು ಕಿತ್ತು ಪರಮೇಶ್ವರನ ಪಾದಕ್ಕೆ ಅರ್ಪಿಸಿದನು.



ಏಷಿಯನ್ ಕ್ರೀಡೆಯ ಪಿತಾಮಹ – ಜೆ.ಡಿ.ಸೊಂಧಿ

ಪರಮೇಶ್ವರನು ತುಂಬಾ ಸಂತುಷ್ಟನಾಗಿ, ವಿಷ್ಣುವಿನ ನಿಜಭಕ್ತಿಗೆ ಮೆಚ್ಚಿ, ಮೊದಲಿದ್ದಂತೆ ಅವನ ನೇತ್ರ ಕಮಲವನ್ನು ಅವನಿಗೆ ಕೊಟ್ಟು ಅವನ ಇಷ್ಟಾರ್ಥವಾಗಿ ಸುದರ್ಶನ ಚಕ್ರವನ್ನು ಪ್ರಧಾನ ಮಾಡಿ ರಾಕ್ಷಸರ ಕಾಟದಿಂದ ಸುರಕ್ಷಿತವಾಗಿರುವಂತೆ ವರ ನೀಡಿದನು ಎಂಬಲ್ಲಿಗೆ ವಿಷ್ಣುವಿಗೆ ಚಕ್ರಪ್ರಧಾನ ಲೀಲೆಯು ಮುಗಿದುದು.

**ಮಹಾಕ್ಷತ್ರಿಯ**

# ಭಾರ್ಗವೋಪದೇಶ

**ಲೇ: ದೇವುಡು**

"ಮರೆವೇ ಅರಿವಾಗುವುದಾದರೆ ಗುರುವಿನ ಉಪದೇಶ ಬೇಕು ಎನ್ನುವುದೇಕೆ?"

"ಮರಿಗೆ ಹಾರುವುದನ್ನು ತಾಯಿಹಕ್ಕಿ ಕಲಿಸಿಕೊಡುವಂತೆ ಗುರುವು ಉಪದೇಶಮಾಡಿ ಉದ್ಧರಿಸುವನು. ಆದರೆ ಅದೇ ಹಕ್ಕಿಯು ಹಸುವಿಗೋ ಹುಡುಗನಿಗೋ ಹಾರುವುದನ್ನು ಕಲಿಸಲು ಸಾಧ್ಯವೇನು? ಅದರಂತೆ, ಉಪದೇಶವು ಮನಸ್ಸಿನಲ್ಲಿ ಅವ್ಯಕ್ತವಾಗಿರುವುದನ್ನು ವ್ಯಕ್ತಪಡಿಸುವುದು. ಬಾವಿಯಲ್ಲಿರುವ ನೀರನ್ನು ಸೇದಿ ಹೊಯ್ದು ತಾಪವನ್ನು ಆರಿಸುವಂತೆ, ಶಿಷ್ಯನ ಮರೆವಿನ ಮೇಲೆ ತನ್ನ ಅರಿವಿನ ಬೆಳಕನ್ನು ಚೆಲ್ಲಿ, ಅದನ್ನೇ ಅರಿವು ಮಾಡಿ ತೋರಿಸುವವನು ಗುರುವು. ಅಲ್ಲಿ ಇಲ್ಲದ ಅರಿವನ್ನು ಆತನು ತಂದು ತುಂಬುವುದಿಲ್ಲ. ಈ ದೃಷ್ಟಿಯಿಂದ ನೋಡಿದರೆ, ಆಗ ಸಂದೇಹವು ಅರಿವು–ಮರೆವುಗಳ ಸಂಧಿಸ್ಥಾನ. ಶ್ರದ್ಧಾವಂತನು ಮರೆವಿನ ಮೇರೆಯನ್ನು ಮೀರಿ ಅರಿವನ್ನು ತಟ್ಟುವನು. ಉಯ್ಯಾಲೆಯು ತೂಗುತ್ತಿರುವಾಗ ತನಗೆ ಬೇಕಾದ ಕಡೆಗೆ ಹಾರಬಹುದು ಹೇಗೋ ಹಾಗೆ ಇಲ್ಲಿಯೂ, ಸಂದೇಹದಲ್ಲಿಯೂ ಹಾಗೂ ಆಗಬಹುದು, ಹೀಗೂ ಆಗಬಹುದು. ಗುರುವನ್ನು ಪಡೆದವನು ತಪ್ಪದೆ ಅರಿವಿನ ಕಡೆಗೇ ತಿರುಗುವನು. ಹಾದಿ ಬಲ್ಲವನ ಹಿಂದೆ ಹೋದವನಿಗೆ ಹಾದಿ ತಪ್ಪುವ ಭೀತಿಯುಂಟೆ? ಅದರಂತೆ."

ಪುರೋಹಿತನು ಕೈಮುಗಿದು ತನ್ನ ಆಸನದಲ್ಲಿ ಕುಳಿತನು.

ರಾಜಗುರುವು ಚಕ್ರವರ್ತಿಯ ಅಪ್ಪಣೆ ಪಡೆದು ಎದ್ದುನಿಂತನು. ಕೇಳಿದನು: "ಭಗವಾನ್, ನಾವು ಮನುಷ್ಯರು. ನಮಗೆ ಸತ್ಯದರ್ಶನವು ಆಗುವುದು ಹೇಗೆ? ಅಪ್ಪಣೆಯಾಗಬೇಕು."

ಭಗವಾನರು ಮಂದಸ್ಮಿತವದನರಾಗಿ ಮತ್ತೆ ಹೇಳಿದರು: "ರಾಜಗುರುಗಳ ಪ್ರಶ್ನವು ಚೆನ್ನಾಗಿದೆ. ಸತ್ಯದರ್ಶನವು ಎಲ್ಲರಿಗಿಂತ ಹೆಚ್ಚಾಗಿ ದಂಡ್ಯರನ್ನು ದಂಡಿಸುವ ರಾಜನಿಗೂ, ಆ ರಾಜನಿಗೆ ಮಾರ್ಗದರ್ಶಿಯಾದ ರಾಜಗುರುವಿಗೂ ಬೇಕಾದುದು. ಆದುದರಿಂದ ತಾವು ಈ ಪ್ರಶ್ನವನ್ನು ಕೇಳಿದುದು ಪರಮಸಾಧುವಾಯಿತು. ಆಗಲಿ, ಹೇಳೋಣ."

"ಸತ್ಯಕ್ಕೆ ಎರಡು ರೂಪ. ಇಂದ್ರಿಯಗೋಚರವಾಗುವ ರೂಪವೊಂದು, ಅದು ಚರರೂಪ. ಇಂದ್ರಿಯಗೋಚರವಾಗದ ಸ್ಥಿರರೂಪವೊಂದು. ಚರರೂಪವು ಸ್ಥಿರ ರೂಪದ ಪ್ರತಿಬಿಂಬ. ಲೋಕವೆಲ್ಲವೂ ಅರಿತಿರುವುದು ಈ ಚರರೂಪವನ್ನು, ಅಲೆಗಳಂತೆ ಚಂಚಲವಾದುದು ಇದು. ಹೊತ್ತು ಹೊತ್ತಿಗೆ ಹೊಸತಾಗುತ್ತಿರುವುದು ಇದರ ಸ್ವಭಾವ. ಇದು ದೇಶದೇಶಕ್ಕೂ ಬೇರೆಯಾಗುತ್ತಿರುವುದು. ಅಷ್ಟೇನು? ಸಂಗೀತದಂತೆ ಎನ್ನಿ. ನಿಮ್ಮ ರುಚಿಯಿಂದ ಸಂಗೀತಕ್ಕೆ ಬೆಲೆ. ನಿಮ್ಮ ಜ್ಞಾನ ಸಂಸ್ಕಾರಗಳಿಂದ ರುಚಿಯೂ ಭಿನ್ನೈಸುವುದು. ಹಾಗೆ, ಹುಡುಗನಿಗೆ, ತರುಣನಿಗೆ, ವೃದ್ಧನಿಗೆ ಸತ್ಯವು ಬೇರೆ ಬೇರೆಯಾಗುವುದು. ಆದರೆ ಆ ಸ್ಥಿರರೂಪವಾದ ಸತ್ಯವಿದೆಯಲ್ಲ ಅದು ಬೇರೆ. ಅದು ಎಲ್ಲರಿಗೂ ಎಲ್ಲ ದೇಶಗಳಲ್ಲಿಯೂ ಎಲ್ಲ ಕಾಲಗಳಲ್ಲಿಯೂ ಒಂದೇ.

ಈ ಲೋಕದಲ್ಲಿ ಅದು ಧರ್ಮವಾಗಿ ಗೋಚರವಾಗುವುದು. ಧರ್ಮವು ಸತ್ಯದ ಚರರೂಪದಲ್ಲಿ ಸ್ಥಿರರೂಪವನ್ನು ಆರಾಧಿಸುವಿಕೆ. ಅದಕ್ಕೆ ಚರರೂಪಕ್ಕಿರುವಷ್ಟೂ ಮುಖಗಳುಂಟು. ಅದರಿಂದಲೇ ಧರ್ಮವು ವ್ಯಕ್ತಿಗಳಿಗೆ , ಕಾಲಗಳಿಗೆ, ದೇಶಗಳಿಗೆ ಬೇರೆಬೇರೆಯಾದರೂ, ಎಲ್ಲರಿಗೂ ಅನ್ವಯಿಸುವುದು. ಸಾಮಾನ್ಯರೂಪದಿಂದ ಸಾಧಾರಣವಾಗಿ ಎಲ್ಲರಿಗೂ ಅನ್ವಯಿಸಿದರೂ ವಿಶೇಷರೂಪದಿಂದ ಭಿನ್ನೈಸುವುದೇ ಅದರ ಸ್ವಭಾವ ಎಂದು ಅದಕ್ಕೆ ಗೌರವ. ಅದು ಎಲ್ಲರಿಗೂ ಬೇಕಾಗಿರುವುದು ಅದೇ ಕಾರಣದಿಂದಲೇ. ಕೆಲವು ಪ್ರಾಣಿಗಳಿಗೆ ಮಾಂಸವು ಅನ್ನ. ಕೆಲವಕ್ಕೆ ಹುಲ್ಲು ಅನ್ನ. ಕೆಲವರಿಗೆ ಗೋಧಿಯು ಅನ್ನ. ಇನ್ನು ಕೆಲವರಿಗೆ ಹಣ್ಣುಗಳು ಅನ್ನ. ಹೀಗೆ ರೂಪದಿಂದ ಬೇರೆಬೇರೆಯಾದರೂ ಎಲ್ಲರಿಗೂ ಅನ್ನವು ಒಂದೇ ಹೇಗೆಯೋ, ಹಾಗೆಯೇ ಧರ್ಮವು ಆಚಾರದಲ್ಲಿ ಬೇರೆಬೇರೆಯಾದರೂ ಮೇಲಕ್ಕೆ ಏರಲು ಬೇಕಾಗುವ ಏಣಿಯೆಂದು ಎಲ್ಲರಿಗೂ ಬೇಕಾಗುವುದು. ಹೀಗೆ ವ್ಯವಹಾರದಲ್ಲಿ ಕಾಣುವ ಸತ್ಯವು ಧರ್ಮದ ಅನುಷ್ಠಾನದಿಂದ ಕಾಣುವುದು.

ಈ ಧರ್ಮವು ಚೋದನಾತ್ಮಕವಾದುದು; ಎಂದರೆ ಇದೇ ಎಲ್ಲರನ್ನೂ ಕಾರ್ಯಪರರನ್ನಾಗಿ ಮಾಡುವುದು. ತಾನು ಮಾಡಬೇಕಾದ ಕಾರ್ಯವೊಂದುಂಟು ಎಂದು ಮಾನವನಿಗೆ ತೋರುವುದು ಇದೆಯಲ್ಲವೆ? ಇದೇ ಚೋದನೆಯು.

ಲೋಕದಲ್ಲಿರುವ ನೀರೆಲ್ಲವೂ ಮಳೆಯಿಂದಲೇ ಬಂದುದು. ಹಾಗೆಯೇ ಒಳ್ಳೆಯದಾಗಲಿ, ಕೆಟ್ಟದಾಗಲಿ, ಎಲ್ಲಕ್ಕೂ ಧರ್ಮವೇ ಚೋದಕವು. ನೀರು ಮೇಲಿನಿಂದ ಇಳಿಯುವಾಗ ಅದರಲ್ಲಿ ವಾಸನೆಯಾಗಲಿ ರುಚಿಯಾಗಲಿ ಇಲ್ಲದಿದ್ದರೂ, ಭೂಮಿಯಲ್ಲಿ ರುಚಿಯೂ

ವಾಸನೆಯೂ ಇಲ್ಲದಿರುವ ನೀರು ಉಂಟೇನು! ಹಾಗೆ ಧರ್ಮವೇ ಪ್ರೇರಿಸಿದ್ದರೂ ಕಾರ್ಯವು ಆಗುವಾಗ ಕಾರ್ಯಕರ್ತನಲ್ಲಿರುವ ಸತ್ತ್ವರಜಸ್ತಮೋಗುಣಗಳ ಸಂಸರ್ಗದಿಂದ ಧರ್ಮಾಧರ್ಮಗಳು ಏರ್ಪಡುವುದು. ಲೋಕದ ಸುಸ್ಥಿತಿಯನ್ನು ಕಾಪಾಡಲು ಶಕ್ತವಾದುದು, ಕರ್ತೃವಿನ ಅಂಶವು ಆದಷ್ಟು ಕಡಿಮೆಯಾಗಿರುವುದು, ಪುಣ್ಯಫಲಪ್ರದವಾಗಿದ್ದು, ಇತರರಿಗೂ ತನಗೂ ಸಂತೋಷವನ್ನು ಕೊಡುವುದು ಯಾವುದೋ ಅದೆಲ್ಲವೂ ಧರ್ಮವು. ಇದಕ್ಕೆ ವಿರುದ್ಧವಾದುದೆಲ್ಲ ಅಧರ್ಮವು.

ಧರ್ಮವು ಬೇಕು ಎನ್ನುವವನು ಮೊದಲು ಅಂತರಂಗಶುದ್ಧಿಯನ್ನು ಸಂಪಾದಿಸಬೇಕು. ಶುದ್ಧವಲ್ಲದ ಅಂತರಂಗದಲ್ಲಿ ತೋರುವುದೆಲ್ಲ ಅಧರ್ಮವೇ. ಅಂತರಂಗ ಶುದ್ಧಿಯು ದೇಹವೂ ಮನಸ್ಸೂ ಸರಿಯಾಗಿರುವಾಗ ಮಾತ್ರ ಸಾಧ್ಯವು. ಆದುದರಿಂದ ಆಹಾರ, ವಿಹಾರ, ವಿಚಾರ, ವ್ಯವಹಾರ, ನಾಲ್ಕೂ ಶುದ್ಧಿಯಾಗಿದ್ದರೆ ಮಾತ್ರ ಅಂತರಂಗಶುದ್ಧಿಯು. ಅದರಿಂದ ಧರ್ಮಕಾಮನಾದವನು ಈ ನಾಲ್ಕರಲ್ಲೂ ವಿವೇಕವುಳ್ಳವನಾಗಬೇಕು. ವಿವೇಕವೆಂದರೆ ಸತ್ತ್ವಗುಣವನ್ನು ಪೋಷಿಸಿ ಮಿಕ್ಕೆರಡನ್ನೂ ತುಳಿಯುವಂತಹ ಬೇಕುಬೇಡಗಳ ಜ್ಞಾನ. ಇದನ್ನು ಸಂಪಾದಿಸಿಕೊಳ್ಳಲು ಎರಡು ಹಾದಿ; ಒಂದು ತನ್ನ ಅನುಭವವೆಂಬ ಕಷ್ಟದ ಹಾದಿ. ಇನ್ನೊಂದು ಬಲ್ಲವರ ಉಪದೇಶವೆಂಬ ಸುಲಭದ ಹಾದಿ. ಆ ಉಪದೇಶವೂ ಸ್ವಾರ್ಥವಿಲ್ಲದೆ ರೋಗನಿವಾರಕವಾದ ಔಷಧದಂತೆ ಅನುಭವಸಿದ್ಧವಾಗಿದ್ದರೆ ಮಾತ್ರ ಶಾಸ್ತ್ರವಾಗುವುದು.

ಈ ಧರ್ಮವನ್ನು ಆಚರಿಸುತ್ತಿರುವವರಿಗೆ ಸತ್ಯದ ಸ್ಥಿರರೂಪವು ಗೋಚರವಾಗುವುದು.

ಸತ್ಯವು ನೇರವಾಗಿ ಏಕೆ ತಿಳಿಯಬಾರದು ಎನ್ನುವಿರೇನೋ? ಹಾಲು ಇಟ್ಟಿದ್ದ ಕಡೆಯೇ ಕೆನೆಕಟ್ಟುವಂತೆ ಮನಸ್ಸು ಬುದ್ಧಿಗಳು ತಮ್ಮ ಅಲ್ಪತ್ವದಿಂದ ಅಜ್ಞಾನದ ಮುಸುಕನ್ನು ಎಳೆದುಕೊಳ್ಳುತ್ತಿರುವುವು. ಆಗ ಸತ್ಯವು ಎದುರು ನಿಂತರೂ ಮುಚ್ಚಿದ ಕಣ್ಣಿಗೆ ಕಂಡ ರೂಪದಂತೆ ಆಗುವುದು. ಅಲ್ಲದೆ ಸತ್ಯವು ಕೂಡ ದೇಶಕಾಲಾತ್ಮಕವಾದ ಜಗತ್ತಿನಲ್ಲಿ ಕಾಣುವಾಗ ಯೋಗಮಾಯೆಯ ಛಾಯೆಗೆ ಒಳಪಟ್ಟಿರುವುದರಿಂದ ಅದು ಥಟ್ಟನೆ ಕಾಣದಾಗುವುದು. ಅದರಿಂದಲೇ ಸತ್ಯಧರ್ಮಗಳಿಗೆ ಚಿನ್ನದ ಪಾತ್ರೆಯನ್ನು ಮುಚ್ಚಿದೆಯೆಂದು ವೇದಗಳಲ್ಲಿ ಹೇಳಿರುವುದು. ಅದನ್ನು, ಆ ಪಾತ್ರೆಯನ್ನು ಪೂಷಾದೇವನೊಬ್ಬನು ತೆಗೆಯಬಲ್ಲನು. ಒಮ್ಮೆ ಆತನ ದಯೆಯಿಂದ ಸತ್ಯಧರ್ಮಗಳ ದರ್ಶನವಾದರೆ, ಅದು ಎಂದಿಗೂ ಮರೆಯುವುದಿಲ್ಲ.

ಅಲ್ಲದೆ, ಸತ್ಯವು ಬುದ್ಧಿಗೆ ಗೋಚರವಾದಾಗ, ವ್ಯಕ್ತಿ ಕಾಲದೇಶಾನುಗುಣವಾಗಿ ವ್ಯತ್ಯಾಸವನ್ನು ಹೊಂದಿ, ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬವು ಗಾಜಿನ ಹಿಂದಿನ ರಸದ ಪ್ರಾಬಲ್ಯ–ಅಪ್ರಾಬಲ್ಯಗಳಿಂದ ಹೆಚ್ಚು ಕಡಿಮೆಯಾಗುವಂತೆ ಹೆಚ್ಚು ಕಡಿಮೆಯಾಗುವುದು. ಅದನ್ನು ಸ್ಪಷ್ಟವಾಗಿ ದೃಷ್ಟಿದೋಷವಿಲ್ಲದಂತೆ ಕಾಣಬೇಕಾದರೆ ಬ್ರಹ್ಮಲೋಕಕ್ಕೆ ಹೋಗಬೇಕು. ಅಥವಾ ತಾನಿರುವಲ್ಲಿಗೆ ಬ್ರಹ್ಮಲೋಕವು ಬರುವಂತೆ ಮಾಡಿಕೊಳ್ಳಬೇಕು. ಅಲ್ಲಿ ಆ ಸತ್ಯವು ಹಗಲಿನಲ್ಲಿ ಕಂಡಂತೆ ಕಾಣುವುದು. ಅಂತರಂಗಶುದ್ಧಿಯನ್ನು ಸಂಪಾದಿಸಿಕೊಂಡು ಸತ್ಯದರ್ಶನ ಮಾಡುವರು. ತಾವು ಕಂಡುದು ಸರಿಯೆಂದು ನಿಶ್ಚಯಿಸಿಕೊಳ್ಳಲು ಹಿಂದಿನ ಶಾಸ್ತ್ರಜ್ಞರ ವಾಣಿಯನ್ನು ನೆನೆಸಿಕೊಳ್ಳುವರು. ಇವೆರಡಕ್ಕೂ, ಎಂದರೆ ತಮ್ಮ ದರ್ಶನಕ್ಕೂ ಹಿಂದಿನವರ ಶಾಸ್ತ್ರಕ್ಕೂ ಆಧಾರವು ವೇದವೆಂದು ಅದನ್ನು ಪ್ರಮಾಣಿಸುವರು. ಹೀಗೆ ಶ್ರುತಿ. ಅದನ್ನು ಅನುಸರಿಸಿದವರ ಸ್ಮೃತಿಶಾಸ್ತ್ರ–ತಾನು ಪಡೆದ ಅನುಭವ ಎಂಬ ಮೂರೂ ಏಕತಾನವಾಗುವುದೇ ಸತ್ಯದರ್ಶನವು.

ಶ್ರುತಿಯೇ ಪ್ರಮಾಣವೆಂದು ಮಿಕ್ಕವನ್ನು ತಿರಸ್ಕರಿಸಬಾರದು. ಹಾಗೆಯೇ ಈ ಮೂರರಲ್ಲಿ ಒಂದೇ ಸರಿಯೆಂದು ಮಿಕ್ಕವನ್ನು ಕಡೆಗಾಣಬಾರದು. ವೇದಾರ್ಥವನ್ನು ಇತಿಹಾಸಪುರಾಣಗಳಲ್ಲಿ ವಿಸ್ತಾರವಾಗಿ ಹೇಳಿರುವುದನ್ನು, ತನ್ನ ಅನುಭವದಿಂದ ಗೋಚರವಾದುದನ್ನು ಒಂದೇ ಎಂದು ತಿಳಿದವನು ಸತ್ಯದರ್ಶನವನ್ನು ಪಡೆದವನು.

ಹಾಗೆ ತಾನು ಕಂಡಿದ್ದರೂ, ಆ ಅರ್ಥವನ್ನು ಇತರರಿಗೆ ಹೇಳುವಾಗ, ಕೇಳುವವನಿಗೆ ಅರ್ಥವಾಗುವಂತೆ, ಸಮಂಜಸವಾಗಿ, ಸಕಾರಣವಾಗಿ, ನ್ಯಾಯವಾಗಿ ಹೇಳಬೇಕು. ಹಾಗಿಲ್ಲದೆ ತನಗೆ ತೋರಿದಂತೆ ಮಾಡಿದರೆ ನಿಮ್ಮ ಹಿಂದಿನ ಚಕ್ರವರ್ತಿ ಪುರೂರವನು ಮಾಡಿದಂತಾಯಿತು."

ನಹುಷನೇ ಎದ್ದು ಕೈಮುಗಿದು ಕೇಳಿದನು; "ಭಗವಾನ್, ಪುರೂರವನು ನಮ್ಮ ಪಿತಾಮಹನು. ಧರ್ಮಕಥಾಸಂದರ್ಭದಲ್ಲಿ ಬಂದಿರುವ ಚರಿತ್ರೆಯನ್ನು ಕೃಪೆಮಾಡಿ ನಿರೂಪಿಸಬೇಕು."

"ಆಗಲಿ, ನಿಮಗೆಲ್ಲಾ ತಿಳಿದ ಕಥೆಯೆಂದು ನಾವು ಸಂಕ್ಷೇಪವಾಗಿ ಹೇಳುವೆವು. ಪುರೂರವ ಚಕ್ರವರ್ತಿಯು ಒಬ್ಬರ ಕರ್ಮಾಚರಣದಿಂದ ಇನ್ನೊಬ್ಬರಿಗೆ ತೊಂದರೆಯಾಗದಂತೆ ಲೋಕವ್ಯವಸ್ಥೆಯನ್ನು ಕಾಪಾಡಿದ ಮಹಾನುಭಾವನು. ಬಲಿಷ್ಠನಾದ ರಾಜನಿಲ್ಲದಿದ್ದರೆ ಮತ್ಸ್ಯಗಳಂತೆ ಮನುಷ್ಯರು ಒಬ್ಬರನ್ನೊಬ್ಬರು ಕಿತ್ತು ತಿನ್ನುವರು. ಹಾಗಾಗದೆ ಎಲ್ಲರೂ ತಮ್ಮ ತಮ್ಮ ಇತಿಮಿತಿಗಳನ್ನು ಅರಿತು ನಡೆಯುವಂತೆ ಮಾಡುವುದಕ್ಕೇ ರಾಜನಿರುವುದು. ಅದೇ ರಾಜಧರ್ಮವು. ಅಂತಹ ರಾಜಧರ್ಮವನ್ನು ಚೆನ್ನಾಗಿ ಪಾಲಿಸಿದನೆಂದು ಆತನಿಗೆ ಲೋಕಾಂತರಾಗಮನ ಸಾಮರ್ಥ್ಯವು ಲಭಿಸಿತು.

ಒಂದು ದಿನ ಆತನು ಇಂದ್ರಲೋಕಕ್ಕೆ ಹೋದನು. ಅಲ್ಲಿ ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮಗಳು ದರ್ಶನ ಕೊಟ್ಟವು. ಧರ್ಮಪರನಾದ ರಾಜನು ಅಣ್ಣನಾದ ಧರ್ಮನಿಗೆ ಸಲ್ಲಿಸಿದ ಪೂಜೆಯಿಂದ ಕಿರಿಯರು ತೃಪ್ತರಾಗುವರೆಂದು ಧರ್ಮವನ್ನು ಮಾತ್ರ ಆರಾಧಿಸಿದನು. ಅದರಿಂದ ಕಾಮಾರ್ಥಗಳು 'ಮೂವರಿಗೂ ಪೂಜೆಯು ಸಲ್ಲಬೇಕು. ಅಥವಾ ಉಳಿದವರ ಅನುಮತಿಯಿಂದ

ಜ್ಯೇಷ್ಠನಿಗೆ ಪೂಜೆಯಾಗಬೇಕು' ಎನ್ನುವ ಮರ್ಯಾದೆಯನ್ನು ಆತನು ಗಮನಿಸಲಿಲ್ಲವೆಂದು ಕೋಪಗೊಂಡು ಶಾಪವನ್ನು ಕೊಟ್ಟರು. ಆತನು ಕಾಮಶಾಪದಿಂದ ವಿರಹದಿಂದ ಕಂದಿ, ಅರ್ಥಶಾಪದಿಂದ ಲೋಭದಿಂದ ಕಂಗೆಟ್ಟು ಒದ್ದಾಡಿದ ಕಥೆಯನ್ನು ನೀವೆಲ್ಲ ಬಲ್ಲಿರಿ.

ಅದರಂತೆ ಮರ್ಯಾದೆಯನ್ನು ಮೀರದೆ, ಪ್ರೇಯಸ್ಸಿಗೆ ಲೋಪ ಬರದಂತೆ ಶ್ರೇಯಸ್ಸನ್ನು ಆರಾಧಿಸುತ್ತ, ವ್ಯವಹಾರದಲ್ಲಿ ತನ್ನ ಮತ್ತು ಇತರರ ಯೋಗಕ್ಷೇಮಗಳನ್ನು ನಿರ್ವಹಿಸುವುದೇ ಧರ್ಮವು; ಅದೇ ಸತ್ಯದರ್ಶನದ ಸಾಧನವು."

ಭಗವಾನರ ವಚನವನ್ನು ಕೇಳಿ ಎಲ್ಲರೂ ಸಂತುಷ್ಟರಾದರು. ಸಭೆಯು ಅವರಿಗೆ ಸಲ್ಲಬೇಕಾದ ಸಮರ್ಚನೆಯನ್ನು ಸಾಂಗವಾಗಿ ಸಲ್ಲಿಸಿ ಕೃತಾರ್ಥವಾಯಿತು.

ಬದುಕಲೊಂದಿಷ್ಟು ಆಪ್ತಮಾತುಗಳು

# ಸಮಯದ ವಿಚಾರದಲ್ಲಿ ನಿಪುಣರಾಗಿರಬೇಕು

ಬಿ.ಎನ್. ರಮೇಶ ಬೊಂಗಾಳೆ

ನಮಗೆ ಈ ಧರೆಯಂತೆ ಕೋಟಿ-ಕೋಟಿ ವರ್ಷದ ಬದುಕಿಲ್ಲ, ಹೋಗಲಿ ಲಕ್ಷ ವರ್ಷಗಳಾದರೂ ಬದುಕಿರುತ್ತೇವೆಂದರೆ ಅದೂ ಇಲ್ಲ. ಕಡೆಯ ಪಕ್ಷ ಸಾವಿರ ವರ್ಷವಾದರೂ ಬದುಕಿರುತ್ತೇವಾ? ಇಲ್ಲ, ಆ ಸಾವಿರದಲ್ಲಿ ಹದಿನೈದೋ-ಇಪ್ಪತ್ತೋ ಭಾಗ ಮಾಡಿದರೆ, ಅದರಲ್ಲಿನ ಒಂದು ಭಾಗದಷ್ಟು ಬದುಕಿರಬಹುದಷ್ಟೇ, ಆ ಒಂದು ಭಾಗವೆಂದರೆ 50 ರಿಂದ 75 ವರ್ಷಗಳು. ಆ ಐವತ್ತೋ, ಎಪ್ಪತ್ತೈದು ವರ್ಷಗಳನ್ನು ಒಂದು ಬದುಕೆಂದು ಬದುಕುವ ನಾವು ಎಷ್ಟರ ಮಟ್ಟಿಗೆ ಆ ಬದುಕನ್ನು ಅಂದರೆ ಆ ಅವಧಿಯನ್ನು ಸಾರ್ಥಕ ಪಡಿಸಿಕೊಳ್ಳುತ್ತಿದ್ದೇವೆ? ಬಹುಶಾ ಬಹುತೇಕವಾಗಿ ನಿದ್ರೆ, ಹರಟೆ, ವಿಷಯಾವಿಷಯಗಳಲ್ಲೇ ಕಳೆಯುತ್ತಿದ್ದೇವೆ ಎನ್ನಿಸುವುದಿಲ್ಲವೇ? ಹೌದೆಂದಾದರೆ ಅದುವೇ ಬದುಕೇ? ಅದಕ್ಕೂ ಅರ್ಥವಿದೆಯೇ? ಅರ್ಥ-ಅನರ್ಥಗಳ ಕುರಿತಾಗಿ ಚಿಂತಿಸಿದಷ್ಟು ಅರಿವಿನ ಕೊರತೆ ನಮಗಿದೆಯೇ? ಇಲ್ಲವೆಂದಾದರೆ ಇನ್ನೂ ಕಾಲ ಮಿಂಚಿಲ್ಲ ಬನ್ನಿ ಯೋಚಿಸೋಣ. ಯೋಚಿಸಿ, ಯೋಜಿಸೋಣ, ಆ ಮೂಲಕ ಏನಾದರೊಂದನ್ನು ಸಾಧಿಸೋಣ. ಅದಕ್ಕೆ ಮುನ್ನಿಯೆಂಬಂತೆ ಸಮಯದ ಮಹತ್ವವನ್ನರಿತು ಅದಕ್ಕೆ ಸಾಧನೆಯ ಕಿರೀಟವಿಟ್ಟ ಕೆಲವೊಂದು ಮಹನೀಯರ ಬದುಕಿನ ಪುಟಗಳಲ್ಲಿ ಇಣುಕೋಣ.

ಗಾಂಧೀಜಿಯವರು ಸಮಯಕ್ಕೆ ಬಹಳ ಮಹತ್ವ ಕೊಡುತ್ತಿದ್ದರು. ಒಂದು ನಿಮಿಷದ ವ್ಯರ್ಥವನ್ನೂ ಅವರು ಸಹಿಸುತ್ತಿರಲಿಲ್ಲ. ಕೆಲವೊಮ್ಮೆ ರೈಲಿಗಾಗಿ ಕಾಯಬೇಕಾದ ಸಂದರ್ಭದಲ್ಲಿಯೂ ಸ್ನೇಹಿತರೊಡನೆ ಸುಮ್ಮನೆ ಹರಟದೆ ಆ ಸಮಯವನ್ನು ದೇಶಪರವಾದ ಚರ್ಚೆಗೆ ಬಳಸಿಕೊಳ್ಳುತ್ತಿದ್ದರು. ಯಾರೋ ಒಬ್ಬರು ಕೇಳಿದರಂತೆ "ಗಾಂಧೀಜಿಯವರೇ ತಮ್ಮನ್ನು ಒಂದು ನಿಮಿಷದ ಮಟ್ಟಿಗೆ ದೇಶದ ಪ್ರಧಾನಿಯನ್ನಾಗಿಸಿದರೆ ಏನು ಮಾಡುತ್ತಿದ್ದಿರಿ?". ಗಾಂಧೀಜಿ ಥಟ್ಟನೆ ಉತ್ತರಿಸಿದರಂತೆ "ಮದ್ಯಪಾನ ನಿಷೇಧದ ಕಡತಕ್ಕೆ ಅಂಕಿತ ಒತ್ತುತ್ತಿದೆ." ಅಂದರೆ ಒಂದು ನಿಮಿಷದ ಅವಧಿಯಲ್ಲಿ ಜಾರಿಯಾಗುವ ಕಾನೂನು ಮುಂದಿನ ದೀರ್ಘ-ದೀರ್ಘ ಅವಧಿಯಲ್ಲಿ ಕೋಟಿ-ಕೋಟಿ ಕುಟುಂಬಗಳಿಗೆ ಅನುಕೂಲವಾಗುತ್ತದೆಂಬುದು ಅವರಿಗೆ ತಿಳಿದಿತ್ತು.

ದೇಶದ ಪ್ರಥಮ ರಾಷ್ಟ್ರಪತಿಗಳಾಗಿದ್ದ ಬಾಬು ರಾಜೇಂದ್ರ ಪ್ರಸಾದರ ಜೀವನ ಚರಿತ್ರೆಯನ್ನು ಓದಿದಾಗ ಅವರು ಸಮಯದ ವಿಷಯದಲ್ಲಿ ಎಷ್ಟು ನಿಪುಣರಾಗಿದ್ದರು ಎಂಬುದು ತಿಳಿಯುತ್ತದೆ. ವಿದೇಶಿ ಗಣ್ಯರೊಬ್ಬರು ಅವರನ್ನು ಭೇಟಿಯಾಗುವುದೆಂದು ಒಮ್ಮೆ ತೀರ್ಮಾನವಾಗಿತ್ತು. ಭೇಟಿಯ ಅವಧಿ ಮುಕ್ಕಾಲು ತಾಸು ಮೀಸಲಾಗಿತ್ತು. ಮುಕ್ಕಾಲು ತಾಸಿನ ನಂತರ ಸಾಮಾನ್ಯ ಜನರ ಸಮಸ್ಯೆಗೆ ಸ್ಪಂದಿಸುವಂತಹ ಯಾವುದೋ ಕಾರ್ಯಕ್ರಮವೂ ಇತ್ತು. ಆ ಗಣ್ಯರು ನಿಗದಿತ ಸಮಯಕ್ಕಿಂತ 30 ನಿಮಿಷ ತಡವಾಗಿ ಆಗಮಿಸಿದ್ದನ್ನು ಗಮನಿಸಿದ ರಾಜೇಂದ್ರಪ್ರಸಾದರು ಗಣ್ಯರೊಡನೆ 25 ನಿಮಿಷಗಳ ಚರ್ಚೆಯನ್ನಷ್ಟೇ ಮಾಡಿ ಮುಂದಿನ ಕಾರ್ಯಕ್ರಮಕ್ಕೆ ಹೊರಟರಂತೆ. ತಾನು ಸಮಯದ ಅಡಿಯಾಳು, ದೇಶದ ನಮ್ರಸೇವಕ ಎನ್ನುತ್ತಿದ್ದ ಪ್ರಸಾದರ ಆ ಸ್ವಭಾವ ಹಾಗೂ ಸಮಯಕ್ಕೆ ಅವರು ಕೊಡುತ್ತಿದ್ದ ಮಹತ್ವದಿಂದಾಗಿಯೇ ಯಶಸ್ವೀನಾಯಕರೆನ್ನಿಸಿ ಅಜರಾಮರರಾಗುಳಿದರು.

ಜಗತ್ತಿನ ಮಹಾನ್ ಕಾರ್ಯಗಳು-ಸಾಧನೆಗಳು ಸಮಯದ ಮಹತ್ವವನ್ನು ಅರಿತವರಿಂದಲೇ ಸಾಧ್ಯವಾಗಿವೆಯೆಂದರೆ ತಪ್ಪೇನಿಲ್ಲ. ಸಿಸರೋ ಹೇಳುತ್ತಿದ್ದನಂತೆ-"ಯಾವ ಸಮಯವನ್ನು ಅನ್ಯರು ಕೇವಲ ತೋರಿಕೆಯಲ್ಲಿ ಹಾಗೂ ದೈಹಿಕ ಮತ್ತು ಮಾನಸಿಕ ವಿಶ್ರಾಂತಿಯಲ್ಲಿ ಕಳೆದು ಬಿಡುತ್ತಾರೋ ಅದೇ ಸಮಯವನ್ನು ನಾನು ತತ್ವಜ್ಞಾನಕ್ಕೆ ಕುರಿತಾದ ಚಿಂತನೆ ಮತ್ತು ಅಧ್ಯಯನಕ್ಕಾಗಿ ಮೀಸಲಿರಿಸುತ್ತೇನೆ."

ಕಾಶಿಯಲ್ಲಿದ್ದ ಪರಮಾನಂದ ದಾಸರ ಖ್ಯಾತಿಯ ಕುರಿತು ಮೊದಲೇ ತಿಳಿದುಕೊಂಡಿದ್ದ ಬಾದಶಹ ಅಕ್ಬರನು ಅವರನ್ನು ತನ್ನ ಆಸ್ಥಾನಕ್ಕೆ ಕರೆಸಿ ಸನ್ಮಾನಿಸಬೇಕೆಂದು ತೀರ್ಮಾನಿಸಿ ಪತ್ರದ ಮೂಲಕ ಆಹ್ವಾನಿಸುತ್ತಾನೆ. ರಾಜನ ಪ್ರೀತಿಗೆ ಕಟ್ಟುಬಿದ್ದ ಪರಮಾನಂದರು ಆಸ್ಥಾನಕ್ಕೆ ತೆರಳಿ ಸನ್ಮಾನ ಮತ್ತು ಆತಿಥ್ಯ ಸ್ವೀಕರಿಸಿ ಮರಳಿದ ನಂತರ ಯಾರೋ ಪ್ರಶ್ನಿಸಿದಂತೆ-"ದಾಸರೇ, ರಾಜಾತಿಥ್ಯದಿಂದ ಸಂತಸವಾಗಿರಬೇಕಲ್ಲ!" ದಾಸರು ಥಟ್ಟನೆ ಉತ್ತರಿಸಿದರಂತೆ-"ನನ್ನ ಬದುಕಿನ ನಾಲ್ಕು ಅಮೂಲ್ಯವಾದ ದಿನಗಳನ್ನು ಅಲ್ಲಿಗೆ ಹೋಗಿ ಬರಲೆಂದು ವ್ಯಯಿಸಿದ್ದಕ್ಕೆ ದುಃಖಿಸುತ್ತೇನೆ."

ಸಮಯ ಅಮೂಲ್ಯವಾದ ಸಂಪತ್ತು. ಆದ್ದರಿಂದ ಒಂದು ನಿಮಿಷವನ್ನೂ ನಾವು ವ್ಯರ್ಥವಾಗಿ ಕಳೆಯಬಾರದು. ಸಂಪತ್ತನ್ನು

ಕಳೆದುಕೊಳ್ಳುವುದು ಸಮಯವನ್ನು ಕಳೆದುಕೊಳ್ಳುವುದಕ್ಕೆ ಸಮಾನವಾಗಿರುವುದಿಲ್ಲ. ಸಮಯವನ್ನು ಹಾಳು ಮಾಡಿಕೊಂಡವೆಂದರೆ ಶಕ್ತಿಯನ್ನು ಹಾಳುಮಾಡಿಕೊಂಡಂತೆ, ಸಾಮರ್ಥ್ಯವನ್ನು ಹಾಳು ಮಾಡಿಕೊಂಡಂತೆ ಹಾಗೂ ನಮ್ಮ ಆಚರಣೆಯು ಪತನವಾದಂತೆ.

ಎಡ್ವರ್ಡ್ ಎವರೇಟ್ ಹೇಳುತ್ತಾನೆ–"ವ್ಯಕ್ತಿಯು ತಾನು ಉಪಯೋಗಿಯಾಗಲು, ಕೀರ್ತಿವಂತನಾಗಲು ಹಾಗೂ ಸಮೃದ್ಧ ಮತ್ತು ಸುಖಿಯಾಗಲು ಬೇಕಾದ ಎಲ್ಲಾ ಸಾಧನಗಳನ್ನು ಹೊಂದಿರುತ್ತಾನೆ. ತನ್ನ ಬುದ್ಧಿಯನ್ನು ಸರಿಯಾದ ಮಾರ್ಗದಲ್ಲಿ ತೊಡಗಿಸುವುದರಿಂದ, ಪ್ರತಿಯೊಂದು ಅವಕಾಶಕ್ಕೂ ಅದರದೇ ಆದ ರೀತಿಯಲ್ಲಿ ಚಿಂತಿಸುವುದರಿಂದ, ವಿಕಾರಗಳನ್ನು ತುಚ್ಛವೆಂದೆಣಿಸುವುದರಿಂದ ಮತ್ತು ಇಂದ್ರಿಯ ಸುಖ–ಭೋಗಗಳನ್ನು ತಿರಸ್ಕಾರದ ದೃಷ್ಟಿಯಿಂದ ನೋಡಿದಾಗ ಮಾತ್ರ ಕೆಲಸಗಳು ಕೈಗೂಡುತ್ತವೆ, ಪೂರ್ಣವಾಗುತ್ತವೆ."

ಧರೆಗಿಳಿದ ದಿವ್ಯತೇಜ

# ಮಾತೆಯ ಮಹಾಸಮಾಧಿ

ಲೇ: ಲ. ನ. ಶಾಸ್ತ್ರೀ

ಒಂದೆರಡು ದಿನಗಳು ಉರುಳಿದವು. ಸುತ್ತಮುತ್ತಣ ಅಗ್ರಹಾರದ ಬ್ರಾಹ್ಮಣರೂ ಇತರರೂ ಬಂದರು. ಕೆಲವರು ಶಾಸ್ತ್ರವಿಚಾರವನ್ನು ಮಾಡಿದರು. ಕೆಲವರು ತತ್ತ್ವವನ್ನು ಕುರಿತು ತಮ್ಮ ಸಂದೇಹಗಳನ್ನು ಪರಿಹರಿಸಿಕೊಂಡರು. ಕೆಲವರು ಕರ್ಮವಾದಿಗಳು ತಾತ್ಸಾರವಾಗಿ ಮಾತನಾಡಿದರು. "ಶಿಖಾ ಯಜ್ಞೋಪವೀತವನ್ನು ತೆಗೆದುಹಾಕಿ, ವೇದಾಧ್ಯಯನ ವೇದಕರ್ಮಗಳನ್ನು ತ್ಯಜಿಸಿದ ಇವನೆಂತಹ ಗುರು?" ಎಂದು ಲಘುವಾಗಿ ಮಾತನಾಡಿದರು. ಅವರು ಶಂಕರರ ಬಳಿ ಬರಲಿಲ್ಲ. ಶಂಕರರೇ ಅವರನ್ನು ಮಾತನಾಡಿಸಲು ಹೋದಾಗ ತಲೆಮರೆಸಿಕೊಂಡರು.

ಆರ್ಯಾಂಬೆ ಒಂದು ದಿನ ಮಗನನ್ನು ಕರೆದು "ಮಗು, ಇನ್ನು ನನ್ನ ಕಾಲ ಮುಗಿಯಿತೆಂದು ನನಗೆ ಅನ್ನಿಸುತ್ತಿದೆ. ಇತ್ತೀಚೆಗೆ ಬಳಲಿಕೆ ಹೆಚ್ಚಾಗುತ್ತಿದೆ. ನೀನು ಬರುತ್ತೀಯೆ ಎಂಬ ಭರವಸೆಯಿಂದ ಇಷ್ಟು ದಿನ ನಾನು ಬದುಕಿದೆ. ಇನ್ನು ನನ್ನ ಆಸೆ ಅಪೇಕ್ಷೆ ಯಾವುದೂ ಇಲ್ಲ, ಕಾಶೀಕ್ಷೇತ್ರ ದರ್ಶನ ಮಾಡಬೇಕೆಂಬ ಆಸೆಯೊಂದಿತ್ತು. ನಿನ್ನನ್ನು ಕಂಡ ನಂತರ ವಿಶ್ವೇಶ್ವರನ ದರ್ಶನವಾದಷ್ಟೇ ಹರ್ಷ, ತೃಪ್ತಿ ಉಂಟಾಯಿತು. ಮನಸ್ಸು ಸಮಾಧಾನವಾಗಿದೆ. ಚಿತ್ತದಲ್ಲಿ ಶಾಂತಿ ನೆಲೆಸಿದೆ. ಸದಾ ಭಗವಂತನ ಸ್ಮರಣೆ ಮಾಡುತ್ತಿರಬೇಕು ಎನ್ನಿಸುತ್ತದೆ" ಎಂದರು.

"ಅಮ್ಮ ಚಿತ್ತವೃತ್ತಿ ನಿರೋಧವೇ ಪರಮಶಾಂತಿ, ಅದೇ ಮಣಿಕರ್ಣಿಕಾ ತೀರ್ಥ, ಜ್ಞಾನಪ್ರವಾಹವೇ ವಿಮಲವಾದ ಗಂಗಾಸಲಿಲ. ನಿಜಬೋಧರೂಪವಾಗಿರುವ ಕಾಶೀ ಕ್ಷೇತ್ರವೇ ನಾನು ಎಂದು ಅರಿತುಕೋ" ಎಂದು ಹೇಳುತ್ತಾ ಆತ್ಮ ತತ್ತ್ವವನ್ನು ಪ್ರಕಾಶಪಡಿಸುವ ಕಾಶೀಪಂಚಕವನ್ನು ಆಚಾರ್ಯರು ತಾಯಿ ಮುಂದೆ ಮಧುರವಾಗಿ ಹಾಡಿದರು:



**ಕಾಶೀಕ್ಷೇತ್ರಂ ಶರೀರಂ ತ್ರಿಭುವನ ಜನನೀ**
**ವ್ಯಾಪಿನೀ ಜ್ಞಾನಗಂಗಾ**
**ಭಕ್ತಿ ಶ್ರದ್ಧಾಗಯೇಯಂ ನಿಜಗುರು ಚರಣ**
**ಧ್ಯಾನಯೋಗಃ ಪ್ರಯಾಗಃ।**
**ವಿಶ್ವೇಶೋಯಂತುರೀಯಂ ಸಕಲಜನಮನಃ**
**ಸಾಕ್ಷಿ ಭೂತೋಂತರಾತ್ಮಾ**
**ದೇಹೇ ಸರ್ವಂ ಮದೀಯೇ ಯದಿವಸತಿ**
**ಪುನಸ್ತೀರ್ಥ ಮನ್ಯತ್ಕಿಮಸ್ತಿ॥**

"ಅಮ್ಮ ಸರ್ವಕ್ಷೇತ್ರ ತೀರ್ಥಗಳೂ ಸಹ ನಮ್ಮಲ್ಲಿಯೇ ಇವೆ", ಎಂದರು. ತಾಯಿ ತಲೆಯಾಡಿಸಿದರು. ಹೌದೆನ್ನುವಂತೆ.

"ಅಮ್ಮಾ ನಿನ್ನ ಸೇವೆಗೆಂದೇ ನಾನು ಬಂದಿದ್ದೇನೆ. ಈಗ ನಿನಗೇನು ಬೇಕು ಹೇಳು" ಎಂದರು. ತಾಯಿ "ನನ್ನ ಕಡೆಗಾಲದಲ್ಲಿ ಸದಾಕಾಲ ಭಗವನ್ನಾಮ ಸಂಕೀರ್ತನೆಯಾಗುತ್ತಿರಬೇಕು" ಎಂದರು. "ಆಗಲಮ್ಮ ಎಂದು ನುಡಿದ ಶಂಕರರು ತಾಯಿಗಾಗಿ ಸುಂದರವಾದ ಹಲವಾರು ಸ್ತೋತ್ರಗಳನ್ನು ರಚಿಸಿ ಹಾಡಿದರು. ಶಂಕರರು ಹಾಡುವಾಗ, ದೇವತೆಗಳೆಲ್ಲಾ ಬಂದು ತಮಗೆ ದರ್ಶನವಿತ್ತಂತೆ ಭಾಸವಾಗುತ್ತಿತ್ತು ಆಕೆಗೆ. ಶಂಕರರು ಸ್ತೋತ್ರಗಳನ್ನು ತಮ್ಮ ಶಿಷ್ಯರಿಂದಲೂ ಹಾಡಿಸಿದರು. ಸದಾ ಭಗವದ್ಗೀತೆಯ, ವಿಷ್ಣುಸಹಸ್ರನಾಮದ ಪಾರಾಯಣವಾಗುತ್ತಿರುವಂತೆ ವ್ಯವಸ್ಥೆ ಮಾಡಿದರು.

ಆರ್ಯಾಂಬಾ ವಯೋಧಿಕ್ಯದಿಂದಲೂ, ಹಲವಾರು ವ್ರತನೇಮಗಳ ಕಾರಣದಿಂದಲೂ ಕೃಶರಾಗಿದ್ದರು, ದುರ್ಬಲರಾಗಿದ್ದರು. ಒಂದೇ ಹೊತ್ತು ಲಘುವಾದ ಆಹಾರ, ರಾತ್ರಿಯ ಕಾಲ ಸ್ವಲ್ಪವೇ ಹಾಲು, ಮಾಘ ಶುದ್ಧ ದಶಮಿಯ ದಿನ ಆರ್ಯಾಂಬೆಗೆ ತೀರಾ ದಣಿವಾದಂತೆ ಕಾಣಿಸಿತು. ಆದರೂ ಅವರೇ ಕುಳಿತುಕೊಂಡು ಶಂಕರರಿಗೆ ಬಡಿಸಿದರು. ತಾವು ಊಟ ಮಾಡಲಿಲ್ಲ, ಬಾಯಲ್ಲಿ

ರುಚಿಯಿಲ್ಲವೆಂದು ಹೇಳಿ ಸ್ವಲ್ಪವೇ ಗಂಜಿಯನ್ನು ಕುಡಿದರು. ನೆಲದ ಮೇಲೆ ಕಂಬಳಿಯನ್ನು ಹಾಸಿಕೊಂಡು ಮಲಗಿದರು. ಶಂಕರರು ಪಕ್ಕದಲ್ಲಿಯೇ ಕುಳಿತುಕೊಂಡು ಮೇಲುದನಿಯಲ್ಲಿ ಸ್ತೋತ್ರಗಳನ್ನು ಹೇಳುತ್ತಿದ್ದರು. ತಾಯಿಯು ಇಷ್ಟಪಟ್ಟಂತೆ ಶಿವ ಭುಜಂಗ ಪ್ರಯಾತ ಸ್ತೋತ್ರವನ್ನೂ, ವಿಷ್ಣು ಭುಜಂಗ ಪ್ರಯಾತ ಸ್ತೋತ್ರವನ್ನೂ ಹಾಡಿದರು.

ಆ ರಾತ್ರಿ ಆರ್ಯಾಂಬೆಗೆ ಸ್ವಲ್ಪ ಜ್ವರವಿದ್ದಂತೆ ಕಂಡಿತು. ಕೃಷ್ಣ ಕುಟ್ಟಿಯು ಕಷಾಯ ಮಾಡಿ ತಂದಾಗ ಆಕೆ ಬೇಡವೆಂದರು. ಶಂಕರರು "ಅಮ್ಮಾ ಕೃಷ್ಣನು ನಿನ್ನನ್ನು ತನ್ನ ತಾಯಿಯಂತೆಯೇ ನೋಡಿಕೊಳ್ಳುತ್ತಿದ್ದಾನೆ. ಅವನಿಗೇನೋ ಆತಂಕ. ಸ್ವಲ್ಪ ಕಷಾಯವನ್ನು ಕುಡಿದರೆ, ಅವನಿಗೆ ಸಮಾಧಾನವಾಗಬಹುದು" ಎಂದರು. ತಾಯಿ ಮೆಲ್ಲನೆ ಎದ್ದು ಕುಳಿತು ಕೃಷ್ಣನು ತಂದ ಕಷಾಯವನ್ನು ಕುಡಿದರು. ಕೈ ತೊಳೆದು ಪುನಃ ಮಲಗುತ್ತಾ "ಕೃಷ್ಣ ನಿನಗಿನ್ನು ಶಂಕರನೇ ದಿಕ್ಕು, ದಾರಿ" ಎಂದರು. ವೃದ್ಧ ಕೃಷ್ಣಕುಟ್ಟಿ ಶಿವಗುರುಗಳ ಕಾಲದಿಂದಲೂ ಬಾಣಸಿಗನಾಗಿದ್ದವನು. ನೂರಾರು ಜನಕ್ಕೆ, ರುಚಿಕರವಾದ ಖಾದ್ಯಗಳನ್ನು ಮಾಡಿ ಬಡಿಸುತ್ತಿದ್ದನು. ಈಗ ಅದೇ ಶಿವಗುರುಗಳ ಮನೆಯಲ್ಲಿ ಕೇವಲ ನಾಲ್ಕೈದು ಮಂದಿಗೆ ಮಾತ್ರ ಅಡುಗೆ ಮಾಡುತ್ತಿದ್ದನು. ಶಂಕರರು ಕಾಲಟಿಯನ್ನು ಬಿಟ್ಟ ನಂತರ, ಅವರ ಮನೆಯ ಪಾಠಶಾಲೆಯ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿ ಅಲ್ಲಿ ಕೇವಲ ನಾಲ್ಕೈದು ಜನ ಮಾತ್ರ ಇದ್ದರು. ಗೋವಿಂದನೂ ತನ್ನ ತಾಯಿಯ ಮರಣಾನಂತರ ಹೊರಟುಹೋಗಿದ್ದನು. ಈ ಮನೆಯ ಮೇಲೆ ಕೃಷ್ಣನಿಗೆ ಎಂಥದೋ ವಾಂಛಲ್ಯ. ಆರ್ಯಾಂಬೆಯ ಸೇವೆ ಮಾಡಿಕೊಂಡೇ ಜೀವನವನ್ನು ನೂಕುತ್ತಿದ್ದನು. ಈಗ ಅವನಿಗೂ ಅದೆಂಥದೋ ದಿಗಿಲು ಭಯ.

ಮಾಘ ಶುದ್ಧ ಏಕಾದಶಿಯ ದಿನ ಶ್ರೀ ಶಂಕರರೇ ತಾಯಿಯನ್ನು ಮೆಲ್ಲನೆ ಎಬ್ಬಿಸಿದರು. ಪೂರ್ಣಾನದಿಯ ಬಳಿಗೆ ಕರೆದೊಯ್ದರು. ಒಬ್ಬಿಬ್ಬರು ಸೇವಕಿಯರ ನೆರವಿನಿಂದ ಆರ್ಯಾಂಬಾ ಸ್ನಾನ ಮಾಡಿದರು. ಮೆಲ್ಲನೆ ಶಂಕರರ ಭುಜದ ಮೇಲೆ ಕೈಯಿಟ್ಟು ಮನೆಗೆ ಬಂದು, ಒರಗಿ ಕುಳಿತೇ ಜಪ ಮಾಡಲಾರಂಭಿಸಿದರು,

ಶ್ರೀ ಶಂಕರರೇ ಮನೆಯಲ್ಲಿ ಇದ್ದ ಸಾಲಿಗ್ರಾಮ, ಶಿವಲಿಂಗ, ಪೂಜಾ ಮೂರ್ತಿಗಳಿಗೆಲ್ಲಾ ಅಭಿಷೇಕವಾರಂಭಿಸಿದರು. ಪಾಠಶಾಲೆಯ ಬಾಲಕರೂ, ಬ್ರಹ್ಮಚಾರಿಗಳೂ, ಕಾಲಟಿಯ ಬ್ರಾಹ್ಮಣ ವೃಂದವೂ ಬಂದು ಕುಳಿತು ಮಂತ್ರಪಠಣವಾರಂಭಿಸಿದರು. ಶತ ರುದ್ರಾಭಿಷೇಕವೂ, ಸಹಸ್ರ ಬಿಲ್ವಾರ್ಚನೆಯೂ, ಲಲಿತಾತ್ರಿಶತಿಯಿಂದ ಶ್ರೀ ಚಕ್ರಕ್ಕೆ ಕುಂಕುಮ ಪೂಜೆಯೂ ಬೆಳೆದುವು. ಎಲ್ಲರಿಗೂ ತೀರ್ಥವನ್ನು, ಪ್ರಸಾದವನ್ನು ಸ್ವತಃ ಆಚಾರ್ಯರೇ ಇತ್ತರು. ತಾಯಿಗೂ ತೀರ್ಥವನ್ನು ಇತ್ತು, ಬಿಲ್ವದಳವನ್ನು ಇತ್ತರು. ತಾವೇ ಆಕೆಗೆ ಪ್ರಸಾದದ ಗಂಧವನ್ನು ಹಚ್ಚಿದರು. ತಾಯಿ ಸತತವಾಗಿ ಶಿವನಾಮ ಜಪ ಮಾಡುತ್ತಿದ್ದರು.

ಎಲ್ಲರಿಗೂ ಫಲಾಹಾರವಾಯಿತು. ತಾಯಿ ಮಾತ್ರ ಏನನ್ನೂ ತೆಗೆದುಕೊಳ್ಳಲಿಲ್ಲ. ಅಭಿಷೇಕ ತೀರ್ಥವನ್ನು ಮಾತ್ರ ತೆಗೆದುಕೊಂಡರು. "ಶಂಕರಾ ಇಲ್ಲಿ ಬಾಪ್ಪ" ಎಂದು ಮೆಲುದನಿಯಲ್ಲಿ ಕರೆದರು. "ಮನೆಯಲ್ಲಿರುವುದನ್ನೆಲ್ಲಾ ದಾನ ಮಾಡಪ್ಪಾ" ಎಂದರು. ಶಂಕರರು ತಾಯಿಯ ಬಳಿಯಲ್ಲಿ ಕುಳಿತರು. ಅವರ ಹಸ್ತದಲ್ಲಿ ತುಳಸಿಯನ್ನಿರಿಸಿ, ಜಲಧಾರೆಯನ್ನು ಹರಿಸಿದರು. ಪರಮೇಶ್ವರ, ಸದಾಶಿವರನ್ನು ಕರೆದು, "ಇಲ್ಲಿ ಇರುವುದನ್ನೆಲ್ಲಾ ದಾನ ಮಾಡುವಂತೆ ಮಾತೆ ಆಜ್ಞೆ ಮಾಡಿದ್ದಾರೆ. ಅದನ್ನು ನೀವು ನಡೆಸಿಬಿಡಿ" ಎಂದರು. ಮನೆಯನ್ನೂ ಮನೆಯಲ್ಲಿದ್ದ ಸಮಸ್ತ ವಸ್ತುಗಳನ್ನೂ ದಾನ ಮಾಡಿದ್ದಾಯಿತು. ಅನಂತರ ಆಚಾರ್ಯರು ತಾಯಿಯ ತಲೆಯನ್ನೆತ್ತಿ ತಮ್ಮ ತೊಡೆ ಮೇಲೆ ಮೃದುವಾಗಿ ಇಟ್ಟುಕೊಂಡರು. ಶ್ರೀ ವಿಷ್ಣು ಸಹಸ್ರನಾಮ ಸ್ತೋತ್ರವನ್ನು ಮೆಲುದನಿಯಲ್ಲಿ ಹೇಳಲಾರಂಭಿಸಿದರು. ಸ್ತೋತ್ರ ಮುಗಿದು ಫಲಶೃತಿಯನ್ನು ಹೇಳುತ್ತಿದ್ದಂತೆಯೇ ಆರ್ಯಾಂಬಾರವರು "ನಾರಾಯಣ ನಾರಾಯಣ ನಾರಾಯಣ ಶಂಕರ ಶಿವ ಶಿವ" ಎಂದೊಮ್ಮೆ ಹೇಳಿ ಎಲ್ಲರನ್ನೂ ಕೈ ಎತ್ತಿ ಹರಸುತ್ತ ಕಣ್ಣು ಮುಚ್ಚಿದರು.

ಅದ್ವೈತಾಚಾರ್ಯರಾದ ಶಂಕರರಿಗೂ ಸಹ ತಾಯಿಯ ನಿರ್ಗಮನದಿಂದ ಶೋಕ ತಡೆಯಲಾಗಲಿಲ್ಲ. ಕಣ್ಣೀರು ತುಂಬಿತು. ಗದ್ಗದಿತರಾಗಿ "ಅಮ್ಮಾ ಹೊರಟು ಬಿಟ್ಟೆಯಾ?" ಎಂದು ದುಃಖಿಸಿದರು. ಕೃಷ್ಣಕುಟ್ಟಿ ಈ ದೃಶ್ಯವನ್ನು ನೋಡುತ್ತಾ ದಿಙ್ಮೂಢನಾಗಿ ನಿಂತನು. "ಅಯ್ಯೋ, ಇನ್ನು ನನಗಾರು ದಿಕ್ಕು?" ಎಂದು ದುಃಖಿಸುತ್ತ ನಿಂತನು. ತತ್‌ಕ್ಷಣವೇ ಶಂಕರರು ತಾಯಿಯ ಶಿರವನ್ನು ಮೆಲ್ಲಗೆ ಕೆಳಕ್ಕೆ ಇಳಿಸಿದರು. ಎದ್ದು ನಿಂತು "ಕೃಷ್ಣ, ಏಕೆ ಯೋಚಿಸುತ್ತೀಯೆ? ನಾನಿಲ್ಲವೆ?" ಎಂದರು ಆತನ ಬೆನ್ನನ್ನು ತಡವುತ್ತ.

ಕಾಲಟಿಯಲ್ಲೆಲ್ಲಾ ಆರ್ಯಾಂಬೆಯ ಮರಣ ವಾರ್ತೆ ಹಬ್ಬಿತು. ಜನ ಗುಂಪು ಗುಂಪಾಗಿ ಬಂದರು. ಶಂಕರರು ತಮ್ಮ ಆಪ್ತ ಶಿಷ್ಯರಾದ ಪರಮೇಶ್ವರನನ್ನೂ ಸದಾಶಿವನನ್ನೂ ಕರೆದು "ನಮ್ಮ ಪೂರ್ವಾಶ್ರಮದ ಆತ್ರೇಯ ವಂಶದ ಪುರೋಹಿತರನ್ನು ಈಗ ಕರೆತರಲು ಸಾಧ್ಯವಾಗದು. ಇಲ್ಲಿಯ ಪುರೋಹಿತರನ್ನೇ ಕರೆದು ತಾ. ತಾಯಿಯವರ ಶರೀರವನ್ನು ಹೆಚ್ಚು ಕಾಲ ಇಡಲಾಗದು, ಬೇಗ ಸಂಸ್ಕಾರ ಮಾಡಬೇಕು" ಎಂದರು. ಸದಾಶಿವ ಪರಮೇಶ್ವರರು ಹೊರಟರು.

ಊರಿನ ಜನವೆಲ್ಲಾ ಬಂದು ಸೇರಿತು. ಗಂಭೀರವಾಗಿ ಕುಳಿತಿದ್ದ ಶಂಕರನನ್ನೂ, ಪಕ್ಕದಲ್ಲಿಯೇ ನಿದ್ರಿಸುವಂತೆ ಮಲಗಿದ್ದ ಆರ್ಯಾಂಬೆಯನ್ನೂ ನೋಡುತ್ತ ಕಣ್ಣೀರ್ಗರೆಯುತ್ತಿದ್ದರು. ಆರ್ಯಾಂಬೆ ಕಾಲಟಿಯಲ್ಲೆಲ್ಲಾ ತುಂಬಾ ಗೌರವಾದರಗಳನ್ನು ಗಳಿಸಿದ್ದರು. ಪರೋಪಕಾರ, ಕಾರುಣ್ಯ ಇವುಗಳೇ ಮೈವೆತ್ತ ಮೂರ್ತಿಯಾಗಿದ್ದರು, ಆಕೆ. ಜನ ಬ್ರಾಹ್ಮಣ ಅಬ್ರಾಹ್ಮಣರೆನ್ನದೆ ತಂಡ ತಂಡವಾಗಿ ಬಂದು ಸೇರಿದರು, ಅಂತಿಮ ದರ್ಶನಕ್ಕೆ.

ಸದಾಶಿವನೂ ಪರಮೇಶ್ವರರೂ ಖಿನ್ನರಾಗಿ ಹಿಂತಿರುಗಿ ಬಂದರು. ಸ್ಥಳದ ಪುರೋಹಿತರು "ಸಂನ್ಯಾಸಿಗೆ ಕರ್ಮ ಮಾಡುವ ಅಧಿಕಾರವಿಲ್ಲ. ನಾವು ಬಂದು ಕರ್ಮ ಭ್ರಷ್ಟರಾದವರಿಗೆ ಕರ್ಮ ಮಾಡಿಸುವುದಿಲ್ಲ" ಎಂದು ಹೇಳಿ ಬಿಟ್ಟಿದ್ದರು. ಅವರೊಡನೆ ಉಳಿದ

ಏಳು ಮನೆತನದವರೂ ಸೇರಿಕೊಂಡು ಅಸಹಕಾರ ಸೂಚಿಸಿದ್ದರು. ಆಚಾರ್ಯರಿಗೆ ಈ ಬ್ರಾಹ್ಮಣರ ವಿಚಾರದಲ್ಲಿ ಬೇಸರ ಮೂಡಿದುದು ಅವರ ನಡವಳಿಕೆಯಲ್ಲಿ ಗೊತ್ತಾಯಿತು. ಉಳಿದ ಎರಡು ಮನೆತನದವರನ್ನು ಕೇಳಿದರು. "ನಾನು ತನ್ನ ತಾಯಿಗೆ ಸ್ವತಃ ಸಂಸ್ಕಾರ ಮಾಡುತ್ತೇನೆಂದು ವಚನವಿತ್ತಿದ್ದೇನೆ. ಆದ್ದರಿಂದ ನಾನೇ ಕರ್ಮ ಮಾಡುತ್ತೇನೆ. ನೀವು ಸಹಕರಿಸಬಲ್ಲಿರಾ?" ಎಂದು ಕೇಳಿದರು.

ಸಂನ್ಯಾಸಿಯಾದ ಮಾತ್ರಕ್ಕೆ ಸರ್ವಕರ್ಮಗಳನ್ನೂ ವರ್ಜ್ಯ ಮಾಡಬೇಕಾಗಿಲ್ಲ. ಮೇಲಾಗಿ ಮಾತೃ ಕರ್ಮ ಮಾಡುವುದರಿಂದ ತಾವು ಎಲ್ಲರಿಗೂ ಆದರ್ಶ ಪ್ರಾಯರಾಗುತ್ತೀರಿ. ನಮಗೂ ಅದು ಒಪ್ಪಿತ. ನಾವು ಸಹಕರಿಸುತ್ತೇವೆ" ಎಂದರು, ಆ ಎರಡು ಮನೆತನದವರು.

ಶಿವಗುರುಗಳ ಮನೆಯ ವಿಶಾಲವಾದ ತೋಟದ ಆವರಣದಲ್ಲಿಯೇ, ನೆಲವನ್ನು ಗೋಮಯದಿಂದ ಶುದ್ಧ ಮಾಡಿದರು. ಗಂಧ, ಚಂದನದ ಚಿತೆ ಸಿದ್ಧವಾಯಿತು. ಆಚಾರ್ಯರ ಶಿಷ್ಯರೂ ಸ್ಥಳದ ಬ್ರಾಹ್ಮಣರೂ ಆರ್ಯಾಂಬೆಯ ಪವಿತ್ರ ಶರೀರವನ್ನು ತಂದು ಚಿತೆಯ ಮೇಲಿಟ್ಟರು. ಮಂತ್ರಘೋಷವಾಗುತ್ತಿತ್ತು, ಜನ ಜಯಕಾರ ಮಾಡುತ್ತಿದ್ದರು. ಆಚಾರ್ಯರು ಸ್ವತಃ ಮಾತೃ ಶರೀರಕ್ಕೆ ಅಗ್ನಿ ಸ್ಪರ್ಶ ಮಾಡಿದರು! ಊರಿನ ಜನರೆಲ್ಲಾ ತುಪ್ಪ ಕರ್ಪೂರ, ಅಗರು ಕಸ್ತೂರಿಗಳನ್ನು ತಂದು ಆ ಪವಿತ್ರ ದೇಹಕ್ಕೆ ಅರ್ಪಿಸಿದರು.

ಹೀಗೆ ಯುಗಾವತಾರಿಯಾದ ಶ್ರೀ ಶಂಕರನನ್ನು ಜಗತ್ತಿಗಿತ್ತ ಮಹಾಮಾತೆಯ ಪೂತ ದೇಹ ಪಂಚಭೂತಗಳಲ್ಲಿ ಸೇರಿಹೋಯಿತು. ಆಕೆ ವಿದೇಹ ಮುಕ್ತರಾದರು.

ಆಚಾರ್ಯರು ಸ್ವಲ್ಪ ಕಾಲ ಕಾಲಟಿಯಲ್ಲಿಯೇ ಇದ್ದರು. ಅವರಿಗೆ ಮನಸ್ಸು ತುಂಬಾ ನೊಂದಿತ್ತು, ತಮ್ಮ ಸ್ಥಳದ ಪುರೋಹಿತರ ನಡವಳಿಕೆಯಿಂದ. ಕ್ರಮೇಣ ಮನಸ್ಸನ್ನು ಸಮಾಧಾನ ಮಾಡಿಕೊಂಡರು. ತಮ್ಮ ತಾಯಿಯವರಿದ್ದ ಮನೆಯನ್ನೂ, ಪಾಠಶಾಲೆಯನ್ನೂ, ಗೋವುಗಳನ್ನೂ ಬಂಧು ವರ್ಗಕ್ಕೆ ಒಪ್ಪಿಸಿದರು. ಉಳಿದವನ್ನೆಲ್ಲಾ ಆಗಲೇ ದಾನ ಮಾಡಿಯಾಗಿತ್ತು. ಅನಂತರ ಅವರು ಮರಳಿ ಶೃಂಗಗಿರಿಯತ್ತ ಹೊರಟರು. ಅವರೊಡನೆ ಕೃಷ್ಣನೂ ಕಾಲಟಿಯ ಹಲವರೂ ಸೇರಿಕೊಂಡರು.

ಶ್ರೀ ಶಂಕರಾಚಾರ್ಯರ ಮಾತೃ ದಹನವಾದ ಸ್ಥಳ ಕಾಲಟಿಯ ಜನಕ್ಕೆ ಪವಿತ್ರ ಯಾತ್ರಾ ಸ್ಥಳವಾಯಿತು. ಜನ ಆ ಸ್ಥಳದಲ್ಲಿ ಸಣ್ಣದಾದ ಒಂದು ಗೂಡನ್ನು ನಿರ್ಮಿಸಿದರು. ಅಲ್ಲಿ ದಿನವೂ ದೀಪವನ್ನು ಹಚ್ಚುತ್ತಿದ್ದರು.

---

ಕಗ್ಗದ ಬೆಳಕಿನಲ್ಲಿ

# ಬ್ರಹ್ಮನನ್ನು ತಿಳಿಯುವುದು ಹೇಗೆ?

ಲೇ: ವಿ॥ ಜಿ. ಎಸ್. ನಟೇಶ



**ಅವಿದಿತಾಖಂಡ ಸತ್ತ್ವದಪಾರ ಜಲಧಿಯಲಿ**
**ಭುವನದ ದ್ವೀಪ ಕಿಂಚಿನ್ಮಾತ್ರವಿದಿತ ।**
**ಪವಿತಾಂತರಕ್ಷಿಗಾಯೆರಡುಮೊಂದೇ ವಸ್ತು**
**ವವಗುಂಠಿತ ಬ್ರಹ್ಮ– ಮಂಕುತಿಮ್ಮ ॥**

**ತಿಳಿಯಲಾಗದ, ತುಂಡು ಮಾಡಲಾಗದ ಸತ್ತ್ವದ ಅನಂತ ಸಾಗರದಲ್ಲಿ ಈ ಭೂಮಿಯ ದ್ವೀಪ ಸ್ವಲ್ಪ ಮಾತ್ರ ನಮಗೆ ತಿಳಿಯುವಂಥದ್ದು. ಪವಿತ್ರವಾದ ಒಳಗಣ್ಣಿಗೆ ಇವೆರಡೂ ಒಂದೇ ವಸ್ತುವಾಗಿರುತ್ತದೆ. ಬ್ರಹ್ಮವಸ್ತು ಅಜ್ಞಾನ ಅಥವಾ ಮಾಯೆಯಿಂದ ಆವೃತವಾಗಿರುತ್ತದೆ.**

ನಮಗೆ ಈ ಜಗತ್ತಿನಲ್ಲಿ ತಿಳಿದಿರುವುದಕ್ಕಿಂತ ತಿಳಿಯದಿರುವುದೇ ಹೆಚ್ಚು. ಒಂದು ದೃಷ್ಟಿಯಲ್ಲಿ ನಮಗೆ ತಿಳಿದಿರುವುದು ಶೂನ್ಯವೇ ಸರಿ. ನಮಗೆ ತಿಳಿಯದೆ ಇದ್ದ ಪೂರ್ಣವಾದ ಸತ್ತ್ವದ, ದಾಟಲಸಾಧ್ಯವಾದ ಸಮುದ್ರದಲ್ಲಿ ತಿಳಿದಿರುವುದು ದ್ವೀಪದಂತಿರುವ ಈ ಭೂಮಿಯ ಸ್ವಲ್ಪಭಾಗ ಮಾತ್ರ. ಇದು ನಮ್ಮ ಬಾಹ್ಯ ಚಕ್ಷುವಿನ ಅನುಭವವಾದರೆ, ಪವಿತ್ರವಾದ ಅಂತಃಚಕ್ಷುವಿಗೆ ಆಗುವ ಅನುಭವವೇ ಬೇರೆ. ಅದಕ್ಕೇ ಎರಡು ಒಂದೇ, ನಮ್ಮ ಅಂತರ್ನಯನಗಳನ್ನು ತೆರೆದಾಗ ಬ್ರಹ್ಮನ ದರ್ಶನವಾಗುತ್ತದೆ. ಅಜ್ಞಾನದ ಮಾಯೆ ನಮ್ಮನ್ನು ಆವರಿಸಿಕೊಂಡಾಗ ನಮ್ಮ ಕಣ್ಮುಂದಿರುವುದು ಮಾತ್ರ ಸತ್ಯವೆಂದು ಭಾಸವಾಗುತ್ತದೆ. ಜ್ಞಾನದ ಬೆಳಕಿನಿಂದ ನೋಡುತ್ತಾ ಹೋದಂತೆ ಅಪರಿಮಿತ ವಿಶ್ವದ ಪರಿಚಯವಾಗುತ್ತಾ ಹೋಗುತ್ತದೆ. ಜ್ಞಾನದ ಪಾರಮ್ಯವನ್ನು ಪಡೆದಾಗ ಈ ವಿಶ್ವವೇ ವಿಶ್ವಾತ್ಮನ ರೂಪವೆಂದು ತಿಳಿಯಲು ಕಷ್ಟವಾಗುವುದಿಲ್ಲ.

**ಮೂಲತತ್ತ್ವದ ಸ್ವರೂಪ ಎಂಥದು ?**

**ಹಾಲಿನೊಳುಬೆಣ್ಣೆ ಕಡಲೊಳಗೆ ನೀರ್ಗಲ್ಲವೊಲು**
**ತೇಲುವುದಮೇಯ ಸತ್ತ್ವದಲಿ ಮೇಯ ಜಗ ।**
**ಮೂಲದಶೆಯೊಳಗೊಂದು ಮಾಪನದ ಬಗೆಗೆರಡು**
**ಗಾಳಿಯುಸಿರುಗಳಂತೆ – ಮಂಕುತಿಮ್ಮ ॥**



ಕಂಪ್ಯೂಟರ್ ನ ಪಿತಾಮಹ – ಚಾಲ್ಸ್ ಬ್ಯಾಬೇಜ್

**ಹಾಲಿನಲ್ಲಿ ಬೆಣ್ಣೆ, ಸಮುದ್ರದಲ್ಲಿ ಮಂಜುಗಡ್ಡೆ ತೇಲುವಂತೆ, ಅಳತೆಗೆ ಸಿಗದ ಸತ್ತ್ವದಲ್ಲಿ ಅಳತೆಗೆ ಸಿಗುವಂತಹ ಜಗತ್ತು ತೇಲುತ್ತದೆ. ಮೂಲ ಸ್ಥಿತಿಯಲ್ಲಿ ಒಂದಾಗಿದ್ದು ಅಳತೆಗೆ ಮಾತ್ರ ಎರಡಾದಂತೆ ಕಾಣಿಸುತ್ತದೆ. ಗಾಳಿ ಮತ್ತು ಉಸಿರು ಒಂದೇ ಆಗಿದ್ದರೂ ಎರಡಾದಂತೆ ನಮಗೆ ಅನುಭವಕ್ಕೆ ಬರುತ್ತದೆ.**

ಜಗತ್ತಿನ ಸ್ವರೂಪ ಎರಡು ಬಗೆಯದ್ದಾಗಿರುತ್ತದೆ. ಒಂದು ಅಳತೆಗೆ ಸಿಗುವಂತದ್ದು. ಇನ್ನೊಂದು ಅಳತೆಗೆ ಸಿಗದಿರುವಂತದ್ದು. ಆದರೆ ಮೂಲಸ್ವರೂಪದಲ್ಲಿ ಒಂದೇ ಆಗಿರುತ್ತದೆ. ಡಿ. ವಿ. ಜಿ.ಯವರು ಇಲ್ಲಿ ಸುಂದರ ಉದಾಹರಣೆಯೊಂದಿಗೆ ಈ ವಿಚಾರವನ್ನು ತಿಳಿಯ ಪಡಿಸುತ್ತಾರೆ. ಹಾಲಿನಲ್ಲಿ ಬೆಣ್ಣೆ ತೇಲುತ್ತದೆ. ಸಮುದ್ರದಲ್ಲಿ ಮಂಜುಗೆಡ್ಡೆ ತೇಲುತ್ತದೆ. ಇಲ್ಲಿ ಹಾಲು ಮತ್ತು ಸಮುದ್ರಗಳು ಅಮೇಯಗಳು ಅರ್ಥಾತ್ ಅಳತೆಗೆ ಸಿಗದಂಥವು. ಮೂಲ ರೂಪದಲ್ಲಿ ಈ ಎರಡೂ ಒಂದೆ. ಅಳತೆಯ ವಿಚಾರಕ್ಕೆ ಬಂದಾಗ ಮಾತ್ರ ಬೇರೆ ಬೇರೆಯಾಗಿ ಕಾಣಿಸುತ್ತವೆ. ಗಾಳಿ ಉಸಿರುಗಳು ಬೇರೆ ಬೇರೆಯಾಗಿ ಕಂಡುಬಂದರೂ ಮೂಲಸ್ವರೂಪದಲ್ಲಿ ಅವೆರಡೂ ಒಂದೇ. ವೈವಿಧ್ಯಮಯವಾಗಿ ಕಂಡುಬರುವ ಈ ಸೃಷ್ಟಿ, ಮೂಲದಲ್ಲಿ ಯಾವುದೋ ಅಗೋಚರವಾದ ಒಂದು ಶಕ್ತಿಯಿಂದ ರೂಪಿತವಾಗಿದೆ. ಮನಸ್ಸನ್ನು ಅಂತರ್ಮುಖವಾಗಿ ಹರಿಯಬಿಟ್ಟಾಗ ಅವೆಲ್ಲ ಒಂದೇ ಎಂದು ತಿಳಿಯುವುದು ಕಷ್ಟವಾಗದು. ಅಸಮತೆಯಲ್ಲಿ ಸಮತೆಯನ್ನು ಕಂಡುಕೊಂಡು ಬಾಳನ್ನು ನಡೆಸುತ್ತಾ ಜೀವನಸಿದ್ಧಿಯನ್ನು ನಾವು ಪಡೆದುಕೊಳ್ಳಬೇಕು. ಇದೇ ನಿಜವಾದ ಜೀವನಧರ್ಮ.

**ನರಜಂತು ಎಂತಹ ಮಿಶ್ರಣ ?**

**ಕಾಯ ನಿರ್ಣೇಯವದರೊಳು ಮನವನಿರ್ಣೇಯ**
**ಸ್ನಾಯು ಸಂಖ್ಯೇಯ ಜೀವಳಮಸಂಖ್ಯೇಯ ।**
**ಮೇಯಾಪ್ರಮೇಯ ಮಿಶ್ರಣವಿಂತು ನರಜಂತು**
**ನೇಯವದು ವಿಶ್ವಕಂ – ಮಂಕುತಿಮ್ಮ ॥**

**ಶರೀಯ ನಿರ್ಣಯಕ್ಕೆ ಸಿಗುವಂಥದ್ದು. ಅದರಲ್ಲಿ ಮನಸ್ಸು ಅನಿಶ್ಚಿತ. ಸ್ನಾಯುಗಳು ಗಣನೆಗೆ ಸಿಗುತ್ತವೆ. ಜೀವಸತ್ತ್ವವನ್ನು ಎಣಿಸಲಾಗುವುದಿಲ್ಲ. ಹೀಗೆ ಮೇಯ ಹಾಗೂ ಅಪ್ರಮೇಯಗಳ ಮಿಶ್ರಣ ಈ ನರಜಂತು. ಅದನ್ನು ವಿಶ್ವದ ಕಡೆಗೆ ಒಯ್ಯಬೇಕು.**

ನಮ್ಮ ಶರೀರದಲ್ಲಿ ನಿರ್ಣಯಕ್ಕೆ ಸಿಗುವಂಥದ್ದೂ ಇರುತ್ತದೆ. ಹಾಗೆಯೇ ಸಿಗದಿರುವಂತದ್ದೂ ಇರುತ್ತದೆ. ನಮ್ಮ ಶರೀರವನ್ನು ನಿರ್ಣಯಿಸಬಹುದು. ನಮ್ಮ ಎಲ್ಲಾ ಅಂಗಾಂಗಗಳು ಅಳತೆಗೆ ಸಿಗುತ್ತವೆ. ಆದರೆ ಮನಸ್ಸನ್ನು ನಿರ್ಣಯಕ್ಕೆ ಒಳಪಡಿಸಲಾಗದು. ನಮ್ಮ ದೇಹದಲ್ಲಿರುವ ಸ್ನಾಯುಗಳು ಲೆಕ್ಕಕ್ಕೆ ಸಿಗುತ್ತವೆ. ಆದರೆ ಜೀವ ಗಣನೆಗೆ ಸಿಗುವಂತದ್ದಲ್ಲ. ಹೀಗೆ ಮನುಷ್ಯ ಜೀವಿ ಈ ಎರಡರ ಮಿಶ್ರಣ. ಇದನ್ನು ವಿಶ್ವದಲ್ಲಿ ಹೊಂದಾಣಿಸಿಕೊಳ್ಳಬೇಕಾಗುತ್ತದೆ. ಇದನ್ನೆಲ್ಲ ಗಮನಿಸಿದಾಗ ಈ ಸೃಷ್ಟಿಯ ಅದ್ಭುತದ ಪರಿಚಯವಾಗುತ್ತದೆ. ಮಾನವನ ಒಳಗಡೆಯೂ ಈ ರಹಸ್ಯವಡಗಿದೆ. ಹೊರಗೂ ಅಡಗಿದೆ. ಕೆಲವಷ್ಟು ವಿಚಾರಗಳನ್ನು ಮಾನವ ಯಥಾವತ್ತಾಗಿ ಸ್ವೀಕರಿಸಬೇಕಾಗುತ್ತದೆ. ಅದನ್ನೆಂದಿಗೂ ಬದಲಿಸಲಾಗುವುದಿಲ್ಲ. ಅಂತೆಯೇ ಈ ಜಗತ್ತಿನಲ್ಲಿ ನಾನಾ ರೀತಿಯ ಸ್ವಭಾವದ ಜನರಿರುತ್ತಾರೆ. ಅವರನ್ನು ಎಂದಿಗೂ ಬದಲಾಯಿಸಲು ಆಗದು. ಅದಕ್ಕೆ ಹೊಂದಾಣಿಸಿಕೊಳ್ಳುವುದೊಂದೇ ನಮಗಿರುವ ದಾರಿ. ಕಡಿಯುವುದು ಚೇಳಿನ ಅಭ್ಯಾಸ. ಅದರೊಂದಿಗೆ ಎಚ್ಚರಿರುವ ಪರಿಪಾಟ ನಮ್ಮದಾದರೆ ಸಾಕು.

**ಈ ಜಗತ್ತಿನ ಮಿಶ್ರಣ ಎಂಥದು ?**

**ಜ್ಞೇಯದ ದ್ವೀಪಕಜ್ಞೇಯಾಬ್ಧಿಯಾವರಣ**
**ಕಾಯಕದ ಗಿರಿಗೆ ಮಾನಸದಭ್ರಪಟಲ ।**
**ಮೇಯವನು ಬಗೆದೇನಮೇಯ ಸುತ್ತಲುಮಿರಲು ?**
**ಮಾಯೆಯೇ ಮಿಶ್ರಣವೊ – ಮಂಕುತಿಮ್ಮ ॥**

**ತಿಳಿಯಲಾಗುವ ದ್ವೀಪಕ್ಕೆ ತಿಳಿಯಲಾಗದ ಸಮುದ್ರದ ಆವರಣವಿರುತ್ತದೆ. ಶರೀರದ ಬೆಟ್ಟಕ್ಕೆ ಮನಸ್ಸೆಂಬ ಮೋಡದ ಹೊದಿಕೆ ಇರುತ್ತದೆ. ಅಳತೆಗೆ ಸಿಗದಂತಹ ಅಮೇಯ ಸುತ್ತಲೂ ಇರುವಾಗ ಮೇಯವನ್ನು ತಿಳಿದೇನು ಫಲ ? ಈ ಮಿಶ್ರಣ ಮಾಯೆಯಾಗಿದೆ.**

ಈ ಪ್ರಪಂಚದಲ್ಲಿ ನಮ್ಮ ಜ್ಞಾನಕ್ಕೆ ಗೋಚರಿಸುವಂಥವುಗಳು ಇರುವಂತೆ, ಅಗೋಚರವಾದವುಗಳು ಬಹಳಷ್ಟಿವೆ. ಹೀಗೆ ಜ್ಞೇಯ ಮತ್ತು ಅಜ್ಞೇಯಗಳು ಪರಸ್ಪರ ಸಂಬಂಧಗಳನ್ನು ಹೊಂದಿರುತ್ತವೆ. ಸಮುದ್ರದ ಮಧ್ಯದಲ್ಲಿರುವ ದ್ವೀಪ ನಮ್ಮ ಜ್ಞಾನಕ್ಕೆ ಗೋಚರಿಸುತ್ತದೆ. ಅದರ ಸುತ್ತಲೂ ಸಾಗರ ಆವರಿಸಿಕೊಂಡಿರುತ್ತದೆ. ಅದು ನಮ್ಮ ಜ್ಞಾನಕ್ಕೆ ಅಗಮ್ಯ. ಮನುಷ್ಯನ ದೇಹವೆಂಬ ಬೆಟ್ಟಕ್ಕೆ ಮನಸೆಂಬ ಮೋಡದ ಆವರಣ ಆವರಿಸಿಕೊಡಿರುತ್ತದೆ. ನಮ್ಮ ಎಣಿಕೆಗೆ ಸಿಗುವಂತದ್ದು ಎಲ್ಲೋ ಸ್ವಲ್ಪ ಮಾತ್ರ. ನಮ್ಮ ಅರಿವಿಗೆಟುಕದ, ಎಣಿಕೆಗೆ ನಿಲುಕದ ಅದೆಷ್ಟೋ ವಿಷಯಗಳು ನಮ್ಮ ಸುತ್ತಮುತ್ತಲೂ ಆವರಿಸಿಕೊಂಡಿವೆ. ಹೀಗಿರುವಾಗ ತಮ್ಮ ಎಣಿಕೆಗೆ ಸಿಗುವಂಥದ್ದನ್ನು ಎಣಿಸುತ್ತ ಕಾಲ ಕಳೆದರೆ ಏನು ಪ್ರಯೋಜನ ? ಈ ಮಿಶ್ರಣವೇ ಒಂದು ಮಾಯೆ, ಮಾಯೆಯಲ್ಲಿ ಮುಳುಗಿರುವವನಿಗೆ ಇದರ ಅರ್ಥ ತಿಳಿಯುವುದಿಲ್ಲ. ಮಾಯೆಯನ್ನು ಮೀರಿದವನು ಮಾತ್ರ ಈ ರಹಸ್ಯವನ್ನು ಅರಿಯಬಹುದೇನೋ! ಮಾಯೆಯ ಪರದೆ ಸರಿದಾಗ ಜಗತ್ತಿನ ರಹಸ್ಯ ತೆರೆದುಕೊಳ್ಳುತ್ತದೆ. ಈ ಮಾಯೆಯನ್ನು ನಮ್ಮ ಋಷಿಗಳು ಅವಿದ್ಯೆ ಎಂದು ಕರೆದರು. ವಿದ್ಯೆ ಅದನ್ನು ತೆರೆಗೆ ಸರಿಸುವ ಸಾಧನ. 'ಸಾ ವಿದ್ಯಾ ಯಾವಿಮುಕ್ತಯೇ'.

**ಜೀವಿಯ ಬಾಳು ಎಂಥದ್ದು ?**

**ಕಾಲವಕ್ಷಯದೀಪವದರ ಪಾತ್ರೆಯಪಾರ**
**ಬಾಳ್ ಅದರಿನಾದೊಮದು ಕಿರುಹಣತೆ ಮಿಣುಕು ।**
**ಗಾಳಿಯಾರಿಪುದೊದನಿನ್ನೊಂದ ಹೊತ್ತಿಪುದು**
**ತೈಲಧಾರೆಯಖಂಡ – ಮಂಕುತಿಮ್ಮ ॥**

**ಕಾಲವೆಂಬುದು ನಾಶವಾಗದ ದೀಪ. ಅದರ ಪಾತ್ರೆ ಅಮಿತ. ನಮ್ಮೆಲ್ಲರ ಬಾಳು ಅದರಿಂದಾದ ಒಂದು ಸಣ್ಣ ಹಣತೆಯ ಮಿಣುಕು ಒಂದು ದೀಪವನ್ನು ಗಾಳಿ ಆರಿಸಿದರೆ ಇನ್ನೊಂದನ್ನು ಹತ್ತಿಸುತ್ತದೆ. ಎಣ್ಣೆಯ ಧಾರೆ ಮಾತ್ರ ಅವಿರತವಾಗಿ ಸುರಿಯುತ್ತಿರುತ್ತದೆ.**

ಕಾಲವೆಂಬುದು ಎಂದೂ ಆರದ ದೀಪ. ಅದು ಅಕ್ಷಯ. ಅದೊಂದು ಪಾರವಿಲ್ಲದ ಪಾತ್ರೆ. ಅರ್ಥಾತ್ ಆ ಪಾತ್ರೆಯ ಆಳ ಅಗಲಗಳು ಅಳತೆಗೆ ಸಿಗದವುಗಳು. ನಮ್ಮೆಲ್ಲರ ಬಾಳು ಅದರಿಂದ ಬಂದ ಒಂದು ಸಣ್ಣ ಹಣತೆಯ ಮಿಣುಕು ಮಾತ್ರ. ಗಾಲಿ ಒಂದು ಹಣತೆಯನ್ನು ಆರಿಸಿದರೆ ಇನ್ನೊಂದು ಹೊತ್ತಿಸುತ್ತದೆ. ಈ ಕಾಲದ ಪಾತ್ರೆಯ ಎಣ್ಣೆ ಎಂದೂ ಖಾಲಿಯಾಗುವುದಿಲ್ಲ. ಅದರ ಧಾರೆ ಅಖಂಡವಾಗಿ ಆ ಪಾತ್ರೆಗೆ ಬೀಳುತ್ತಲೇ ಇರುತ್ತದೆ. ಕಾಲದ ದೀಪ ಸದಾ ಉರಿಯುತ್ತಲೇ ಇರುತ್ತದೆ. ಜೀವಿಯ ಬಾಳು ಮಾತ್ರ ಒಂದು ಹಣೆತೆಯ ಮಿಣುಕು. ಒಂದು ಹಣತೆ ಆರಿದರೆ ಇನ್ನೊಂದು ಬೆಳಗಲಾರಂಭಿಸುತ್ತದೆ. ಜೀವಿಗಳ ಹುಟ್ಟು ಸಾವುಗಳ ನಿರಂತರ ಸಾಗುತ್ತಲೇ ಇರುತ್ತವೆ. ಕಾಲ ಮಾತ್ರ ಅಚಲವಾಗಿ ನಿಂತಿರುತ್ತದೆ. ಅದು ಜೀವಿಗಳ ರೂಪದ ಹಣತೆಗಳನ್ನು ಹತ್ತಿಸುತ್ತಲೇ ಇರುತ್ತದೆ. ಆರಿಸುತ್ತಲೂ ಇರುತ್ತದೆ. ಅಂತೆಯೇ ನಾವೆಲ್ಲ ಬೆಳಗಬೇಕು, ಬೆ ಳಕಾಗಿ ಬದುಕಬೇಕು. ಅದೇ ನಮ್ಮ ಜೀವನದ ಸಾರ್ಥಕತೆ.

**ವಚನಭಾಗವತ**

# ಅಂಬರೀಷ

ಲೇ: ತ. ಸು. ಶಾಮರಾಯ

ಬ್ರಹ್ಮಜ್ಞನಾದ ನಾಭಾಗನ ಮಗ ಅಂಬರೀಷ. ಈತನು ಸಪ್ತದ್ವೀಪಗಳಿಂದ ಕೂಡಿದ ಅಖಂಡ ಭೂಮಂಡಲಕ್ಕೆ ಚಕ್ರವರ್ತಿಯಾಗಿದ್ದ. ಕೊನೆಮೊದಲಿಲ್ಲದಷ್ಟು ಅಧಿಕಾರ ಐಶ್ವರ್ಯ ವೈಭವಗಳಿಗೆ ಆತನು ಅಧಿಪತಿಯಾಗಿದ್ದರೂ ಆತನಿಗೆ ಅವುಗಳಲ್ಲಿ ಸ್ವಲ್ಪವೂ ಆಸಕ್ತಿ ಇರಲಿಲ್ಲ. 'ಲೌಕಿಕ  ಭೋಗ ಭಾಗ್ಯಗಳೆಲ್ಲ ಅಶಾಶ್ವತ, ಈಶ್ವರಭಕ್ತಿಯೊಂದೆ ಶಾಶ್ವತ' ಎಂಬುದು ಆತನ ಭಾವನೆ. ಕುಲಗುರುಗಳಾದ ವಶಿಷ್ಠರ ಆಲೋಚನೆಗೆ ಅನುಸಾರವಾಗಿ ಆತನು ಧರ್ಮದಿಂದ ರಾಜ್ಯಭಾರವನ್ನು ನಡೆಸುತ್ತಿರಲು, ಆತನ ಪ್ರಜೆಗಳು ಸ್ವರ್ಗಸುಖವನ್ನು ಕೂಡ ಹುಲ್ಲಿಗೆ ಸಮಾನವೆಂದು ಭಾವಿಸುವಷ್ಟು ಸುಖ ಸಂತೋಷಗಳಲ್ಲಿ ನಲಿಯುತ್ತಿದ್ದರು. ರಾಜನು ಆಗಾಗ ವಶಿಷ್ಠ, ಗೌತಮ, ಅಸಿತ ಮೊದಲಾದ ಮಹರ್ಷಿಗಳ ಸಹಾಯದಿಂದ ಅಶ್ವಮೇಧಯಾಗವನ್ನು ಮಾಡುತ್ತಿದ್ದನು. ಆ ಕಾಲದಲ್ಲಿ ತಮ್ಮ ಭಾಗದ ಹವಿಸ್ಸನ್ನು ಪಡೆಯಲು ದೇವತೆಗಳೆ ಸ್ವತಃ ಅಲ್ಲಿಗೆ ಬರುತ್ತಿದ್ದರು. ಆ ಕಾಲದಲ್ಲಿ ಯಾಗವನ್ನು ನಡೆಸುವವರೂ ಅದನ್ನು ನೋಡಲು ನೆರೆದವರೂ ತಮ್ಮ ಉಡಿಗೆ ತೊಡಿಗೆಗಳಿಂದ ಆ ದೇವತೆಗಳನ್ನೂ ನಾಚಿಸುವಷ್ಟು ವೈಭವದಿಂದಿರುತ್ತಿದ್ದರು.

ಕಾಲ ಮುಂದುವರಿಯುತ್ತಾ ಹೋದಂತೆ ರಾಜನ ಮನಸ್ಸು ಭೋಗಗಳಿಂದ ಹಿಮ್ಮುಖವಾಗುತ್ತಾ ಹೊರಟಿತು. ಆತನು ಭಗವಂತನ ಧ್ಯಾನ ಅಥವಾ ಭಕ್ತರ ಸಂಗದಲ್ಲಿ ಕಾಲವನ್ನೆಲ್ಲ ಕಳೆಯುತ್ತಿದ್ದನು. ಆತನ ಕಣ್ಣುಗಳು ದೇವರ ಗುಡಿಯನ್ನೊ ಮೂರ್ತಿಯನ್ನೊ ನೋಡಲು ಬಯಸುತ್ತಿದ್ದವು; ಕಿವಿಗಳಿಗೆ ಹರಿಕೀರ್ತನೆಯಲ್ಲಿ ಆಸೆ; ಮೂಗು ಹರಿಚರಣದ ತುಳಸಿಯ ವಾಸನೆಯನ್ನು ಬೇಡುವುದು ; ನಾಲಿಗೆಗೆ ಹರಿನೈವೇದ್ಯದ ಚಪಲ ; ಆತನ ಕೈಗಳಿಗೆ ದೇವರ ಗುಡಿಯನ್ನು ಸಾರಿಸಬೇಕೆಂಬ, ಹರಿ ಭಕ್ತರ ಪಾದಗಳನ್ನು ಒತ್ತಬೇಕೆಂಬ ಆಶೆ; ಪಾದಗಳಿಗೆ ತೀರ್ಥಯಾತ್ರೆಯ ಹಾದಿಯನ್ನು ಹಿಡಿಯಬೇಕೆಂಬ ಗೀಳು; ತಲೆಗೆ ದೇವರ ಪಾದದಲ್ಲಿ ಉರುಳಾಡಬೇಕೆಂಬ ಭ್ರಮೆ; ಹೆಚ್ಚೇನು, ಆತನ ದೇಹ ಇಂದ್ರೀಯ ಮನಸ್ಸುಗಳು ಪರಮೇಶ್ವರನಿಗೆ ಮೀಸಲಾಗಿ ಹೋಗಿದ್ದವು. ದೇವೇಂದ್ರನ ವೈಭವವನ್ನು ಹೀಯಾಳಿಸುವ ಅರಮನೆ, ದಿವ್ಯಸುಂದರಿಯರಾದ ಮಡದಿಯರು, ಭಂಡಾರ, ಚತುರಂಗಸೈನ್ಯ, ದಾಸದಾಸಿಯರು–ಎಲ್ಲದರಲ್ಲಿಯೂ ಆತನಿಗೆ ಜಿಹಾಸೆ. ಸದಾ ಆತನು ಹರಿಯ ಧ್ಯಾನದಲ್ಲಿ ಮಗ್ನನಾದನು. ಆತನ ಈ ದೃಢ ಭಕ್ತಿಯನ್ನು ಕಂಡು ಮೆಚ್ಚಿದ ಶ್ರೀಹರಿಯು ತನ್ನ ಚಕ್ರಾಯುಧವನ್ನೇ ಆತನಿಗೆ ಅನುಗ್ರಹಿಸಿ ಕೊಟ್ಟನು.

ಸಾಮ್ರಾಜ್ಯಸುಖದಿಂದ ವಿಮುಖನಾದ ಅಂಬರೀಷನು ತನ್ನ ಧರ್ಮಪತ್ನಿಯೊಡನೆ ದ್ವಾದಶಿಯ ವ್ರತವನ್ನು ಕೈಕೊಂಡು ಒಂದು ವರ್ಷದವರೆಗೂ ಅದನ್ನು ಆಚರಿಸಿದನು. ವ್ರತದ ಕೊನೆಯಲ್ಲಿ ಕಾರ್ತೀಕಮಾಸದ ದ್ವಾದಶಿ ಬರುವುದಕ್ಕೆ ಮುಂಚೆ, ಮೂರುದಿನಗಳು ಆತ ಉಪವಾಸವಿದ್ದು, ನಾಲ್ಕನೆಯ(ದ್ವಾದಶಿಯ) ದಿನ ಬೆಳಿಗ್ಗೆ ಯಮುನಾ ನದಿಯಲ್ಲಿ ಸ್ನಾನಮಾಡಿ, ಶ್ರೀಹರಿಯನ್ನು ಭಕ್ತಿಯಿಂದ ಪೂಜೆಮಾಡಿದನು. ಆನಂತರ ಆತ ಆಗತಾನೆ ಕರುಹಾಕಿ ಬೇಕಾದಷ್ಟು ಹಾಲನ್ನು ಕೊಡಬಲ್ಲ ಅರವತ್ತುಕೋಟಿ ಗೋವುಗಳನ್ನು, ಬಂಗಾರದ ಕೋಡಣಗಳಿಂದಲೂ ಬೆಳ್ಳಿಯ ಗಗ್ಗರಗಳಿಂದಲೂ ಅಲಂಕರಿಸಿ, ಕರುಗಳೊಡನೆ ದಾನಮಾಡಿದನು. ಬ್ರಾಹ್ಮಣರಿಗೂ ಬಡಬಗ್ಗರಿಗೂ ರಸಕವಳವನ್ನಿತ್ತು, ಕೈತುಂಬ ದಕ್ಷಿಣೆ ಕೊಟ್ಟು ತೃಪ್ತಿಪಡಿಸಿದಮೇಲೆ, ಅಂಬರೀಷನು ತಾನೂ ಪಾರಣೆ ಮಾಡುವುದಕ್ಕೆ ಸಿದ್ಧನಾದನು. ಅಷ್ಟರಲ್ಲಿ ಮಹಾ ತಪಸ್ವಿಯಾದ ದುರ್ವಾಸಮುನಿಯು ಅಲ್ಲಿಗೆ ಆಗಮಿಸಿದನು. ಪರಮೇಶ್ವರನೇ ಪ್ರತ್ಯಕ್ಷವಾದಂತೆ ಭಾವಿಸಿದ ಅಂಬರೀಷನು ಅತ್ಯಂತ ಆದರದಿಂದ ಆತನನ್ನು ಇದಿರುಗೊಂಡು, ಭಕ್ತಿಯಿಂದ ನಮಸ್ಕರಿಸಿ ಊಟಕ್ಕೆ ಏಳುವಂತೆ ಬೇಡಿದನು. ಋಷಿಯು ಹಾಗೆಯೇ ಆಗಲೆಂದು ಹೇಳಿ ನಿತ್ಯಕರ್ಮಗಳನ್ನು ಮಾಡಿಕೊಂಡು ಬರುವುದಕ್ಕಾಗಿ ಯಮುನ ನದಿಗೆ



ಭಾರತದ ಅರಣ್ಯ ಶಾಸ್ತ್ರದ ಪಿತಾಮಹ – ಬ್ರಾಂಡೀಸ್

ಹೋದನು. ಅಲ್ಲಿ ಆತ ನೀರಿನಲ್ಲಿ ಮುಳುಗಿ ಧ್ಯಾನ ಮಾಡುತ್ತಾ ಸಮಾಧಿಸ್ಥನಾದನು. ಎಷ್ಟು ಹೊತ್ತಾದರೂ ಆತನು ಮೇಲಕ್ಕೇಳಲಿಲ್ಲ. ಇತ್ತ ಅಂಬರೀಷನು ದ್ವಾದಶಿಯ ಮುಹೂರ್ತ ಕಳೆಯುವುದರೊಳಗಾಗಿ ಊಟವನ್ನು ಮುಗಿಸಬೇಕೆಂದು ತಹತಹ ಪಡುತ್ತಿದ್ದನು. ಅತಿಥಿಯನ್ನು ಬಿಟ್ಟು ಊಟಮಾಡುವುದು ದೋಷ, ದ್ವಾದಶಿಯ ತಿಥಿ ಹೋಗುವುದರೊಳಗಾಗಿ ಊಟಮಾಡದಿದ್ದರೂ ದೋಷ. ಆತನು ಮುಂದೋರದೆ ಶಾಸ್ತ್ರಜ್ಞರನ್ನು ವಿಚಾರಿಸಲು, ಅವರು 'ನೀರನ್ನು ಕುಡಿದರೆ ಪಾರಣೆಯ ಫಲ ಬರುತ್ತದೆ' ಎಂದು ತಿಳಿಸಿದರು. ಅಂಬರೀಷನು ಅದರಂತೆಯೇ ಸ್ವಲ್ಪ ನೀರನ್ನು ಕುಡಿದು, ದುರ್ವಾಸನು ಹಿಂದಿರುಗುವುದನ್ನೆ ಕಾಯುತ್ತಾ ಕುಳಿತನು.

ಇದಾದ ಸ್ವಲ್ಪ ಹೊತ್ತಿನ ಮೇಲೆ ದುರ್ವಾಸನು ಸಮಾಧಿಯಿಂದ ಎಚ್ಚೆತ್ತು, ತನ್ನ ನಿತ್ಯಕರ್ಮಗಳೆಲ್ಲ ಮುಗಿಯುತ್ತಲೆ ಅಂಬರೀಷನ ಬಳಿಗೆ ಹಿಂದಿರುಗಿದನು. ಅವನ ಮುಖವನ್ನು ನೋಡುತ್ತಲೆ, ಅವನು ನೀರು ಕುಡಿದು ದ್ವಾದಶಿಯ ವ್ರತವನ್ನು ಮುಗಿಸಿರುವನೆಂಬುದು ಆತನ ಜ್ಞಾನದೃಷ್ಟಿಗೆ ಗೋಚರವಾಯಿತು. ದುರ್ವಾಸನೆಂದರೆ ಶೀಘ್ರ ಕೋಪಕ್ಕೆ ತವರ್ಮನೆ. ಆತನಿಗೆ ರಾಜನ ಚರ್ಯೆಯಿಂದ ತಡೆಯಲಾರದಷ್ಟು ಕೋಪ ಬಂದಿತು. ಭಕ್ತಿಯಿಂದ ಕೈಕಟ್ಟಿಕೊಂಡು ತನ್ನ ಇದಿರಿಗೆ ನಿಂತಿರುವ ರಾಜನನ್ನು ಕೆಕ್ಕರುಗಣ್ಣಿನಿಂದ ಬಿರಿಬಿರಿ ನೋಡುತ್ತಾ 'ಎಲಾ, ನಿಮಗೆಷ್ಟು ಸೊಕ್ಕು ? ಅತಿಥಿಯಾದ ನನ್ನನ್ನು ಊಟಕ್ಕೆಂದು ಕರೆದು, ನನಗೆ ಊಟಕ್ಕಿಡುವ ಮುನ್ನವೆ ನೀನು ಪಾರಣೆಯನ್ನು ಮಾಡಿ ಮುಗಿಸಿದೆಯಾ ! ಇದೆಂತಹ ದುರಾಚಾರ ! ಈ ಪಾಪಕ್ಕೆ ತಕ್ಕ ಫಲವನ್ನು ಈಗಲೆ ಅನುಭವಿಸಬೇಕು' ಎಂದು ಹೇಳಿ, ತನ್ನ ಜಟೆಯಿಂದ ಒಂದು ಕೂದಲನ್ನು ಕಿತ್ತು ನೆಲಕ್ಕೆ ಬಡಿದನು. ಒಡನೆಯೆ ಅಲ್ಲಿ ಭಯಂಕರ ರೂಪಿನ ಮಾರಿಯೊಂದು ಕಾಣಿಸಿತು. ಅದು ತನ್ನ ದೇಹದಿಂದ ಸುತ್ತಲೂ ಉರಿಯನ್ನು ಚೆಲ್ಲುತ್ತಾ, ಹಿರಿದ ಕತ್ತಿಯೊಡನೆ ಅಂಬರೀಷನ ಬಳಿಗೆ ಹಾರಿ ಬಂದಿತು. ದೈವಭಕ್ತನಾದ ಅಂಬರೀಷನು ಸ್ವಲ್ಪವೂ ಭಯಗೊಳ್ಳದೆ ಧ್ಯಾನಸ್ಥಿಮಿತಮೂರ್ತಿಯಾಗಿ ನಿಂತಿದ್ದನು. ಅಷ್ಟರಲ್ಲಿ ವಿಷ್ಣುಚಕ್ರವುರೊಯ್ಯೆಂದು ಅಲ್ಲಿಗೆ ಹಾರಿ ಬಂದು, ಹೆಬ್ಬಾವನ್ನು ಸುಟ್ಟುಹಾಕುವ ಕಾಡುಕಿಚ್ಚಿನಂತೆ ಆ ಮಾರಿಯನ್ನು ಧ್ವಂಸಮಾಡಿತು. ಮರು ನಿಮಿಷದಲ್ಲಿ ಅದು ದುರ್ವಾಸನತ್ತ ತಿರುಗಿತು. ಅದರ ರಭಸವನ್ನು ಕಂಡು ಆ ಋಷಿಯು ಭಯದಿಂದ ನಡುಗುತ್ತಾ ಕಾಲಿಗೆ ಬುದ್ಧಿ ಹೇಳಿದನು.

ಜೀವಭಯದಿಂದ ಓಟಕಿತ್ತ ದುರ್ವಾಸನನ್ನು ವಿಷ್ಣುಚಕ್ರ ಬೆನ್ನಟ್ಟಿತು. ಋಷಿಯು ಅದರಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಮೇರು ಪರ್ವತದ ಗುಹೆಗಳನ್ನು ಹೊಕ್ಕನು, ಚಕ್ರ ರೊಯ್ಯೆಂದು ಶಬ್ದ ಮಾಡುತ್ತಾ ಅಲ್ಲಿಗೆ ನುಗಿತ್ತು ; ಋಷಿ ಸ್ವರ್ಗಕ್ಕೆ ಓಡಿದ, ಅದು ಹಿಂದೆಯೇ ಬೆನ್ನಟ್ಟಿ ಬಂತು ; ಲೋಕ ಲೋಕಗಳನ್ನೆಲ್ಲ ಹೊಕ್ಕ, ಆದರೇನು ? ಬೆನ್ನಟ್ಟಿದ ಬೇತಾಳದಂತೆ ಚಕ್ರ ಹಿಂದೆಯೇ ನುಗ್ಗಿ ಬಂತು. ಋಷಿಯು ತನಗೆ ಉಳಿಗಾಲವಿಲ್ಲವೆಂದು ಸತ್ಯಲೋಕಕ್ಕೆ ಓಡಿಹೋಗಿ ಬ್ರಹ್ಮನನ್ನು ಮೊರೆಹೊಕ್ಕನು. ಆದರೆ ಬ್ರಹ್ಮನು 'ಅಯ್ಯಾ ಮಹರ್ಷಿ, ಭಗವಂತನ ಚಕ್ರದಿಂದ ನಿನ್ನನ್ನು ಕಾಪಾಡುವುದು ನನ್ನ ಕೈಲಿ ಸಾಧ್ಯವಿಲ್ಲ' ಎಂದು ಕೈ ಅಲ್ಲಾಡಿಸಿದ. ಅಷ್ಟರಲ್ಲಿ ಚಕ್ರವು ಬೆನ್ನಟ್ಟಿ ಬರುತ್ತಿರುವುದನ್ನು ದೂರದಿಂದ ಕಂಡ ದುರ್ವಾಸಋಷಿ, ಅಲ್ಲಿಂದಲೂ ಓಟ ಕಿತ್ತು ಕೈಲಾಸಕ್ಕೆ ಬಂದ. ಪರಮಶಿವನು 'ಅಯ್ಯಾ ಮಹರ್ಷಿ, ನಾವಾರೂ ನಿನ್ನ ಸಹಾಯಕ್ಕೆ ಬರಲಾರೆವು. ನೀನು ಶ್ರೀಹರಿಯ ಬಳಿಗೇ ಓಡಿಹೋಗು' ಎಂದ. ಋಷಿಯು ಉಸಿರು ತಿರುಗಿಸಿಕೊಳ್ಳುವುದಕ್ಕೂ ಅವಕಾಶವಿಲ್ಲದೆ ವೈಕುಂಠಕ್ಕೆ ಓಡಿಬಂದ. 'ಸ್ವಾಮಿ, ನನ್ನನ್ನು ಕಾಪಾಡು' ಎಂದು ಬೇಡುತ್ತಿರುವ ಆ ಋಷಿಯನ್ನು ಕುರಿತು ಶ್ರೀಹರಿಯು 'ಅಯ್ಯಾ ಮುನೀಂದ್ರ ! ನಾನು ಸ್ವತಂತ್ರನಲ್ಲ, ಕೇವಲ ಭಕ್ತರ ಅಧೀನ. ಪತಿವ್ರತೆಯಾದವಳು ಗಂಡನನ್ನು ಅಧೀನದಲ್ಲಿ ಇಟ್ಟುಕೊಂಡಿರುವ ಹಾಗೆ ಭಗವದ್ಭಕ್ತರು ನನ್ನನ್ನು ವಶಪಡಿಸಿಕೊಂಡಿದ್ದಾರೆ. ಆದ್ದರಿಂದ ನಿನ್ನ ಸಂಕಟವನ್ನು ನಾನು ತಪ್ಪಿಸಲಾರೆ. ಅದನ್ನು ತಪ್ಪಿಸಬೇಕಾದರೆ ನೀನು ಅಂಬರೀಷನನ್ನೆ ಮೊರೆಹೋಗಬೇಕು. ಅಯ್ಯಾ ಮಹರ್ಷಿ, ತಪಸ್ಸು ಮತ್ತು ವಿದ್ಯೆಗಳು ಸಜ್ಜನರಿಗೆ ಶ್ರೇಯಸ್ಕರವಾದುವು. ಅವನ್ನು ದುರುಪಯೋಗಪಡಿಸಿದರೆ ಉಪಯೋಗಿಸುವವನಿಗೇ ಮೃತ್ಯುವಾಗುತ್ತವೆ' ಎಂದನು.

ವಿಷ್ಣುವಿನ ನುಡಿಯ ಕಿಡಿಗಿಂತಲೂ ಚಕ್ರವು ಸುರಿಸುತ್ತಿರುವ ಬೆಂಕಿಯ ಕಿಡಿಗಳು ಹೆಚ್ಚು ಭಯಂಕರವಾಗಿದ್ದುದರಿಂದ, ದುರ್ವಾಸನು ಅಲ್ಲಿ ತಳುವದೆ ಅಂಬರೀಷನ ಬಳಿಗೆ ಓಡಿಬಂದು ಅವನ ಪಾದಗಳನ್ನು ಭದ್ರವಾಗಿ ಹಿಡಿದುಕೊಂಡನು. ಅಂಬರೀಷನು ತಕ್ಷಣವೇ ಪಾದಗಳನ್ನು ಬಿಡಿಸಿಕೊಂಡು ಭಕ್ತಿಯಿಂದ ಸ್ತೋತ್ರಮಾಡಿದನು–' ಸಹಸ್ರ ಧಾರೆಗಳಿಂದ ಕೂಡಿದ ಹೇ ಸುದರ್ಶನ ! ನಿನಗೆ ನಮಸ್ಕಾರ. ನೀನೆ ಬೆಂಕಿ, ನೀನೆ ಸೂರ್ಯ, ನೀನೆ ಚಂದ್ರ ! ಮಹಾವಿಷ್ಣುವಿನ ಕೈಯನ್ನು ಅಲಂಕರಿಸುವ ನೀನು ಶರಣಾದವರನ್ನು ರಕ್ಷಿಸಬೇಕಲ್ಲವೆ? ಅಧರ್ಮ ಮಾಡುವ ರಾಕ್ಷಸರಿಗೆ ನೀನು ಧೂಮಕೇತು !ಆದರೆ ಧರ್ಮಪರರಾದವರ ಸಂರಕ್ಷಕನೂ ನೀನೇ ಅಲ್ಲವೆ ? ಒಂದು ಪಕ್ಷ ಅಪರಾಧ ಮಾಡಿದ್ದರೂ, ಶರಣು ಹೊಕ್ಕಮೇಲೆ ಅವನನ್ನು ಕ್ಷಮಿಸಲೇಬೇಕು. ಶರಣಾಗತನಾದ ಈ ಋಷಿಯನ್ನು ಕಾಪಾಡಿ ನನ್ನ ವಂಶವನ್ನು ಉಳಿಸು. ಇಲ್ಲದಿದ್ದಲ್ಲಿ ಬ್ರಹ್ಮಹತ್ಯಾದೋಷದಿಂದ ನನ್ನ ವಂಶವೇ ನಾಶವಾದೀತು! ನಾನು ಇದುವರೆಗೆ ಸಂಪಾದಿಸಿರುವ ಪುಣ್ಯವೆಲ್ಲವೂ ಸೇರಿ ಈ ಋಷಿಯನ್ನು ಸಂರಕ್ಷಿಸಲಿ! ಎಂದನು. ಆತನ ಬಾಯಿಂದ ಈ ಮಾತುಗಳು ಹೊರಬೀಳುವಷ್ಟರಲ್ಲಿ ಚಕ್ರವು ಶಾಂತವಾಯಿತು, ದುರ್ವಾಸನು ಮೇಲಕ್ಕೆದ್ದು ಅಂಬರೀಷನನ್ನು ಬಾಯ್ತುಂಬ ಹೊಗಳಿ ಹರಸಿದನು. ಮಹಾರಾಜನು ಆತನ ಮುಂದೆ ಅಡ್ಡಬಿದ್ದು 'ಮಹಾನುಭಾವ, ಈಗ ನಡೆದುದನ್ನು ಮರೆತುಬಿಡೋಣ. ನೀನು ನನ್ನ ಆತಿಥ್ಯವನ್ನು ಸ್ವೀಕರಿಸಿ ಊಟ ಮಾಡು' ಎಂದು ಪ್ರಾರ್ಥಿಸಿದನು. ಋಷಿಯು ರಾಜನಿತ್ತ ರುಚಿಕರವಾದ ಆಹಾರವನ್ನು ಹೊಟ್ಟೆತುಂಬ ಊಟಮಾಡಿ, ಆತನನ್ನು ಹೊಗಳಿ ಹರಸುತ್ತಾ ಅಲ್ಲಿಂದ ಬ್ರಹ್ಮಲೋಕಕ್ಕೆ ಹಿಂದಿರುಗಿದನು.

ಇಷ್ಟೆಲ್ಲ ನಡೆಯುವುದಕ್ಕೆ ಒಂದು ವರ್ಷ ಹಿಡಿಯಿತು. ಅಂಬರೀಷನು ಅಲ್ಲಿಯವರೆಗೆ ಉಪವಾಸವಿದ್ದನು. ದುರ್ವಾಸ ಋಷಿಯನ್ನು ಬೀಳ್ಕೊಟ್ಟಮೇಲೆ ಆತನು ಊಟಮಾಡಿದನು. ಇದಾದ ಕೆಲವು ದಿನಗಳಮೇಲೆ ಆತನು ತನ್ನ ರಾಜ್ಯವನ್ನು ಮಕ್ಕಳಿಗೊಪ್ಪಿಸಿ, ತಾನು ತಪೋವನಕ್ಕೆ ಹೋಗಿ ಭಗವಂತನ ಧ್ಯಾನದಲ್ಲಿ ತತ್ಪರನಾದನು..

ಆನೋ ಭದ್ರಾಃ ಕೃತವೋಯಂತು ವಿಶ್ವಥಃ ಅಂತರ್ಜಾಲದಿಂದ ಪಡೆದದ್ದು

# ಇಂದು ಬೇಕಾಗಿದ್ದಾರೆ, ಇಂತಹ ವಿದ್ಯಾರ್ಥಿಗಳು!

ಕಲ್ಕತ್ತಾದ ಕ್ರಾಂತಿಕಾರಿಗಳ ಭರ್ತಿ ಕೇಂದ್ರವಾದ 'ಯುಗಾಂತರ ಗೋಷ್ಠಿ'ಯಲ್ಲಿ ಸುಶೀಲಚಂದ್ರ ಸೇನ್ ಮತ್ತು ವೀರೇನ್ ಸೇನ್ ಎಂಬ ಇಬ್ಬರು ವಿದ್ಯಾರ್ಥಿ ಸಹೋದರರಿದ್ದರು. ಆಂಗ್ಲ ನ್ಯಾಯಾಧೀಶ ಕಿಂಗ್ಸ್ ಫೋರ್ಡ್‌ನ ನ್ಯಾಯಾಲಯದಲ್ಲಿ ಪ್ರಸಿದ್ಧ ನಾಯಕ ಬಿಪಿನಚಂದ್ರಪಾಲರಿಗೆ 6 ತಿಂಗಳ ಶಿಕ್ಷೆ ನೀಡಲಾಗಿತ್ತು. ಅದು 'ವಂಗ ಭಂಗ'ದ ವಿರುದ್ಧ ಚಳುವಳಿಯ ಯುಗವಾಗಿತ್ತು. 'ವಂದೇ ಮಾತರಂ' ವಾರ್ತಾಪತ್ರಿಕೆಯಲ್ಲಿ ಈ ಬಗ್ಗೆ ಪಾಲರ ಲೇಖನ ಪ್ರಕಟವಾದುದೇ ಅವರಿಗೆ ಶಿಕ್ಷೆ ವಿಧಿಸಲು ಕಾರಣ. ಲೇಖನವನ್ನು ಆಂಗ್ಲರು ಆಪತ್ಕಾರಿ ಎಂದು ಭಾವಿಸಿದರು. ಇದರೊಂದಿಗೆ ಕಿಂಗ್ಸ್ ಫೋರ್ಡ್ ದೇಶಭಕ್ತರಿಗೆ ಕಿರುಕುಳ ಕೊಡುವುದರಲ್ಲಿ ಕುಖ್ಯಾತನಾಗಿದ್ದ.

1902ರ ಆಗಸ್ಟ್ 26ರಂದು ಶಿಕ್ಷೆಯ ಆಜ್ಞೆಯಾದೊಡನೆ ಬಿಪಿನಚಂದ್ರಪಾಲರು ನ್ಯಾಯಾಲಯದಿಂದ ಹೊರಗೆ ಬರುತ್ತಿದ್ದಂತೆ ಸಾವಿರಾರು ಕಂಠಗಳು ಒಟ್ಟಿಗೆ ಅವರಿಗೆ ಅಭಿನಂದನೆ ಸಲ್ಲಿಸುತ್ತ 'ವಂದೇ ಮಾತರಂ' ಘೋಷಣೆಗಳನ್ನು ಹಾಕಿದರು. ಆಂಗ್ಲ ಸರ್ಕಾರವು ಇದನ್ನು ಹೇಗೆ ತಾನೆ ಸಹಿಸೀತು! ಪೊಲೀಸರು ಜನರ ಮೇಲೆ ಮುಗಿಬಿದ್ದರು. ಎಡ್ಡಾದಿಡ್ಡಿ ಲಾಠಿಗಳನ್ನು ಬೀಸತೊಡಗಿದರು. ಯಾರೋ ಒಬ್ಬ ಮುದುಕನ ಕೈ ಮುರಿದರೆ ಇನ್ನೊಬ್ಬ ಯುವಕನ ತಲೆ ಒಡೆಯಿತು. ಆದರೂ ಲಾಠಿಚಾರ್ಜು ಮಾತ್ರ ನಿಲ್ಲಲಿಲ್ಲ. ಅಲ್ಲಿ ಇದ್ದ ಸುಶೀಲನಿಗೆ ನಿರಪರಾಧಿ ಸ್ವಬಾಂಧವರ ಮೇಲೆ ನಡೆಯುತ್ತಿದ್ದ ಅತ್ಯಾಚಾರವನ್ನು ನೋಡಲಾಗಲಿಲ್ಲ. ಅವನು ಎರಡೂ ಕೈಗಳನ್ನೆತ್ತಿ ಜೋರಾಗಿ ಕೂಗುತ್ತ ಅದನ್ನು ವಿರೋಧಿಸಿದ. ಆಂಗ್ಲ ಸಾರ್ಜೆಂಟನ ಬಳಿಗೆ ಹೋಗಿ "ಈ ನಿರ್ದೋಷಿಗಳ ಶರೀರವನ್ನು ರಕ್ತಮಯಗೊಳಿಸಿ ಮಾನವೀಯತೆಯನ್ನು ಏಕೆ ಅಪಮಾನಗೊಳಿಸುತ್ತೀರಿ?" ಎಂದು ಪ್ರಶ್ನಿಸಿದ. ಆದರೆ ಆ ಆಂಗ್ಲನು ಸುಶೀಲನ ಮಾತನ್ನು ಗಮನಿಸದೇ ಲಾಠೀ ಚಾರ್ಜನ್ನು ಮುಂದುವರೆಸಿದ.

ಸುಶೀಲನಿಗೆ ಕೋಪ ತಡೆಯಲಾಗಲಿಲ್ಲ. ಮುಖ ಕೆಂಪಾಯಿತು. ಅಲ್ಲಿಂದ ಹೋಗಿ ಕಿಂಗ್ಸ್ ಫೋರ್ಡ್‌ನ ಮುಖಕ್ಕೇ ಗುದ್ದಿದ. ಕೂಡಲೇ ಪೋಲೀಸನೊಬ್ಬನು ಅವನನ್ನು ಬಂಧಿಸಿದ. ಠಾಣೆಗೆ ಕರೆದೊಯ್ಯಲಾಯಿತು. ಕಿಂಗ್ಸ್ ಫೋರ್ಡನು ಸುಶೀಲನಿಗೆ 15 ಛಡಿ ಏಟುಗಳ ಶಿಕ್ಷೆ ವಿಧಿಸಿದ. ಪ್ರಹಾರವು ಅತ್ಯಂತ ಕ್ರೂರವಾಗಿತ್ತು.

ಕೇವಲ ಬಂಗಾಲದಲ್ಲೇ ಅಲ್ಲ, ಇಡೀ ಭಾರತದಲ್ಲೇ ಈ ರೀತಿ 15 ಛಡಿ ಏಟುಗಳ ಶಿಕ್ಷೆ ಪಡೆದ ಅತ್ಯಂತ ಸಣ್ಣ ವಯಸ್ಸಿನ ವಿದ್ಯಾರ್ಥಿ ಸುಶೀಲಚಂದ್ರಸೇನ. ಆಗಸ್ಟ್ 27ರಂದು 15 ವರ್ಷದ ಸುಶೀಲನನ್ನು ಕಲ್ಕತ್ತೆಯ ಪ್ರೆಸಿಡೆನ್ಸಿ ನ್ಯಾಯಾಲಯದ ಹೊರಗಿನ ತ್ರಿಕೋಣಾಕಾರದ ಸ್ಥಳಕ್ಕೆ ಕೈ-ಕಾಲು ಕಟ್ಟಿ ತರಲಾಯಿತು. ಆ ಕಟುಕನು ಪ್ರಹಾರ ಮಾಡತೊಡಗಿದ. ಸುಶೀಲನು ಪ್ರತಿಯೊಂದು ಛಡಿ ಏಟಿಗೂ 'ವಂದೇ ಮಾತರಂ' ಎಂದು ಕೂಗುತ್ತಿದ್ದ. ಈ ಘಟನೆಯು ಇಡೀ ಕಲ್ಕತ್ತೆಯ ಜನರ ಮನಸ್ಸನ್ನು ಕಲಕಿತು. ಬ್ರಹ್ಮಬಾಂಧವರು ತಮ್ಮ 'ಸಂಧ್ಯ' ಪತ್ರಿಕೆಯಲ್ಲಿ "ಸುಶೀಲನ ಚೆಲ್ಲಾಟದಿಂದಾಗಿ ಆಂಗ್ಲರು ಸಂಕಟದಲ್ಲಿ ಬಿದ್ದರು" ಎಂಬ ಶೀರ್ಷಿಕೆಯಲ್ಲಿ ಈ ಸುದ್ದಿಯನ್ನು ಪ್ರಕಟಿಸಿದರು.

ಜನರು ಹಾಗೂ ವಿದ್ಯಾರ್ಥಿಗಳು ಆಗಸ್ಟ್ 28ರಂದು ಈ ದಮನವನ್ನು ಸಾಮೂಹಿಕವಾಗಿ ವಿರೋಧಿಸಿದರು. ಅಂದು ಎಲ್ಲಾ ಶಾಲಾ-ಕಾಲೇಜುಗಳಿಗೆ ಹರತಾಳ. ಸುಶೀಲಕುಮಾರನು ಓದುತ್ತಿದ್ದ ಕಾಲೇಜಿನ ವಿದ್ಯಾರ್ಥಿಗಳು ಆ ವೀರಬಾಲಕನನ್ನು ಅಭಿನಂದಿಸಲು ಒಂದು ದೊಡ್ಡ ಸಾರ್ವಜನಿಕ ಸಮಾರಂಭವನ್ನು ಏರ್ಪಡಿಸಿದರು. ಬಂಗಾಲದ ಮಹಾನ್ ನಾಯಕ ಸುರೇಂದ್ರನಾಥ ಬ್ಯಾನರ್ಜಿಯವರು ಕಳುಹಿಸಿದ್ದ ಒಂದು ಸುವರ್ಣ ಪದಕವನ್ನು ಅಲ್ಲಿ ಸುಶೀಲನಿಗೆ ನೀಡಲಾಯಿತು. ಇದಕ್ಕೆ ಮೊದಲು ಕಲ್ಕತ್ತಾದ ರಸ್ತೆಗಳಲ್ಲಿ ಸುಶೀಲನ ಭವ್ಯ ಮೆರವಣಿಗೆ ನಡೆಯಿತು.

ಅನಂತರ ಸುಶೀಲನ 'ಯುಗಾಂತರ ಗೋಷ್ಠಿ'ಯು ಕಿಂಗ್ಸ್ ಫೋರ್ಡ್‌ನನ್ನು ಮುಗಿಸಲು ನಿರ್ಧರಿಸಿತು. ಆ ವೇಳೆಗಾಗಲೇ ಮುಜಫ್ಫರ್‌ನಗರಕ್ಕೆ ವರ್ಗವಾಗಿ ಹೋಗಿದ್ದ ಕಿಂಗ್ಸ್ ಫೋರ್ಡ್‌ನನ್ನು ಯಮಸದನಕ್ಕೆ ಅಟ್ಟಲು ಖುದಿರಾಮ ಬೋಸ್ ಮತ್ತು ಪ್ರಫುಲ್ಲ ಚಾಕಿಯನ್ನು ಕಳುಹಿಸಲಾಯಿತು. ಖುದಿರಾಮ ಮತ್ತು ಚಾಕಿ ಕಿಂಗ್ಸ್ ಫೋರ್ಡ್‌ನ ಗಾಡಿಯ ಮೇಲೆ ಬಾಂಬನ್ನು ಎಸೆದರು. ಆದರೆ ಗಾಡಿಯಲ್ಲಿ ಕಿಂಗ್ಸ್ ಫೋರ್ಡ್ ಇರಲಿಲ್ಲ. ಇಬ್ಬರು ಅಮೇರಿಕನ್ನರು ಇದ್ದರು. ಬಾಂಬ್ ಅವರನ್ನು ಆಹುತಿ ತೆಗೆದುಕೊಂಡಿತು. ಖುದಿರಾಮನಿಗೆ ಫಾಸಿ ವಿಧಿಸಲಾಯಿತು. ಚಾಕಿಯನ್ನು ಪೊಲೀಸರು ಸುತ್ತುವರೆದಾಗ ಅವನು ಸ್ವತಃ ಗುಂಡು ಹಾರಿಸಿಕೊಂಡು ವೀರಸ್ವರ್ಗ ಸೇರಿದ. ಇದರಿಂದಾಗಿ ಪೊಲೀಸರಿಗೆ ಮಾತ್ರ 'ಯುಗಾಂತರ ಗೋಷ್ಠಿ'ಯ ಬಗೆಗೆ ಯಾವ ಸುಳಿವೂ ದೊರೆಯದಾಯಿತು. 'ಆಂಗ್ಲರ ಅತ್ಯಾಚಾರವನ್ನು ತಾವು ಬದುಕಿರುವವರೆಗೂ ಸಹಿಸುವುದಿಲ್ಲ' ಎನ್ನುವುದೇ ಕ್ರಾಂತಿಕಾರಿಗಳ ವ್ರತವಾಗಿತ್ತು.

**ಇಂತಹ ಸತ್ಸಾಹಸೀ ವಿದ್ಯಾರ್ಥಿಗಳ ಬಗ್ಗೆ ಯಾರಿಗೆ ತಾನೆ ಹೆಮ್ಮೆಯಾಗದು!**

"ತ್ಯಾಗದಿಂದಲೇ ಮನಸ್ಸು ಭಗವತ್ಪ್ರೀತಿಗೆ ಪಾತ್ರವಾಗುವುದು"

ಪರಮಪೂಜ್ಯ ಶ್ರೀ ಮಾರುತಿ ಗುರೂಜಿ



ಭಾರತದ ಮೆಟ್ರೋ ರೈಲಿನ ಪಿತಾಮಹ – ಇ.ಶ್ರೀಧರನ್

**ಸುಂದರಕಾಂಡದ ಸೌಂದರ್ಯ**

# ಶ್ರೀ ವೀರಾಂಜನೇಯ

ಲೇ॥ ರಾಮಕೃಷ್ಣ ಎನ್. ಹೆಗಡೆ

ಹನುಮಂತನಿಂದ ಚೂಡಾಮಣಿಯನ್ನು ಪಡೆದ ಶ್ರೀರಾಮನು ಸೀತಾದೇವಿಯು ಹೇಳಿದ ಮಾತುಗಳನ್ನು ಮತ್ತೆ ಮತ್ತೆ ಕೇಳುವುದಕ್ಕೆ ಇಷ್ಟಪಡುತ್ತಾನೆ. ಏಕೆಂದರೆ ಘೋರವಾದ ರಾಕ್ಷಸರ ಮಧ್ಯದಲ್ಲಿರುವ ಸೀತೆಯು ಯಾವ ರೀತಿಯಾದ ಕಷ್ಟವನ್ನು ಅನುಭವಿಸುತ್ತಿರಬಹುದೆಂಬುದನ್ನು ಈಗಾಗಲೇ ಶ್ರೀರಾಮನು ಊಹಿಸಿದ್ದಾನೆ. ಸೀತೆಯು ಹೇಳಿರುವಂತೆ ಇನ್ನು ಒಂದು ತಿಂಗಳ ಅವಧಿಯೂ ಕೂಡ ತುಂಬಾ ದೂರವಾಗಿರುವಂತೆ ಕಾಣಿಸುತ್ತಿದೆ. ಹಾಗಾಗಿ ಈಗಲೇ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗೆಂದು ಮಾರುತಿಯನ್ನು ಪ್ರೇರೇಪಿಸುತ್ತಿದ್ದಾನೆ. ಏಕೆಂದರೆ,

ಶಾರದಸ್ತಿಮಿರೋ ಮುಕ್ತೋ ನೂನಂ ಚಂದ್ರ ಇವಾಂಬುದೈಃ।
ಆವೃತಂ ವದನಂ ತಸ್ಯಾ ನ ವಿರಾಜತಿ ರಾಕ್ಷಸೈಃ॥

ಮೋಡಗಳಿಂದ ಆವೃತವಾಗಿರುವ ಚಂದ್ರನು ಪ್ರಕಾಶಿಸಲಾರದೇ ಕತ್ತಲೆಯನ್ನು ನೀಡುತ್ತಾನೆ. ಹಾಗೆಯೇ ರಾಕ್ಷಸರಿಂದ ಆವೃತಳಾಗಿರುವ ಸೀತಾಮಾತೆಯ ಮುಖವೂ ಪ್ರಕಾಶಿಸುವುದಿಲ್ಲ. ಅವಳಿಗೆ ಆನಂದವಾಗಿ ಮತ್ತೆ ಅವಳ ಮುಖವು ಪ್ರಕಾಶಿಸಬೇಕಾದರೆ ಶ್ರೀರಾಮನ ದರ್ಶನವಾಗಬೇಕಾಗಿದೆ. ಹಾಗಾಗಿ ಬೇಗ ಸೀತೆಯನ್ನು ಕಾಣುವ ತವಕವನ್ನು ಹೊಂದುತ್ತಾನೆ. ಸೀತೆಯ ಮಾತುಗಳನ್ನು ಮತ್ತೆ ಮತ್ತೆ ಕೇಳುವುದಕ್ಕೆ ಬಯಸಿದಾಗ ಹನುಮಂತನು ಹೀಗೆ ಹೇಳುವುದಕ್ಕೆ ಪ್ರಾರಂಭಿಸುತ್ತಾನೆ,

ಇದಮುಕ್ತವತೀ ದೇವೀ ಜಾನಕೀ ಪುರುಷರ್ಷಭ।
ಪೂರ್ವವೃತ್ತಮಭಿಜ್ಞಾನಂ ಚಿತ್ರಕೂಟೇ ಯಥಾತಥಮ್॥

ಸೀತೆಯು ಪುರುಷೋತ್ತಮನಾಗಿರುವ ಶ್ರೀರಾಮನಿಗೆ ಹಿಂದೆ ಚಿತ್ರಕೂಟ ಪ್ರದೇಶದಲ್ಲಿರುವಾಗ ನಡೆದ ವೃತ್ತಾಂತವನ್ನು ನೆನಪಿಗಾಗಿ ಹೇಳಿರುವಳು. ಒಮ್ಮೆ ನಿನ್ನೊಡನೆ ಸೀತೆಯು ಸುಖವಾಗಿ ಮಲಗಿರುವ ಸಮಯದಲ್ಲಿ ಬೇಗ ಎಚ್ಚರಗೊಂಡಳು. ಅದೇ ಸಮಯದಲ್ಲಿ ಕಾಗೆಯೊಂದು ಬಂದು ಸೀತೆಗೆ ತೊಂದರೆ ಕೊಡಲಾರಂಭಿಸಿತು. ಆ ತೊಂದರೆಯನ್ನು ಸಹಿಸಿಕೊಂಡು ನಿನ್ನ ಸುಖ ನಿದ್ರೆಗೆ ಅವಳು ಅವಕಾಶ ಮಾಡಿಕೊಟ್ಟಳು. ಕಾಗೆ ಮಾಡಿದ ಗಾಯಗಳಿಂದ ರಕ್ತ ಸುರಿದು ನಿನ್ನ ಮೇಲೆ ಬಿದ್ದಾಗ ನೀನು ಎಚ್ಚರಗೊಂಡು ಸೀತೆಯ ಪರಿಸ್ಥಿತಿಯನ್ನು ನೋಡಿದೆ. ಆಗ ಸಮೀಪದಲ್ಲಿರುವ ಕಾಗೆಯನ್ನು ನೋಡಿ ಎಲ್ಲವನ್ನೂ ಅರ್ಥಮಾಡಿಕೊಂಡ ನೀನು ಆ ಕಾಗೆಯನ್ನು ಸಿಟ್ಟಿನಿಂದ ನೋಡಿದೆ. ಆ ಕಾಗೆಯ ರೂಪದಲ್ಲಿದ್ದವನು ಚಂದ್ರನ ಮಗನಾದ ಜಯಂತನಾಗಿದ್ದನು.

ಸುತಃ ಕಿಲ ಸ ಶಕ್ರಸ್ಯ ವಾಯಸಃ ಪತತಾಂ ವರಃ।
ಧನಾಂತರಚರಃ ಶೀಘ್ರಂ ಪವನಸ್ಯ ಗತೌ ಸಮಃ॥

ವಾಯುವೇಗದಲ್ಲಿ ಸಂಚರಿಸುವ ಇಂದ್ರಕುಮಾರನಾದ ಜಯಂತನು ಇನ್ನೊಂದು ಪ್ರದೇಶಕ್ಕೆ ಹಾರಿ ಹೋಗುತ್ತಾನೆ, ಆದರೆ ಶ್ರೀರಾಮನು ಅಂತಹ ದುಷ್ಟ ಕೃತ್ಯ ಮಾಡಿದ ಆ ಜಯಂತನನ್ನು ಕ್ರೂರವಾಗಿ ಶಿಕ್ಷಿಸುವುದಕ್ಕಾಗಿ ಮನಸ್ಸು ಮಾಡುತ್ತಾನೆ.

**ಮುಂದುವರಿಯುವುದು..........**

## ಮನೆ_ಮನ_ಬೆಳಗುವ_ಹೆಣ್ಣು_ಹಣತೆ



ಲೇ: ಕುಮಾರಿ ಪ್ರತಿಭಾ ಭಟ್ಟ

ಹಣತೆಯಂದದಲಿ ತಾ ತೋರುವಳು
ಪ್ರೀತಿ ಮಮತೆ ಕರುಣೆಯೆಂಬ ಎಣ್ಣೆ ಸುರಿಸಿಹಳು
ತ್ಯಾಗ ಸಹನೆ ಸಹಕಾರಗಳ ಬತ್ತಿ ಇರಿಸಿಹಳು
ನಗುವ ನಲಿವ ದೀಪ ಸುತ್ತೆಲ್ಲ ಹೊತ್ತಿಸಿಹಳು
ತನ್ನೆಲ್ಲ ಆಸೆ ಆಕಾಂಕ್ಷೆಗಳ ಸುಡುತಿಹಳು
ಆನಂದದಿ ನಂದಾದೀಪವಾಗಿ ನಿಂತಿಹಳು
ಕತ್ತಲ ಸರಿಸಿ ಬೆಳಕ ಬೆಳಗುವಳು
ತನ್ನ ತಾ ಕೊಂದು ಪರರ ಸುಖ ಕಾಪಾಡುವಳು
ತನ್ನ ಸುತ್ತೆಲ್ಲ ಸಂಕೋಲೆ ಹಾಕಿ ಪುಟ್ಟ ಗೂಡಲಿ ಕುಳಿತಿಹಳು
ಎಲ್ಲೋ ಹುಟ್ಟಿ ಬೆಳಕ ತರಿಸಿ ಇನ್ನೆಲ್ಲೋ ಉಜ್ವಲಿಸುತಿಹಳು
ಕಾಮ ಕ್ರೋಧ ಮದ ಮತ್ಸರಗಳ ಗಾಳಿಗೆ ನಡುಗಿಹಳು
ಅಬ್ಬರದಿ ಸಿಡಿದು ಎಲ್ಲ ಎದುರಿಸಿ ನಡೆದಿಹಳು

ತನ್ನಿಂದ ಹಲವು ದೀಪಗಳ ಬೆಳಗಿಹಳು
ವಿಧ ವಿಧ ಪಾತ್ರಗಳ ತಾ ನಡೆಸಿ ಬದುಕಿಹಳು
ಸ್ವಚ್ಛಂದ ಬದುಕಿಗೆ ಕಡಿವಾಣ ಪಡೆದಿಹಳು
ತನ್ನ ಬುಡದಲಿ ಕತ್ತಲಿರಿಸಿ ತನ್ನವರಿಗೆ ಬೆಳಕಾಗಿಹಳು

ಸರಿಸಾಟಿ ನಿನಗುಂಟೆ ಈ ಜಗದೊಳು
ನೀನಿರದೆ ಸಾಗುವುದು ಬದುಕು ಕತ್ತಲೊಳು
ಅನುದಿನವೂ ತನ್ನವರ ಒಳಿತ ಕಾಯುವಳು
ಮನೆ ಮನ ಬೆಳಗುವ ಹೆಣ್ಣು ಹಣತೆ ಇವಳು



ಭಾರತದ ಬಾಹ್ಯಕಾಶ ಯೋಜನೆಯ ಪಿತಾಮಹ – ವಿಕ್ರಂ ಸಾರಾಭಾಯಿ



**ಶ್ರೀ ವಿಶ್ವವೀರಾಂಜನೇಯ ಮಹಾಸಂಸ್ಥಾನಮ್, ಹೇಮಪುರ ಮಹಾಪೀಠಮ್**
**ಶ್ರೀಕ್ಷೇತ್ರ ಬಂಗಾರಮಕ್ಕಿ, ಪೋ: ಗೇರಸೊಪ್ಪಾ, ತಾ: ಹೊನ್ನಾವರ, (ಉ.ಕ)**

# ಶರಾವತಿ ಕಲ್ಪವಾಸ

(2 ಏಪ್ರಿಲ್ 2019 ರಿಂದ 13 ಏಪ್ರಿಲ್ 2019ವರೆಗೆ) ಮತ್ತು

# ಶರಾವತಿ ಕುಂಭ

(14 ಏಪ್ರಿಲ್ 2019 ರಿಂದ 16 ಏಪ್ರಿಲ್ 2019ವರೆಗೆ)



ಭಕ್ತ ಮಹಾಜನರೇ.........

ಬಂಗಾರಮಕ್ಕಿ ಶ್ರೀ ವಿಶ್ವವಿಜಯೀ ವೀರಾಂಜನೇಯ ಕ್ಷೇತ್ರದ ತತ್ವಾವಧಾನದಲ್ಲಿ ಪುಣ್ಯ ನದಿ ಶರಾವತೀ ತೀರದಲ್ಲಿ ಶ್ರೀ ವನವಾಸಿ ಸೀತಾ ರಾಮ ಲಕ್ಷ್ಮಣ ಮಂದಿರ, ಶಿವ ಮಂದಿರ, ನಾಗ ಮತ್ತು ಚೌಡಿ ಪ್ರತಿಷ್ಠಾಪನೆಯೊಂದಿಗೆ 2016 ರಲ್ಲಿ ಚೈತ್ರ ಶುದ್ಧ ದಶಮಿಯಿಂದ ತ್ರಯೋದಶಿವರೆಗೆ ಶರಾವತಿ ನದಿಯಲ್ಲಿ ಪುಣ್ಯಸ್ನಾನದ ಪರಂಪರೆ ಆರಂಭವಾಗಿದ್ದು **'ಶರಾವತಿ ಕುಂಭ'** ಎಂಬ ಹೆಸರಿನಲ್ಲಿ ಗುರುತಿಸಲ್ಪಟ್ಟು ಭಕ್ತ ಜನರನ್ನು ಸೆಳೆಯುತ್ತಿದೆ. **ಈ ವರ್ಷದ ಶರಾವತಿ ಕುಂಭವು** ವಿಕಾರಿ ಸಂವತ್ಸರ ಚೈತ್ರ ಶುದ್ಧ ನವಮಿ (14-02-2019) ರಿಂದ ದ್ವಾದಶಿ (16-04-2019)ರವರೆಗೆ ನಡೆಯಲಿರುವುದು.

ಈ ವರ್ಷದಿಂದ ಶರಾವತಿ ಕುಂಭದ ಪೂರ್ವಭಾವಿಯಾಗಿ ಶರಾವತಿ ತಟದಲ್ಲಿ ವನವಾಸೀ ಸೀತಾ ರಾಮ ಲಕ್ಷ್ಮಣ, ಶಿವ, ವೀರಾಂಜನೇಯ, ನಾಗ, ಚೌಡೇಶ್ವರೀ, ಸನ್ನಿಧಿಯಲ್ಲಿ **'ಕಲ್ಪವಾಸ'**ದ ಪರಂಪರೆಗೆ ನಾಂದಿ ಮಾಡುವಂತೆ ಭಗವತ್ಪ್ರೇರಣೆಯಾಗಿದ್ದು, ವಿಳಂಬಿ ನಾಮ ಸಂವತ್ಸರ ಫಾಲ್ಗುಣ, ಕೃಷ್ಣ ಪಕ್ಷ ದ್ವಾದಶಿ (02-04-2019) ರಿಂದ ವಿಕಾರಿ ನಾಮ ಸಂವತ್ಸರ ಚೈತ್ರ ಶುದ್ಧ ಅಷ್ಟಮಿ (13-04-2019) ರವರೆಗೆ ಶರಾವತಿ ತಟದಲ್ಲಿ **'ಕಲ್ಪವಾಸ'** ಆಯೋಜಿಸಲಾಗಿದೆ.

ಕಲ್ಪವಾಸವು ಮೂಲತಃ ವೇದಕಾಲೀನ ಅರಣ್ಯ ಸಂಸ್ಕೃತಿಗೆ ಸಂಬಂಧಿಸಿದ್ದಾಗಿದ್ದು, ವರ್ಷವಿಡೀ ತಮ್ಮ ಗೃಹಸ್ಥ, ವ್ಯಾವಹಾರಿಕ ಜೀವನದ ಜಂಜಾಟದಲ್ಲಿ ತೊಡಗಿದ್ದವರು ತಮ್ಮ ಆತ್ಮಶುದ್ಧಿ ಮತ್ತು ಆಧ್ಯಾತ್ಮಿಕ ಉನ್ನತಿಗಾಗಿ ಕೆಲವು ದಿನಗಳ ಮಟ್ಟಿಗೆ ಅರಣ್ಯ ಪ್ರದೇಶದಲ್ಲಿ, ನದಿ ತಟದಲ್ಲಿ, ಪರ್ಣಕುಟೀರಗಳಲ್ಲಿ, ವಾಸವಾಗಿದ್ದು ಆಧ್ಯಾತ್ಮಿಕ ಸಾಧನೆಯಲ್ಲಿ ತಲ್ಲೀನವಾಗಿರುವುದನ್ನು ಕಲ್ಪವಾಸ ಎನ್ನಲಾಗುತ್ತದೆ.

ಪದ್ಮ ಪುರಾಣದ ಪ್ರಕಾರ ಕಲ್ಪವಾಸದ ಅವಧಿಯಲ್ಲಿ ಸದಾಚಾರಿಯಾಗಿದ್ದು ಶಾಂತ ಮನಸ್ಸಿನಿಂದ ಕೂಡಿದ್ದು ಜಿತೇಂದ್ರಿಯನಾಗಿ, ತಪಸ್ಸು, ಹೋಮ ಮತ್ತು ದಾನ ಕಾರ್ಯಗಳನ್ನು ಮಾಡುತ್ತಿರಬೇಕು. ಮತ್ಸ್ಯ ಪುರಾಣದ ಪ್ರಕಾರ, ಪರ್ಣ ಕುಟೀರದಲ್ಲಿ ವಾಸ, ದಿನಕ್ಕೊಂದು ಬಾರಿ ಸಾತ್ವಿಕ ಭೋಜನ ಮಾಡುತ್ತಾ, ಧೈರ್ಯ, ಅಹಿಂಸೆ ಮತ್ತು ಭಕ್ತಿ ಭಾವದಿಂದ ಸಂತರೊಂದಿಗೆ ಸತ್ಸಂಗದಲ್ಲಿ ನಿರತನಾಗಿರಬೇಕು.

ಪುನರ್ಜನ್ಮ ಬಯಸುವವರಿಗೆ ಮುಂದಿನ ಜನ್ಮದಲ್ಲಿ ರಾಜಯೋಗ ಮತ್ತು ಮೋಕ್ಷ ಬಯಸುವವರಿಗೆ ಈ ಜನ್ಮದ ಕೊನೆಗೆ ಮೋಕ್ಷ ಪ್ರಾಪ್ತಿ ಕಲ್ಪವಾಸದ ಫಲ ಎಂದು ಹೇಳುತ್ತದೆ ಮತ್ಸ್ಯ ಪುರಾಣ.

ವಿಳಂಬಿ ಸಂವತ್ಸರದ ಫಾಲ್ಗುಣ ಕೃಷ್ಣ ಪಕ್ಷ (02-04-2019) ರಂದು ಪ್ರಾತಃಕಾಲ ಶುಚಿರ್ಭೂನರಾಗಿ, ಶರಾವತಿ ಮೂಲದಲ್ಲಿ ಪುಣ್ಯ ನದಿಯ ಅರ್ಚನೆ ಮಾಡಿ, ಕಲ್ಪವಾಸಕ್ಕೆ ಅನುಮತಿ ಪಡೆದು, ಬಂಗಾರಮಕ್ಕಿಗೆ ಪ್ರಯಾಣ ಮಾಡಿ ಅಲ್ಲಿ 10 ಘಂಟೆಗೆ ಧ್ವಜಾರೋಹಣ ಮಾಡಿ, ಕಲ್ಪವಾಸದ ಸಂಕಲ್ಪ ಮಾಡಿ ನದಿಯಲ್ಲಿ ತೀರ್ಥಸ್ನಾನ ಮಾಡಿ, ತುಲಸಿ ಸ್ಥಾಪನೆ, ಬೀಜಾರೋಪಣ ಮತ್ತು ಸಾಲಿಗ್ರಾಮ ಸ್ಥಾಪನೆಯೊಂದಿಗೆ ಕಲ್ಪವಾಸ ಆರಂಭವಾಗುತ್ತದೆ. ಕಲ್ಪವಾಸದ ಕೊನೆಯಲ್ಲಿ ತುಲಸಿಯನ್ನು ನದಿಯಲ್ಲಿ ಪ್ರವಹಿಸಿ, ಧಾನ್ಯದ ಗಿಡಗಳನ್ನು ಮನೆಗೆ ಒಯ್ಯಲಾಗುತ್ತದೆ. ಪ್ರತ್ಯೇಕ ಸಾಲಿಗ್ರಾಮ ಸ್ಥಾಪಿಸಿದವರು ಅದನ್ನು ತಮ್ಮೊಂದಿಗೆ ಒಯ್ಯಬಹುದು.

ಕಲ್ಪವಾಸದ ಅವಧಿಯಲ್ಲಿ ಪ್ರತಿದಿನ ನಿಶ್ಚಿತ ಮುಹೂರ್ತಗಳಲ್ಲಿ, ತ್ರಿಕಾಲ ಸ್ನಾನ, ಸಂಧ್ಯಾವಂದನೆಗಳನ್ನು ಮಾಡುವುದಲ್ಲದೆ, ಧ್ಯಾನ, ಜಪ, ತಪ, ಹೋಮ, ಶಿವನಿಗೆ ಅಭಿಷೇಕ, ದೇವದರ್ಶನ, ಪೂಜೆ, ಅರ್ಚನೆ, ಭಜನೆ, ಕೀರ್ತನೆ, ಪಾಠ, ಪಾರಾಯಣ, ಸತ್ಸಂಗದಲ್ಲಿ ಇಡೀದಿನವನ್ನು ಕಳೆಯಲಾಗುತ್ತದೆ.

ಸಾಮಾನ್ಯವಾಗಿ ಕಲ್ಪವಾಸಿಗಳು ಸ್ವಯಂಪಾಕ ಮಾಡಿ, ದಿನಕ್ಕೊಂದೇ ಬಾರಿ ಸಾತ್ವಿಕ ಭೋಜನ, ಫಲಹಾರ ಯಾ ನಿರಾಹಾರ ವ್ರತಗಳನ್ನು ಕೈಗೊಳ್ಳುತ್ತಾರೆ.

ವ್ಯಕ್ತಿಗತ ಆರೋಗ್ಯ, ಶಾರೀರಿಕ ದುರ್ಬಲತೆ ಮೊದಲಾದ ಕಾರಣಗಳಿಗಾಗಿ, ಸ್ವಯಂಪಾಕ ಮಾಡಲು ಸಾಧ್ಯವಿಲ್ಲದವರಿಗೆ ಸಿದ್ಧ, ಸಾಮೂಹಿಕ ಭೋಜನದಲ್ಲೂ ಪಾಲ್ಗೊಳ್ಳುವ ಅನುಕೂಲತೆಯನ್ನು ಇಲ್ಲಿ ಒದಗಿಸಲಾಗುವುದು.

ಕಲ್ಪವಾಸದ ಕ್ಷೇತ್ರ ಮಿತಿಯಲ್ಲಿ ಯಾವುದೇ ರೀತಿಯ ದುರ್ವ್ಯಸನಗಳಿಗೆ ಆಸ್ಪದವಿರುವುದಿಲ್ಲ. ಇಲ್ಲಿ ಸಂಪೂರ್ಣ ಶಾಂತಿ, ಮೌನವನ್ನು ಪಾಲಿಸಬೇಕಾಗಿದ್ದು ಸತ್ಸಂಗ, ಪ್ರವಚನ, ಭಜನೆ ಕೀರ್ತನೆಗಳಲ್ಲಿ ಧ್ವನಿ ವರ್ಧಕಗಳ ಬಳಕೆಗೆ ಅನುಮತಿ ಇರುವುದಿಲ್ಲ. ಕ್ಷೇತ್ರ ಮಿತಿಯೊಳಗೆ ಮೊಬೈಲ್ ಪ್ರಯೋಗವು ನಿಷಿದ್ಧವಾಗಿದ್ದು ಮೊಬೈಲನ್ನು ದೂರವೇ ಬಿಟ್ಟು ಬರುವುದು ಅಪೇಕ್ಷಣೀಯ. ಅನಿವಾರ್ಯ ಕಾರಣಗಳಿಗಾಗಿ ಮೊಬೈಲ್ ಕರೆ ಸ್ವೀಕರಿಸಬೇಕಾಗಿ ಬಂದಲ್ಲಿ ಅದಕ್ಕಾಗಿಯೇ ಒಂದು ಸ್ಥಳ ನಿಗದಿಪಡಿಸಲಾಗಿದ್ದು ಅಲ್ಲಿ ಹೋಗಿಯೇ ಸಂಭಾಷಣೆ ನಡೆಸಬೇಕಲ್ಲದೇ, ತಮ್ಮ ಕುಟೀರಗಳಲ್ಲಿ ಅಥವಾ ಕಲ್ಪವಾಸ ಕ್ಷೇತ್ರದಲ್ಲಿ ಸಂಭಾಷಣೆ ನಿಷೇಧಿಸಲಾಗಿದೆ. ಹೊರಗಿನಿಂದ ಅತ್ಯಾವಶ್ಯಕ ಸಂದೇಶಗಳನ್ನು ಕಳುಹಿಸಬೇಕಾಗಿದ್ದಲ್ಲಿ ಅದಕ್ಕಾಗಿ ಒಂದು ವಿಶೇಷ ದೂರವಾಣಿ ಸಂಖ್ಯೆಯನ್ನು ನಿಗದಿಪಡಿಸಲಾಗಿದೆ.

ದಂಪತಿಗಳಿಗೆ, ಗಂಡಸರಿಗೆ, ಹೆಂಗಸರಿಗೆ, ಸಾಧು ಸಂತರಿಗೆ ಪ್ರತ್ಯೇಕ ಪ್ರತ್ಯೇಕ ನಿವೇಶನಗಳಲ್ಲಿ ಕುಟೀರಗಳ ವ್ಯವಸ್ಥೆ ಮಾಡಲಾಗುತ್ತದೆ.

ಈ ಕಲ್ಪವಾಸದ ಸಮಯದಲ್ಲಿ ದಾನಕ್ಕೆ ವಿಶೇಷ ಮಹತ್ವವಿದ್ದು ಗೋದಾನ, ಅನ್ನದಾನ, ವಿದ್ಯಾದಾನ ಮಾಡಲಿಚ್ಛಿಸುವವರಿಗೆ ಅನುಕೂಲತೆಗಳನ್ನು ಒದಗಿಸಿಕೊಡಲಾಗುವುದಲ್ಲದೇ ಗೋಸೇವೆ, ರುಗ್ಣಸೇವೆ, ಸಮಾಜಸೇವೆ, ಸಂತಸೇವೆಗಳ ಮೂಲಕ ಸೇವಾಸಾಧನೆ ಮಾಡುವವರಿಗೂ ಅವಕಾಶ ಕಲ್ಪಿಸಿಕೊಡಲಾಗುವುದು.

ಸ್ನಾನಕಾಲದಲ್ಲಿ ಸಂಕಲ್ಪ, ವೈದಿಕ ಹೋಮಹವನ, ಪೂಜಾ ಅರ್ಚನೆ, ಸತ್ಯನಾರಾಯಣ ವ್ರತ, ಸತ್ಯಗಣಪತಿ ವ್ರತ, ಸತ್ಯಮಾರುತಿ ವ್ರತ, ರುದ್ರಪಠನ ಸಹಿತ ಶಿವಪೂಜೆಗಳಿಗೆ ಮಾರ್ಗದರ್ಶನ, ಮಂತ್ರಪಠನಾದಿಗಳಿಗೆ ಪುರೋಹಿತರ ಅವಶ್ಯಕತೆಯಿದ್ದರೆ, ಲಭ್ಯತಾನುಸಾರ ವ್ಯವಸ್ಥೆ ಮಾಡಲಾಗುವುದು.

ಜಪಸಾಧನೆಯಲ್ಲಿ ತೊಡಗುವವರಿಗೆ ಅವರ ಅಪೇಕ್ಷಾನುಸಾರ ರಾಮತಾರಕಮಂತ್ರ, ಗಾಯತ್ರೀ, ಪಂಚಾಕ್ಷರೀ, ಅಷ್ಟಾಕ್ಷರೀ, ದ್ವಾದಶಾಕ್ಷರೀ, ಪಂಚದಶಾಕ್ಷರೀ ಮೊದಲಾದ ಮಂತ್ರಗಳ ಮತ್ತು ಇತರ ದೇವೀ ದೇವತೆಗಳ ಮೂಲಮಂತ್ರಗಳ ದೀಕ್ಷಾಪ್ರದಾನದ ಅನುಕೂಲತೆಗಳೂ ಲಭ್ಯವಿದೆ.

ವ್ಯಕ್ತಿಗತ ಸಾಧನೆಯ ಜೊತೆಗೆ ಸಾಮುದಾಯಿಕ ಯೋಗ, ಭಜನೆ, ಪಾಠ-ಪಾರಾಯಣ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸಬಹುದು.

ದಕ್ಷಿಣ ಭಾರತದಲ್ಲಿಯೇ ಪ್ರಪ್ರಥಮವಾಗಿ ಭಗವತ್ಪ್ರೇರಣೆಯಿಂದ ಆರಂಭವಾಗಲಿರುವ ಪ್ರಥಮ ಕಲ್ಪವಾಸದಲ್ಲಿ ಭಾಗಿಯಾಗುವ ಭಾಗ್ಯ ನಿಮ್ಮದಾಗಲಿದ್ದು, ಆದಷ್ಟು ಬೇಗನೇ ನಿಮ್ಮ ಹೆಸರನ್ನು ನೊಂದಾಯಿಸಿ, ವಾಸಕ್ಕೆ ಜಾಗ, ಕುಟೀರ, ಶೌಚಾಲಯ, ನೀರು, ವಿದ್ಯುತ್ ಮೊದಲಾದ ಅನುಕೂಲ ವ್ಯವಸ್ಥೆಗಳನ್ನು ಸಮಯಕ್ಕೆ ಸರಿಯಾಗಿ ಪೂರ್ತಿಗೊಳಿಸಲು ಸಹಕಾರಿಯಾಗುವುದರೊಂದಿಗೆ, ತಮ್ಮ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿ, ಆತ್ಮೋನ್ನತಿಯ ಮಾರ್ಗದಲ್ಲಿ ಪ್ರಗತಿಯ ಲಾಭ ಪಡೆಯಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

**1. ಶರಾವತೀ ಕುಂಭ ಏವಂ ಕಲ್ಪವಾಸ ರಾಷ್ಟ್ರೀಯ ಸಮಿತಿ**
**ಮಹಾಪೋಷಕರು:** ಪ.ಪೂ. ಶ್ರೀ ಶ್ರೀ ಮಾರುತಿ ಗುರೂಜಿ, ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಬಂಗಾರಮಕ್ಕಿ
**ಸದಸ್ಯರು:** ಶ್ರೀ ದಿಲೀಪ ದಾಸ್, ಗುವಾಹಟಿ, ಅಸ್ಸಾಂ, ಶ್ರೀ ವೆಂಕಟೇಶ ಶರ್ಮಾ, ದಾದರ್, ಬಿಹಾರ, ಶ್ರೀ ವಿನೋದ ಮಿಶ್ರಾ, ಸಾಂತಾ ಕ್ರೂಜ್, ಮುಂಬೈ, ಶ್ರೀ ರೂರ್ಕಿಚಂದ್, ಇಂಫಾಲ್, ಮಣಿಪುರ, ಶ್ರೀ ದಿನೇಶ್ ದೇವಾಂಗನ್, ರಾಯಗಡ, ಛತ್ತೀಸ್‌ಗಢ, ಶ್ರೀ ಶಶಾಂಕ ತಿವಾರಿ, ಲಕ್ನೋ, ಉತ್ತರ ಪ್ರದೇಶ, ಶ್ರೀ ಸಂಗಮಲಾಲ್ ಶುಕ್ಲಾ, ಚಿತ್ರಕೂಟ, ಉತ್ತರ ಪ್ರದೇಶ, ಶ್ರೀ ರಾಮನಿವಾಸ್ ಶ್ರೀವಾತ್ಸವ, ಗ್ವಾಲಿಯರ್, ಮಧ್ಯ ಪ್ರದೇಶ, ಶ್ರೀ ರಾಜೇಂದ್ರ ಪ್ರಸಾದ್ ಓಝಾ, ಅಮೇಠಿ, ಉತ್ತರ ಪ್ರದೇಶ, ಡಾ॥ ಸಿದ್ಧಾರ್ಥ ರೆಡ್ಡಿ, ಬೆಂಗಳೂರು, ಶ್ರೀ ಲಾಂಫ್ರಾಂಗ್ ಲಲ್ಲು, ಮಣಿಪುರ.
**2. ಶರಾವತೀ ಕುಂಭ ಏವಂ ಕಲ್ಪವಾಸ ಮಾರ್ಗದರ್ಶಕ ಮಹಾಮಂಡಳ**
**3. ಶರಾವತೀ ಕುಂಭ ಏವಂ ಕಲ್ಪವಾಸ ಸ್ಥಾನೀಯ ನಿರ್ವಹಣಾ ಸಮಿತಿ**

**ವಿ.ಸೂ.:** ತಾವು ತಮ್ಮ ಬಂಧು-ಮಿತ್ರರು ಹಾಗೂ ಸ್ನೇಹಿತವರ್ಗದಲ್ಲಿ ಫೇಸ್‌ಬುಕ್, ವಾಟ್ಸಾಪ್ ಹಾಗೂ ಇತರ ಸಾಮಾಜಿಕ ಜಾಲತಾಣಗಳ ಮೂಲಕ ಈ ಮಾಹಿತಿಯನ್ನು ಹಂಚಿಕೊಂಡು ಪ್ರೋತ್ಸಾಹಿಸಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ.

**ನೋಂದಣಿ ಮತ್ತು ಇತರ ವಿವರಗಳಿಗಾಗಿ ಸಂಪರ್ಕಿಸಿ:**
ರಾಘವೇಂದ್ರ,
ಸಾರ್ವಜನಿಕ ಸಂಪರ್ಕಾಧಿಕಾರಿ,
ಶರಾವತಿ ಕುಂಭ ಮತ್ತು ಕಲ್ಪವಾಸ-2019

ದೂರವಾಣಿ ಸಂಖ್ಯೆ: 9482094451
ಇ-ಮೇಲ್: samskruthikumbha@gmail.com

## ಸರ್ವರಿಗೂ ಆದರದ ಸ್ವಾಗತ

ಮೇಲ್ವಿಚಾರಕರು
ಶ್ರೀಕ್ಷೇತ್ರ ಬಂಗಾರಮಕ್ಕಿ

# ಪದಬಂಧ-42

**-ಶ್ರೀ ಗುರು ದಾಸ.**

**ಎಡದಿಂದ ಬಲಕ್ಕೆ :-**

1. ಶ್ರೀಕ್ಷೇತ್ರ ಬಂಗಾರಮಕ್ಕಿಯ ಬಂಗಾರದಂತ ಇನ್ನೊಂದು ಹೆಸರು -4
4. ಹೊಳಪಿನುದ ಕೂಡಿದೆ -3
6. ಪದ್ಯಗಳಲ್ಲಿ ಬರುತ್ತದೆ ಈ ಕಾಲು -3
7. ಬಹಳ ಚಿಕ್ಕ ಆನೆಯಿದು -4
9. ಕೃಷ್ಣನ ಬ್ರಾಹ್ಮಣ ಸ್ನೇಹಿತ -3
12. ತಿರುಗಿರುವ ಹೊಸವರ್ಷ ಅಥವಾ ಹೊಸ ಕಾಲ -5
13.ನಿರ್ದಿಷ್ಟ ಕ್ರಮದಲ್ಲಿ ಜೋಡಣೆಗೊಂಡ ಪದಗಳ ಸಮೂಹ-2
14. ಆಲಸ್ಯವನ್ನು ತೋ0ರು -2
16. ಕೊನೆಯಲ್ಲಿ ದೀರ್ಘವಾದ ವಿಶ್ವರೂಪ -3
18. ನಮ್ಮ ಎಡ, ಬಲ, ಹಿಂದೆ, ಮುಂದೆ ಕಾಣುವ ಪರಿಸರ -4
19. ಗ್ರೀಸ್ ಮೂಲದ ವೈದ್ಯ ಪದ್ಧತಿ -3

| | | | | | | | |
|---|---|---|---|---|---|---|---|
| 1 | 2 | | 3 | ■ | 4 | | 5 |
| ■ | | ■ | 6 | | | ■ | |
| 7 | | 8 | | ■ | 9 | 10 | |
| | ■ | | ■ | 11 | ■ | | ■ |
| 12 | | | | | ■ | 13 | |
| | ■ | | ■ | ■ | 14 | | ■ |
| ■ | 15 | ■ | 16 | | | ■ | 17 |
| 18 | | | | ■ | 19 | | |

**(ಉತ್ತರ ಮುಂದಿನ ಸಂಚಿಕೆಯುಲ್ಲಿ)**

**ಮೇಲಿಂದ ಕೆಳಕ್ಕೆ :-**

2. ನವಿಲನ್ನು ಹೋಲುವ ಸುಂದರಿಯ ಹೆಸರು -3
3. ಸಂಯೋಜಿಸಿ ಹೊಸದನ್ನು ಹುಟ್ಟುಹಾಕಿದ್ದಾರೆ -3
4. ಖಾರಖಾರವಿರುವ ಸಾಂಬಾರ ಪದಾರ್ಥ -3
5. ಗುಮ್ಮನಂತಿರುವ ಜೀತದಾಳುಗಳು -3
7. ನಾಲ್ಕು ಯುಗಗಳ ಕಾಲಾವಧಿ -4
8. ವೈದಿಕ ಭಾರತದ ಒಬ್ಬ ಬ್ರಹ್ಮರ್ಷಿ -4
10. ಕರ್ನಾಟಕದಲ್ಲಿರುವ ವಿದ್ಯಾನಗರಿ -4
11. ಹಸಿರು ತುಂಬಿರುವ ವನ -2
14. ಸೀತೆಯ ಸಹಾಯಕ್ಕೆ ನಿಂತ ಪೌರಾಣಿಕ ಪಕ್ಷಿ -3
15. ಅನ್ನದಾತನ ಕೈ ಹಿಡಿದ ಬೆಳೆ -2
16. ಯಾರೋ ಇತ್ತ ಐಶ್ವರ್ಯ -2
17. ಬಿಂದು ರೂಪದಲ್ಲಿ ತೊಟ್ಟಿಕ್ಕುತ್ತಿರುವ ನೀರು -2

ಪದಬಂಧ-41ರ ಉತ್ತರ

**ಎಡದಿಂದ ಬಲಕ್ಕೆ:-** 1.ರಥಸಪ್ತಮಿ, 3.ಕಾಲ, 4.ನುಸುಳು, 5.ಪ್ರಚಂಡನಾಗು, 7.ಅಳುಕು, 9.ಅನುಕರಣೆ, 10.ಕಿಚ್ಚು, 11.ಪಣತೊಟ್ಟು, 13.ಕಿಶೋರ, 14.ನಖ. ***** **ಮೇಲಿಂದ ಕೆಳಕ್ಕೆ:-** 1.ರಸಪ್ರಶ್ನೆ, 2.ಮಿನುಗು, 3.ಕಾಳುಗಳು, 6.ನಾಮಕರಣ, 7.ಅಣೆಕಟ್ಟು, 8.ಕುದುರೆಮುಖ, 9.ಅಚ್ಚು, 10.ಕಿಟಕಿ, 11.ಪರ, 12.ತೊವ್ವೆ.